ಅಕ್ಟೋಬರ್ : 2001

ತಿಂಗಳ ಪತ್ರಿಕೆ



ಮಾನಸ

ತಿಂಗಳ ಪತ್ರಿಕೆ

ಸಂಪುಟ : 20 ಸಂಚಿಕೆ : 9-10

ಸೆಪ್ಟೆಂಬರ್-ಅಕ್ಟೋಬರ್ : 2001

ಸಂಪಾದಕೀಯ ಮಂಡಳಿ :

ರಾಜೇಶ್ವರಿ ಎಚ್. ಎಸ್.
ಚಂಪಾವತಿ ಎಚ್. ಎಸ್., ಸರಸ್ವತಿ ದು.
ಸವಿತ ಎ., ಗೀತಾ, ವೆಂ. ವನಜಾ, ನೀಲಾಂಜನ
ಶ್ಯಾಮಲ, ಬಿ. ಎನ್. ಶಾರದ
ಹೆಚ್. ಎಸ್. ಪುಷ್ಪ, ಜಿ. ವಿ. ವೇದವಲ್ಲಿ
ಲಕ್ಷ್ಮಿ ಎ., ವತ್ಸಲಾ ವೈ.ಎಸ್.

ಸಲಹೆ - ಸಹಕಾರ :

ಇಳಾ ವಿಜಯಾ

ಮುಖಪುಟ ಚಿತ್ರ :
ಪೆತ್ರಾ ಕ್ಲಾರೆಕ್ಸ್ ಮತ್ತು ಕಮಾನ್

ವಿಳಾಸ
"ಮಾನಸ" ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ ಪೋಸ್ಟ್
ಬೆಂಗಳೂರು - 560 067
ಇ-ಮೈಲ್ : manasapathrike@yahoo.co.in

ಸೂಚನೆ : ಬಿಡಿ ಪ್ರತಿ **5-00** ರೂ.
ವಾರ್ಷಿಕ ಚಂದಾ **50-00** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ......

ಮಾನಸ ಪ್ರತಿಗಳಿಗಾಗಿ

ಮೈಸೂರು

ಮೈಸೂರಿನಲ್ಲಿರುವ ಓದುಗರು ಮಾನಸ ಪ್ರತಿಗಳಿಗಾಗಿ ಹಾಗೂ ಚಂದಾ ನವೀಕರಣಕ್ಕಾಗಿ

ಸಂಪರ್ಕಿಸಿ

ವೆಂ. ವನಜ

2329, 12ನೇ ಮೇನ್, 2ನೇ ಹಂತ
ವಿಜಯನಗರ, ಮೈಸೂರು - 570 017

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - 560 067



ಸಂಪಾದಕೀಯ

ಯುದ್ಧ ಹಾಗೂ ಮತಾಂಧತೆ ಪುರುಷ ಪ್ರಧಾನ ಆಲೋಚನೆಯ ಪಿತೃಪ್ರಧಾನ ಪರಿಕಲ್ಪನೆಗಳು. ಈ ಎರಡು ಅತಿರೇಕಗಳ ಅಮಾನುಷತೆಗೆ ಬಲಿಪಶುಗಳಾಗುತ್ತಿರುವವರು ಅಮಾಯಕ ಮುಗ್ಧ ಮಕ್ಕಳು, ಮಹಿಳೆಯರು, ನಾಗರೀಕರು.

ಯುದ್ಧ ಅಥವಾ ಮತಾಂಧತೆ ಅನಿವಾರ್ಯವೆಂಬ ಪರಿಸ್ಥಿತಿಯನ್ನು ಇಂದು ಹುಟ್ಟುಹಾಕಲಾಗುತ್ತಿದೆ. ಒಂದನ್ನು ವಿರೋಧಿಸುವವರು ಇನ್ನೊಂದರ ಪರವಾಗಿರುತ್ತಾರೆಂಬ ಸೀಮಿತ ನಿರ್ಣಯಕ್ಕೆ ಬರುವ ರಾಜಕೀಯ ಒತ್ತಡಗಳು ಉಂಟಾಗುತ್ತಿದೆ. ಯುದ್ಧ ಹಾಗೂ ಮತಾಂಧತೆ ಮಾನವೀಯ ಘನತೆಯ ಉಲ್ಲಂಘನೆಯಾಗಿದೆ.

ಅಮೆರಿಕದ ಸಾಮ್ರಾಜ್ಯಶಾಹಿ ರಾಜಕೀಯ ಕುಟಿಲ ತಂತ್ರಗಳಿಗೆ ಹಲವಾರು ರಾಷ್ಟ್ರಗಳು ಬಲಿಪಶುಗಳಾಗುತ್ತಿವೆ. ಅಮೆರಿಕಾದ ಕರಾಳ ನೀತಿ ಕಣ್ಣಿಗೆ ರಾಚುವಷ್ಟು ನಿಚ್ಚಳವಾಗಿದೆ. ಭಯೋತ್ಪಾದ ಶಕ್ತಿಗಳನ್ನು ಬೆಳೆಸುತ್ತಲೇ ಅದನ್ನು ನಿಗ್ರಹಿಸುವ ಅಮೆರಿಕಾದ ವಿದೇಶಾಂಗ ನೀತಿಯ ಕುಟಿಲತೆಯ ಹಿಂದಿರುವ ಉದ್ದೇಶ ಸ್ಪಷ್ಟವಾಗಿದೆ.

ಯುದ್ಧದಷ್ಟೇ ಅಪಾಯಕಾರಿಯಾದುದು ಮತಾಂಧತೆ. ಇದರ ಮೊದಲ ಬಲಿಪಶುಗಳು ಮಹಿಳೆಯರು. ತಾಲಿಬಾನ್ ಮಹಿಳೆಯರ ಮೇಲೆ ಹೇರಿದ್ದ ನಿಷೇಧಗಳು, ಭಾರತದಲ್ಲಿನ ಮತಾಂಧ ಶಕ್ತಿಗಳು ಮಹಿಳೆಯರ ಮೇಲೆ ಹಾಕುತ್ತಿರುವ ಸನಾತನ ಒತ್ತಡಗಳು ಪಿತೃಪ್ರಧಾನ ಮೌಲ್ಯಗಳನ್ನು ಬಲಪಡಿಸುತ್ತವೆ. ದಶಕಗಳಿಂದ ಮಹಿಳೆಯರ ಸ್ವಾತಂತ್ರ್ಯ, ಸಮಾನತೆ, ಘನತೆಗಾಗಿ ನಡೆಸಿದ ಹೋರಾಟ ಹಾಗೂ ಹೋರಾಟದ ಫಲವಾಗಿ ನಿರ್ಮಾಣವಾಗುತ್ತಿರುವ ಮೌಲ್ಯಗಳನ್ನು ದೂಳೀಪಟ ಮಾಡುತ್ತಿದೆ.

ಜಾಗತೀಕರಣದ ಹಿನ್ನೆಲೆಯಲ್ಲಿ ಮಾನವೀಯತೆಯ ಗೋರಿ ಮಾಡುತ್ತಿರುವ ಈ ಶಕ್ತಿಗಳನ್ನು ಮಾನಸ ವಿರೋಧಿಸುತ್ತದೆ. ಈ ನಿಟ್ಟಿನಲ್ಲಿ ಮಾನಸದ ರಾಜಕೀಯ ಆಲೋಚನೆಗಳನ್ನು ಈ ಸಂಚಿಕೆಯಲ್ಲಿ ಕ್ರೋಢೀಕರಿಸಲಾಗಿದೆ.

- ಸಂಪಾದಕ ಮಂಡಳಿ

ಅಮೆರಿಕಾದ ಕರಾಳ ಮುಖ



ಸೆಪ್ಟೆಂಬರ್ 11, 2001ರಂದು ಅಮೆರಿಕದ ಆರ್ಥಿಕ, ಮಿಲಿಟರಿ ಶಕ್ತಿಯ ಸಂಕೇತವಾಗಿದ್ದ ವಿಶ್ವವಾಣಿಜ್ಯ ಮಳಿಗೆ ಮತ್ತು ಪೆಂಟಗಾನ್ ಮೇಲಿನ ದಾಳಿ 6,000ಕ್ಕೂ ಹೆಚ್ಚಿನ ಜನರನ್ನು ಬಲಿ ತೆಗೆದುಕೊಂಡಿತು. ಈ ವಿಧ್ವಂಸಕರ ಕೃತ್ಯ ಖಂಡನಾರ್ಹ. ಅಮಾಯಕ ನಾಗರೀಕರ ಮಾರಣ ಹೋಮಕ್ಕೆ ಸಮರ್ಥನೆಗಳೇ ಇಲ್ಲ. ಕೃತ್ಯಕ್ಕೆ ಕಾರಣರಾದವರನ್ನು ಗುರುತಿಸಿ ವಿಚಾರಣೆಗೊಳಪಡಿಸಿ ಸೂಕ್ತಕ್ರಮ ಕೈಗೊಳ್ಳಬೇಕು. ಅಂತಹ ಪ್ರಯತ್ನ ಮಾಡದೆ ಸೇಡು ತೀರಿಸಿಕೊಳ್ಳುವೆನೆಂದು ಅಮಾಯಕ ಆಫ್‌ಘಾನಿಸ್ತಾನದ ಜನರ ಬಲಿತೆಗೆದುಕೊಳ್ಳಲು ಹೊರಟಿರುವ ಅಮೆರಿಕ ಸರ್ಕಾರದ ನಿಲುವನ್ನು ಎಲ್ಲಾ ಮಾನವೀಯ ಪ್ರಜ್ಞಾವಂತರು ಖಂಡಿಸಬೇಕು.

ಅಮಾಯಕ ನಾಗರೀಕರ ಬಲಿಗೆ ಮೂಲತಃ ಅಮೆರಿಕಾ ಸರ್ಕಾರವೇ ಕಾಣರವಾಗಿದೆ. ತನ್ನ ಕರಾಳ ಇತಿಹಾಸವನ್ನು ಮರೆಮಾಚಲು ಅಮೆರಿಕಾಧ್ಯಕ್ಷರು ತಾವು ಮಾಡಲಿರುವ ಯುದ್ಧ ಪ್ರಜಾಸತ್ತಾತ್ಮಕತೆಗಾಗಿ ನಡೆಸುವ ಯುದ್ಧವೆಂದು, ಭಯೋತ್ಪಾದನೆಯ ವಿರುದ್ಧ ಸಾರಿರುವ ಸಮರವೆಂದು, ದುಷ್ಟರ ಶಿಷ್ಟರ ನಡುವಿನ ಯುದ್ಧವೆಂದು ಘೋಷಿಸಿದ್ದಾರೆ. ವಿಧ್ವಂಸಕ ಕೃತ್ಯಕ್ಕೆ ಒಸಾಮ ಬಿನ್‌ಲಾಡೆನ್‌ನೇ ಕಾರಣವೆಂದು ಅವನನ್ನು ಬೇಟೆಯಾಡುವುದಾಗಿ ಗುಡುಗಿದ್ದಾರೆ. ತಾನೇ ಬಂದೂಕು ನೀಡಿ ಬೆಳಸಿದ ಲಾಡೆನ್‌ನೆ ಕಾರಣ ಎಂಬುದಕ್ಕೆ ಬೇಕಾದ ಪುರಾವೆ ಕುರಿತು ಯಾವ ಮಾತನ್ನೂ ಆಡುತ್ತಿಲ್ಲ. ಪುರಾವೆ ಒದಗಿಸದಿದ್ದರೂ 1945ರಿಂದಲೂ ಅಮೆರಿಕ ನಡೆಸಿರುವ ಮಾನವ ಹಕ್ಕುಗಳ ಉಲ್ಲಂಘನೆಗೆ ಜಗತ್ತೆ ಸಾಕ್ಷಿಯಾಗಿದೆ. ಅಮೆರಿಕಾದ ರಕ್ತಪಾತ ಇತಿಹಾಸವನ್ನು ಗಮನಿಸಿದರೆ ಪ್ರಜಾಸತ್ತೆಗೆ ಆತಂಕ ಒಡ್ಡಿರುವ ಭಯೋತ್ಪಾದಕ ದೇಶ ಯಾವುದೆಂದು ಯಾರಿಗಾದರೂ ಮನದಟ್ಟಾಗುತ್ತದೆ.

1962ರಲ್ಲಿ ಅಮೆರಿಕದ ವಿದೇಶಾಂಗ ಮಂತ್ರಿಗಳು ಸೆನೆಟ್ ಕಮಿಟಿಯ ಮುಂದೆ ಪಟ್ಟಿಯೊಂದನ್ನು ಮಂಡಿಸಿದರು. ಆ ಪಟ್ಟಿಯಲ್ಲಿ ಇತರ ದೇಶಗಳಲ್ಲಿ 1798 ರಿಂದ 1945ರ ವರೆಗೂ ಅಮೆರಿಕವು ನಡೆಸಿದ ಆಕ್ರಮಣಕಾರಿ ಮಧ್ಯಸ್ಥಿಕೆಗಳ ವಿವರಗಳಿದ್ದವು. ಅನೇಕ ಫ್ಯಾಸಿಸ್ಟ್ ಸರ್ಕಾರಗಳನ್ನು ಅಮೆರಿಕ ಬೆಂಬಲಿಸಿದೆ. 1930ರಲ್ಲಿ ಇಟಲಿಯ ಮುಸೋಲನಿಯು ಇಥಿಯೋಪಿಯಾದ ಮೇಲೆ ಆಕ್ರಮಣ ನಡೆಸಿದ ಸಂದರ್ಭದಲ್ಲೂ ಅಮೆರಿಕ ಇಟಲಿ ಸರ್ಕಾರಕ್ಕೆ ತೈಲ ಸರಬರಾಜು ಮಾಡಿತು. ಸ್ಪೇನಿನಲ್ಲಿ ಜನರಲ್ ಫ್ರಾಂಕೊ ವಿರುದ್ಧ ನಡೆಯುತ್ತಿದ್ದ ಅಂತರ್‌ಯುದ್ಧದ ಸಂದರ್ಭದಲ್ಲಿ ಅಲ್ಲಿನ ರಿಪಬ್ಲಿಕನ್ ಸರ್ಕಾರಕ್ಕೆ ಸಹಾಯ ನೀಡುವುದನ್ನು ನಿಲ್ಲಿಸಿತು. ಚುನಾಯಿತ ಸರ್ಕಾರಗಳನ್ನು ಉರುಳಿಸಲು ನಡೆದ ಅನೇಕ ಮಿಲಿಟರಿ ಸಂಚುಗಳನ್ನು ಅಮೆರಿಕ ಬೆಂಬಲಿಸಿದೆ. ಇಂತಹ ಸಂಚಿಗೆ 1949ರಲ್ಲಿ ಸಿರಿಯಾ, 1953ರಲ್ಲಿ ಇರಾನ್, 1973ರಲ್ಲಿ ಚಿಲಿ ಸರ್ಕಾರಗಳು ಬಲಿಯಾದವು. ಚಿಲಿಯ ಜನರಿಂದ ಅಧ್ಯಕ್ಷನಾಗಿ ಚುನಾಯಿಸಲ್ಪಟ್ಟಿದ್ದ ಸಾಲ್ವಡಾರ್ ಅಲೆಂಡೆಯನ್ನು CIA ಏಜೆಂಟುಗಳು ಕೊಂದು ಹಾಕಿದರು. ಕ್ಯೂಬಾದ ಫಿಡಲ್ ಕ್ಯಾಸ್ಟ್ರೋ, ಇರಾಕಿನ ಅಬ್ದುಲ್ ಕಾಸಿಂ ಹಾಗೂ ಇನ್ನಿತರ ನಾಯಕರುಗಳನ್ನು ಕೊಲ್ಲಲು ಅಮೆರಿಕ ಇನ್ನಿಲ್ಲದಂತೆ ಪ್ರಯತ್ನಿಸಿ ಸೋತಿದೆ. ಲೆಕ್ಕವಿಲ್ಲದಷ್ಟು ಜನರನ್ನು, ರಾಜಕೀಯ ಪ್ರತಿರೋಧಿಗಳನ್ನು, ಎಡಪಂಥಿಯರನ್ನು ಕೊಂದು ಹಾಕಿರುವ ದಮನಕಾರಿ ನಾಯಕರುಗಳನ್ನು ಅಮೆರಿಕ ನಾಚಿಕೆ ಇಲ್ಲದೆ ಬೆಂಬಲಿಸಿದೆ. ದ.ಆಫ್ರಿಕಾದ ಜನಾಂಗ ಭೇದ ಸರ್ಕಾರಗಳು, ಹೈಥಿಯಲ್ಲಿ ಬೇಬಿಡಾಕ್ ದುವಲಿಯರ್, ಜೈರಿಯಲ್ಲಿ ಮೊಬುಟು ಸೆಸೆಕೊ, ಪನಾಮದಲ್ಲಿ ಮ್ಯಾನುಯೆಲ್ ನೊರಿಗಾ, ಫಿಲಿಪೈನ್ಸ್‌ನಲ್ಲಿ ಫರ್ಡಿನೆಂಡ್ ಮಾರ್ಕೋಸ್, ಇರಾನಿನ ಷಾ, ಉಗಾಂಡದ ಈದಿ ಅಮಿನ್, ಚಿಲಿಯಲ್ಲಿ ಅಗಸ್ಟೊ ಪಿನೋಚೆಟ್ ಹೀಗೆ ಪಟ್ಟಿ ಬೆಳೆಯುತ್ತಲೆ ಹೋಗುತ್ತದೆ.

1965ರಲ್ಲಿ ಇಂಡೋನೇಸಿಯಾದಲ್ಲಿ ಅಮೆರಿಕದ ಕೈಗೊಂಬೆಯಾಗಿದ್ದ ಸರ್ಕಾರದಿಂದ ಒಂದು ಮಿಲಿಯನ್‌ಗಿಂತಲೂ ಹೆಚ್ಚಿನ ಸಂಖ್ಯೆಯ ಕಮ್ಯುನಿಸ್ಟ್ ಪಕ್ಷದ ಸದಸ್ಯರು, ಬೆಂಬಲಿಗರು ಹತರಾದರು. ಅಮೆರಿಕಾದ ಮಿಲಿಟರಿ ಸಲಹೆಗಾರರೇ ಸದಸ್ಯರ, ಬೆಂಬಲಿಗರ ಹೆಸರುಗಳನ್ನು ತಿಳಿಸುತ್ತಿತ್ತು. ಮಿಲಿಟರಿ ಸಲಹೆಗಾರರ

ಸಹಕಾರದಿಂದಲೆ ಇರಾಕಿ ಬಾ-ಆತ್ ಪಾರ್ಟಿಯು 1963ರಲ್ಲಿ ಸಾವಿರಾರು ಕಮ್ಯುನಿಸ್ಟರನ್ನು ಕೊಂದು ಹಾಕಿತು. 35 ವರ್ಷಗಳಿಂದಲೂ ಅಮೆರಿಕ ಧನ ಸಹಾಯ, ಶಸ್ತ್ರಾಸ್ತ್ರಗಳ ಸರಬರಾಜು ಮಾಡುವ ಮೂಲಕ ಇಸ್ರೇಲ್ ದೇಶವನ್ನು ಬೆಂಬಲಿಸುತ್ತ ಬಂದಿದೆ. 1982ರಲ್ಲಿ ಲೆಬನಾನಿನ ಮೇಲೆ ಇಸ್ರೇಲ್ ನಡೆಸಿದ ಆಕ್ರಮಣವನ್ನು ಅಮೆರಿಕ ಸಮರ್ಥಿಸಿತು. ಆ ಆಕ್ರಮಣದಲ್ಲಿ 17,500 ಜನರು ಕೊಲ್ಲಲ್ಪಟ್ಟರು. ಪ್ಯಾಲೆಸ್ಟೇನಿನಲ್ಲಿ ಮಾರಣಹೋಮ ನಡೆಯುತ್ತಲೆ ಇದೆ. 1980ರಲ್ಲಿ ಇರಾನಿನ ವಿರುದ್ಧ ಸದ್ದಾಂ ಹುಸೇನ್ ನಡೆಸಿದ ಯುದ್ಧವನ್ನು ಬೆಂಬಲಿಸಿ ಅಮೆರಿಕ ಹಣ, ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡಿತು. ಸದ್ದಾಂ ಸಾವಿರಾರು ಖರ್ದರನ್ನು ಕೊಲೆಗೈಯ್ಯುತ್ತಿದ್ದಾಗಲೂ ಬೆಂಬಲ ನೀಡಿತು.

ತನ್ನ ಹಿತಾಸಕ್ತಿಗಳಿಗೆ ಪೂರಕವಾಗಿದ್ದಾಗ ಮಾತ್ರ ಮೂಲಭೂತವಾದಿಗಳನ್ನು ಬೆಂಬಲಿಸಿ ತನ್ನ ಹಿತಕ್ಕೆ ಧಕ್ಕೆ ಬಂದಾಗ, ಅವರು ತಿರುಗಿ ಬಿದ್ದಾಗ ಅವರನ್ನು ನಿರ್ನಾಮ ಮಾಡಲು ಅಮೆರಿಕ ಸರ್ಕಾರ ಹಿಂದು ಮುಂದು ನೋಡಿಲ್ಲ. ಈಗ ಯಾರನ್ನು ಬೇಟೆಯಾಡಲು ಹೊರಟಿದೆಯೋ ಅದೇ ಬಿನ್ ಲಾಡೆನ್‌ನನ್ನು 1980ರಲ್ಲಿ ರಷ್ಯಾದ ವಿರುದ್ಧ ಎತ್ತಿಕಟ್ಟಿ ಅವನಿಗೆ ನಿರಂತರವಾಗಿ ಶಸ್ತ್ರಾಸ್ತ್ರಗಳನ್ನು, ಹಣದ ಹೊಳೆಯನ್ನು ಹರಿಸಿ ಬೆಂಬಲಿಸಿದ್ದು ಇದೇ ಅಮೆರಿಕಾವೆ. ಅಲ್ಲದೆ ಆಫ್‌ಘಾನಿಸ್ತಾನದ ಇತರ ಮೂಲಭೂತವಾದಿ ಗುಂಪುಗಳಿಗೂ 6 ಬಿಲಿಯನ್ ಡಾಲರ್‌ಗಳನ್ನು ನೀಡಿತ್ತು. ರಷ್ಯಾದ ಪಡೆಗಳನ್ನು ಹಿಮ್ಮೆಟ್ಟಿಸಲು 1980ರಲ್ಲಿ ರೇಗನ್ ಸರ್ಕಾರ ಪ್ರತ್ಯಕ್ಷವಾಗಿ ಮಿಲಿಟರಿ ಸಹಾಯ ನೀಡಿತು. ಬೆಂಬಲಿಸಿದ ಮೂಲಭೂತವಾದಿ ಗುಂಪುಗಳೇ ಆಫ್‌ಘಾನಿಸ್ತಾನವನ್ನು ಆಳುತ್ತಿದ್ದರೂ ಅಮೆರಿಕಾ ದೊಡ್ಡಣ್ಣನಿಗೆ ಸಿಟ್ಟುಬಂದಿದೆ. ಕಾರಣ ಬೆಂಬಲಿಸಿದವರೇ ತಿರುಗಿ ಬಿದ್ದಿರುವುದಕ್ಕೆ. ಯುದ್ಧ ಮಾಡಿ ಅವರನ್ನು ಮಟ್ಟಹಾಕಿ ತಾನು ಕುಣಿಸಿದಂತೆ ಕುಣಿಯುವ ಸರ್ಕಾರ ಸ್ಥಾಪಿಸಿ ತನ್ನ ಹಿತಕಾಯುದುಕೊಳ್ಳುವ ತರಾತುರಿ ಅಮೆರಿಕಾಕ್ಕೆ. ಸಾಮ್ರಾಜ್ಯಶಾಹಿ ಅಮೆರಿಕ, ಮತಾಂಧ ತಾಲಿಬಾನ್ ಸರ್ಕಾರಗಳ ನಡುವೆ ಆಫ್‌ಘಾನಿಸ್ತಾನದ ಜನತೆ ತತ್ತರಿಸುತ್ತಿದ್ದಾರೆ. 20 ವರ್ಷಗಳ ಯುದ್ಧದಲ್ಲಿ 10 ಲಕ್ಷ ಆಫ್‌ಘಾನಿಸ್ತಾನಿಗಳು ಜೀವ ತೆತ್ತಿದ್ದಾರೆ. 50 ಲಕ್ಷ ಜನ ನಿರಾಶ್ರಿತರಾಗಿದ್ದಾರೆ, 20 ಲಕ್ಷ ಜನ ದೇಶ ಬಿಟ್ಟು ಎತ್ತಂಗಡಿ ಯಾಗಿದ್ದಾರೆ. ಈಗೇನಾದರೂ ಅಮೆರಿಕ ಅಣ್ವಸ್ತ್ರ ಪ್ರಯೋಗಿಸಿದರೆ ಇಡೀ ಉಪಖಂಡವೇ ನಾಶವಾಗಲಿದೆ.

ಅಮೆರಿಕಾದ ಯುದ್ಧ ದಾಹದ ಹಿಂದೆ ಕೆಲಸ ಮಾಡುವುದು ಆರ್ಥಿಕ ಹಿತಾಸಕ್ತಿಗಳು. ಅಮೆರಿಕಾದ ವಿದೇಶಾಂಗ ನೀತಿಯ ಆಧಾರ ಲಾಭ ದೋಚಿಕೊಳ್ಳುವುದು. 1900ರ ದಶಕದಲ್ಲಿ ಪನಾಮ ಕಾಲುವೆ ಮೇಲಿನ ಆಕ್ರಮಣ, ಗ್ವಾಟೆಮಲಾದಲ್ಲಿ ಅಮೆರಿಕದ ಹಣ್ಣಿನ ಕಂಪನಿಗಳನ್ನು ರಾಷ್ಟ್ರೀಕರಣಗೊಳಿಸಿದ ಕೂಡಲೇ 1954ರಲ್ಲಿ ಅಲ್ಲಿನ ಸರ್ಕಾರವನ್ನು ಉರುಳಿಸಿದ್ದು, ದ.ಪೂ. ಏಶಿಯಾದಲ್ಲಿನ ರಬ್ಬರ್, ಟಿನ್, ಸೆಣಬಿನ ಸಂಪನ್ಮೂಲಗಳ ಮೇಲೆ ಹಿಡಿತ ಸಾಧಿಸಲು ವಿಯಾಟ್ನಂ ಮೇಲಿನ ಆಕ್ರಮಣ, ಸೌದಿ ಅರೇಬಿಯಾವನ್ನು ಬೆಂಬಲಿಸಿದ್ದು, 1953ರಲ್ಲಿ ತೈಲವನ್ನು ರಾಷ್ಟ್ರೀಕರಣ ಮಾಡಿದ ಕೂಡಲೆ ಇರಾನಿನ ಸರ್ಕಾರವನ್ನು ಕೆಡವಿದ್ದು, ಸದ್ದಾಂ ಹುಸೇನ್‌ಗೆ ಇರಾಕ್, ಇರಾನ್ ಯುದ್ಧದಲ್ಲಿ ಬೆಂಬಲಿಸಿದ್ದು - ಇವೆಲ್ಲದರ ಹಿಂದಿನ ಮೂಲ ಉದ್ದೇಶ ಮಧ್ಯಪೂರ್ವದ ತೈಲ ಸಂಪನ್ಮೂಲದ ಮೇಲೆ ಹಿಡಿತ ಹೊಂದಲು. ಸದ್ಯದ ಸಂದರ್ಭದಲ್ಲೂ ಅಮೆರಿಕದ ಆಸಕ್ತಿ ಇರುವುದು ಆರ್ಥಿಕ ಲಾಭದ ಮೇಲೆಯೇ. ಆಫ್‌ಘಾನಿಸ್ತಾನದ ಉತ್ತರಕ್ಕಿರುವ ಆಗಾಧ ತೈಲಸಂಪನ್ಮೂಲ ತನಗೆ ಆಳಾಗಿರುವ ಸರ್ಕಾರವಿದ್ದರೆ ತನ್ನ ಕಂಪೆನಿಗಳಿಗೆ ಅನುಕೂಲಕರ ವಾತಾವರಣ ದೊರಕುವು ದೆಂಬದೂ(ದು)ರೋದ್ದೇಶ ಅಮೆರಿಕಾ ಸರ್ಕಾರದ್ದು. ಈಗಾಗಲೇ ಅಮೆರಿಕದ UNOCAL ಕಂಪೆನಿಯು ಮಧ್ಯ ಏಶಿಯಾದಿಂದ ಆಫ್‌ಘಾನಿಸ್ತಾನದ ಮೂಲಕ ಕೊಳವೆ ದಾರಿ ನಿರ್ಮಿಸುವ ಬಿಲಿಯನ್ ಗಟ್ಟಲೆ ಡಾಲರ್‌ಗಳ ಯೋಜನೆಗಾಗಿ ಕಾದು ಕುಳಿತಿದೆ. ಉಪ ಖಂಡದಲ್ಲಿ ರಷ್ಯಾ ಮತ್ತು ಚೈನಾಗೆ ಸಮೀಪವಾಗಿರುವ ಆಫ್‌ಘಾನಿಸ್ತಾನದ ಮೇಲೆ ಹಿಡಿತಹೊಂದಿರುವುದು ರಾಜಕೀಯ ದುರುದ್ದೇಶಗಳಿಗೂ ಅನುಕೂಲಕರವಾಗಿದೆ. ತೈಲದ ಮೇಲಿನ ಹಿಡಿತ ಆರ್ಥಿಕವಾಗಿ ಲಾಭದಾಯಕವಷ್ಟೇ ಅಲ್ಲದೆ, ಶಕ್ತಿ ಸಂಪನ್ಮೂಲಗಳ ಮೇಲಿನ ಹಿಡಿತದಿಂದ ಜಾಗತೀಕ ರಾಜಕೀಯದ ಮೇಲೂ ಅಧಿಪತ್ಯ ಸಾಧಿಸಬಹುದು.

ಅಮೆರಿಕಾಧ್ಯಕ್ಷರಾದ ಕೂಡಲೆ ಬುಷ್ ಅವರು N.M.D. ಯೋಜನೆಯನ್ನು ಜಾರಿಗೊಳಿಸುವುದಾಗಿ ಘೋಷಿಸಿದರು. ಶತ್ರುಗಳಿಂದ ತಮ್ಮ ದೇಶವನ್ನು ರಕ್ಷಿಸಿಕೊಳ್ಳಲು N.M.D. ಎಂಬ ಬಿಲಿಯನ್ ಗಟ್ಟಲೆ ಡಾಲರುಗಳ ಹೈಟೆಕ್ ರಕ್ಷಣಾ ಬೇಲಿ ನಿರ್ಮಿಸಿಕೊಳ್ಳಲು ಸಿದ್ಧತೆ ನಡೆಸುತ್ತಿದ್ದಾಗಲೆ ಸೆಪ್ಟೆಂಬರ್ 11ರ ವಿಧ್ವಂಸಕ ಘಟನೆ ನಡೆದು N.M.D. ಹಿಂದಿನ ನಿಜ ಉದ್ದೇಶಗಳನ್ನು ಬಯಲುಗೊಳಿಸಿದೆ. ದೇಶದ ಭದ್ರತೆಯ

ಹೆಸರಿನಲ್ಲಿ ಈ ಯೋಜನೆ ಅಮೆರಿಕಾದ ಶಸ್ತ್ರಾಸ್ತ್ರ ತಯಾರಿಸುವ ಉದ್ದಿಮೆಗಳಿಗೆ, ಮಾರಾಟ ಮಾಡುವ ದಳ್ಳಾಳಿಗಳಿಗೆ ಬಾಯಲ್ಲಿ ನಿರೂರಿಸವ ಯೋಜನೆಯಾಗಿದೆ. ಬಂದೂಕು ನೀಡಿ ಬದುಕು ನಾಶ ಮಾಡಿ ಲಾಭ ಕೊಳ್ಳೆ ಹೊಡೆಯುವುದು.

ಇವಷ್ಟೇ ಅಲ್ಲದೆ ಹಿರೋಶಿಮಾ, ನಾಗಸಾಕಿಗಳ ಮೇಲೆ 1945ರಲ್ಲಿ ಅಣುಬಾಂಬ್ ಸಿಡಿಸಿ 30,000 ಲಕ್ಷಕ್ಕೂ ಹೆಚ್ಚಿನ ಜನರನ್ನು ಬಲಿ ತೆಗೆದುಕೊಂಡು ಹುಟ್ಟಲಿರುವ ಮುಂದಿನ ಜನಾಂಗವನ್ನೇ ಊನ ಗೊಳಿಸಿದ್ದು, ಸಹಾಯ ನೀಡುವುದನ್ನು ನಿಲ್ಲಿಸಿ 50,0000 ಇರಾಕಿ ಮಕ್ಕಳ ಸಾವಿಗೆ ಕಾರಣರಾದುದಲ್ಲದೆ ಅದನ್ನು ಅವರು ತೆತ್ತ ಬೆಲೆ ಎಂದು ಬಣ್ಣಿಸಿದ್ದು, ಪೆಸಿಫಿಕ್ ದ್ವೀಪಗಳನ್ನೇ ತನ್ನ ಅಣ್ವಸ್ತ್ರಗಳ ಪರೀಕ್ಷೆಗೆ ಪ್ರಯೋಗಾಲಯ ಮಾಡಿಕೊಂಡು ಅಲ್ಲಿನ ಜನರ ಬದುಕು, ಪರಿಸರವನ್ನೇ ನಿರ್ನಾಮ ಮಾಡುತ್ತಿರುವುದನ್ನು ಯಾರೂ ಮರೆಯುವಂತಿಲ್ಲ. ಅಣ್ವಸ್ತ್ರ ಪ್ರಯೋಗಗಳಿಂದಾಗಿ ದನಿಯೇ ಇಲ್ಲದೆ, ವಿರೂಪವಾಗಿ ಹುಟ್ಟುವ ಮೈಕ್ರೋನಿಸಿಯಾದ ಜೆಲ್ಲಿ ಬೇಬಿಗಳು ಅಮೆರಿಕದ ಅಮಾನುಷ ಕ್ರೌರ್ಯಕ್ಕೆ ಮೌನಸಾಕ್ಷಿಗಳು.

ಇಂತಹ ಇತಿಹಾಸದಲ್ಲಿ ಸಾಮ್ರಾಜ್ಯಶಾಹಿ, ಲಾಭಕೋರ, ರಕ್ತಪಿಪಾಸು ಅಮೆರಿಕ ಸಾರಿರುವ ಯುದ್ಧವನ್ನು ಸಮರ್ಥಿಸಿರುವ ಭಾರತ ದೇಶದ ಘನ ಸರ್ಕಾರದ ನಿಲುವು ಎಲ್ಲರನ್ನೂ ತಲೆ ತಗ್ಗಿಸುವಂತೆ ಮಾಡಿದೆ. ಜನ ವಿರೋಧಿ ಆರ್ಥಿಕ, ಸಾಮಾಜಿಕ, ರಾಜಕೀಯ ನೀತಿಗಳಿಂದ ಈಗಾಗಲೇ ಹದಗೆಟ್ಟಿರುವ ದೇಶದ ಪರಿಸ್ಥಿತಿಯನ್ನು ಭಾರತದ ನಿಲುವು ಇನ್ನೂ ಹಾಳುಗೆಡವಲಿದೆ. ಧರ್ಮದ ಹೆಸರಿನಲ್ಲಿ ಅಲ್ಪಸಂಖ್ಯಾತರನ್ನು ಹತ್ತಿಕ್ಕುತ್ತಾ, ಜಾತಿ ಹೆಸರಿನಲ್ಲಿ ದಲಿತರು ಮಹಿಳೆಯರ ಮೇಲೆ ನಿರಂತರ ಹಿಂಸೆ ನಡೆಸುತ್ತಾ, ಅಭಿವೃದ್ಧಿ ಹೆಸರಿನಲ್ಲಿ ಆದಿವಾಸಿಗಳ ಬದುಕನ್ನು ಎತ್ತಂಗಡಿ ಮಾಡುತ್ತಿರುವ ಭಯೋತ್ಪಾದಕ NDA ಸರ್ಕಾರವು ತನ್ನ ಕೋಮುವಾದಿ ರಾಜಕೀಯಕ್ಕೆ ಅಮೆರಿಕಾದ ಮನ್ನಣೆ ಪಡೆಯಲು ಭಾರತ ಸರ್ಕಾರ ಹೊರಟಿದೆ. ಯುದ್ಧ, ರಾಷ್ಟ್ರ ಪ್ರತಿಷ್ಠೆಯ ಮಾತನಾಡುತ್ತ ಜನರನ್ನು ಉದ್ಯೋಗ, ವಸತಿ, ತಕ್ಕ ವೇತನದಂತಹ ನ್ಯಾಯಬದ್ಧ ಬೇಡಿಕೆಗಳಿಂದ ಹಾದಿ ತಪ್ಪಿಸುತ್ತಿದೆ. ಹಸಿವಿನಿಂದ ದೇಶಾದ್ಯಂತ ಜನರು ಸಾಯುತ್ತಿದ್ದರೆ ಸರ್ಕಾರಿ ಉಗ್ರಾಣಗಳು ಧಾನ್ಯಗಳಿಂದ ತುಂಬಿದ್ದವು ಎಂಬ ಅಮಾನುಷ ಸತ್ಯ ಎಲ್ಲರಿಗೂ ತಿಳಿದಿದೆ. ಕಾಶ್ಮೀರದ ಬಿಕ್ಕಟ್ಟಿಗೆ ಅಲ್ಲಿನ ಜನತೆಯ ಆಶೋತ್ತರಗಳನ್ನ ಹತ್ತಿಕ್ಕಿ ಮಿಲಿಟರಿ ಪರಿಹಾರವನ್ನೆ ಸೂಚಿಸುತ್ತ ರಾಷ್ಟ್ರಪ್ರೇಮ ಮೆರೆಯುತ್ತಿದೆ ನಮ್ಮ ಸರ್ಕಾರ! ಭಯೋತ್ಪಾದನೆಯನ್ನು ಹತ್ತಿಕ್ಕುವೆ ಎನ್ನುತ್ತಾ ತಮ್ಮ ಹಕ್ಕಿಗಾಗಿ ಜನರು ನಡೆಸುವ ಹೋರಾಟವನ್ನು ಹತ್ತಿಕ್ಕಿ, ಅಲ್ಪಸಂಖ್ಯಾತರ ವಿರುದ್ಧ ಸಮರ ನಡೆಸುತ್ತಿರುವ ಸಂಸ್ಥೆಗಳನ್ನು ರಕ್ಷಿಸುತ್ತಿದೆ. ಮಾಧ್ಯಮಗಳೂ ಸಹ ಭಯೋತ್ಪಾದನೆಗೂ ಇಸ್ಲಾಂಗೂ ಸಂಪರ್ಕ ಕಲ್ಪಿಸಿ, ಅಲ್ಪಸಂಖ್ಯಾತರ ವಿರುದ್ಧ ಕಹಿ ಭಾವನೆ ಬಿತ್ತುತ್ತಿದ್ದಾವೆ.

ಭಯೋತ್ಪಾದನೆಯನ್ನು ವಿರೋಧಿಸಬೇಕೆಂದರೆ ಎಲ್ಲ ರೀತಿಯ ಭಯೋತ್ಪಾದನೆಯನ್ನು ವಿರೋಧಿಸಬೇಕಾಗುತ್ತದೆ. ಧರ್ಮದ ಹೆಸರಿನಲ್ಲಿ ನಡೆಯುವ ಭಯೋತ್ಪಾದನೆಯಾಗಲಿ, ಸಿದ್ಧಾಂತದ ಹೆಸರಿನಲ್ಲಿ ನಡೆಯುವ ಭಯೋತ್ಪಾದನೆಯಾಗಲಿ, ನೆಲ, ಜಲ, ಸಮಾನತೆ, ಸ್ವಾಯತ್ತತೆಗಾಗಿ ನಡೆಯುವ ಹೋರಾಟವನ್ನು ಹತ್ತಿಕ್ಕುವ ಸರ್ಕಾರಿ ಭಯೋತ್ಪಾದನೆಯಾಗಲಿ ವಿರೋಧಿಸಬೇಕು. ಕಣ್ಣು ಬಾಯಿಲ್ಲದೆ ವಿರೂಪಗೊಂಡ ಮೈಕ್ರೋನೆಸಿಯಾದ ಹಸುಳೆಗಳು, ನೆಲೆಯಿಲ್ಲದೆ, ಹಸಿವಿನಿಂದ ಕಂಗೆಟ್ಟ ಆಫ್ಘಾನಿಸ್ತಾನದ ಹಸುಳೆಗಳ ಪರವಾಗಿ ನಾವು ದನಿಎತ್ತಿ ಪ್ರತಿಭಟಿಸದಿದ್ದರೆ ಅಮೆರಿಕದ ಪಾಪಕೃತ್ಯಗಳಲ್ಲಿ ನಾವೂ ಪಾಲುಗೊಂಡಂತೆ. ತನ್ನದೆ ಕರಾಳ ಇತಿಹಾಸದ ನೆರಳಲ್ಲಿ ಬದುಕುತ್ತಿರುವ ಅಮೆರಿಕ ತನ್ನ ಜನರನ್ನೂ ಆತಂಕದ, ಅಭದ್ರತೆಯಕೂಪಕ್ಕೆ ತಳ್ಳಿದೆ. ಆ ಜನರ ಸಂಕಟಕ್ಕೆ ಸ್ಪಂದಿಸ ಬೇಕಾದ್ದು ನಮ್ಮ ಜವಾಬ್ದಾರಿ. ●

ಕೃಪೆ:
ವರ್ಕರ್ಸ್ ಸಾಲಿಡಾರಿಟಿ, ದೆಹಲಿ
ಆಂಟಿ ವಾರ್ ಕ್ಯಾಂಪೇನ್, ದೆಹಲಿ
ಕರ್ನಾಟಕ ಸಿಟಿಜನ್ಸ್ ಇನಿಶಿಯೆಟಿವ್ ಎಗೆನೆಸ್ಟ್ ವಾರ್‌ನ ಕರಪತ್ರಗಳ ಬರಹಗಳು

ಮಾನಸದ ಪ್ರಕಟಣೆ ಮಾನಸದ ಓದುಗರ ಆರ್ಥಿಕ ನೆರವನ್ನು ಅವಲಂಬಿಸಿದೆ. ಓದುಗರು ಚಂದಾ ನವೀಕರಣದ ಸೂಚನೆ ಬಂದ ಕೂಡಲೇ ಚಂದಾ ನವೀಕರಿಸಿ ಸಹಕರಿಸಬೇಕೆಂದು ಕೋರುತ್ತೇವೆ.

ಸಂ. ಮಂಡಳಿ

ಅಮೆರಿಕಾದ ಕರಾಳ ಇತಿಹಾಸಕ ಮೈಲ್ಲಿಗಲ್ಲುಗಳು!

ವರ್ಷ	ದೇಶ	ವಿವರ
1946	ಇರಾನ್	ಇರಾನಿನ ಅಜರ್‌ಬೈಜಾನ್‌ನಿಂದ ಸೋವಿಯತ್ ಪಡೆಗಳನ್ನು ತೆರವು ಮಾಡಿಸಲು ಅಣ್ವಸ್ತ್ರ ಪ್ರಯೋಗಿಸುವ ಬೆದರಿಕೆ.
1950	ಪ್ಯೂಟೋರಿಕಾ	ಸ್ವಾತಂತ್ರ ಬಂಡಾಯಗಾರನೊಬ್ಬನ ಕೊಲೆ
1951-53	ಕೊರಿಯಾ	ಉ.ಕೊರಿಯಾ ವಿರುದ್ಧ ಮಿಲಿಟರಿ ಪಡೆಗಳನ್ನು ಕಳಿಸಿ, ಅಣ್ವಸ್ತ್ರಗಳ ಪ್ರಯೋಗಿಸುವೆನೆಂಬ ಬೆದರಿಕೆ, 2 ಮಿಲಿಯನ್ ಜನರ ಹತ್ಯೆ.
1953	ಇರಾನ್	ಬ್ರಿಟಿಷ್ ತೈಲ ಕಂಪೆನಿಗಳನ್ನು ರಾಷ್ಟ್ರೀಕರಣಗೊಳಿಸಿದ್ದಕ್ಕೆ ಮಸಾದಿಕ್ ಸರ್ಕಾರವನ್ನು CIA ಉರುಳಿಸಿತು.
1958	ಲೆಬನಾನ್	ಬಂಡಾಯಗಾರರನ್ನು ಹತ್ತಿಕ್ಕಿ, ದೃಢತೆಯನ್ನು ಕಾಪಾಡಲು ಸೇನೆಯ ರವಾನೆ
1958	ಚೈನಾ	ತೈವಾನ್ ಪ್ರವೇಶಿಸಿದ್ದರೆ ಅಣುಬಾಂಬ ಪ್ರಯೋಗಿಸುವ ಬೆದರಿಕೆ
1961	ಕ್ಯೂಬಾ	ಫಿಡಲ್ ಕ್ಯಾಸ್ಟ್ರೋನನ್ನು ಉರುಳಿಸಲು ಪಿನ್ಸ್ ಕೊಲ್ಲಿ ಆಕ್ರಮಣವನ್ನು CIA ಬೆಂಬಲಿಸಿತು.
1960-75	ವಿಯಟ್ನಾಂ	1-2 ಮಿಲಿಯನ್ ಜನರ ಹತ್ಯೆ, ಎರಡನೇ ಜಾಗತಿಕ ಯುದ್ಧದಲ್ಲಿ ಹಾಕಿದ ಬಾಂಬುಗಳಿಗಿಂತಲೂ ಹೆಚ್ಚಿನ ಬಾಂಬುಗಳ ಸುರಿಮಳೆ.
1964	ಪನಾಮ	ಪನಾಮ ಕಾಲುವೆ ಹಿಂತಿರುಗಿಸಲು ಒತ್ತಾಯಿಸಿದ ಸಾವಿರಾರು ನಾಗರೀಕರುಗಳ ಕೊಲೆ.
1969-75	ಕಾಂಬೋಡಿಯ	ಹಸಿವು ಮತ್ತು ಬಾಂಬ್ ದಾಳಿಯಿಂದ 2 ಮಿಲಿಯನ್ ಜನರ ಸಾವು.
1971-73	ಲಾವೋಸ್	ಬಾಂಬ್ ದಾಳಿಯಿಂದ 1 ಮಿಲಿಯನ್ ಜನರ ಸಾವು.
1076-92	ಅಂಗೋಲಾ	ದ.ಆಫ್ರಿಕ ಬೆಂಬಲಿತ ದಂಗೆಕೋರರಿಗೆ CIA ಬೆಂಬಲ.
1973	ಇರಾಕ್	ಖರ್ದ್ ಬಂಡಾಯಗಾರರಿಗೆ ಬೆಂಬಲ ಆದರೆ ಇರಾಕ್ ಇರಾನ್‌ನೊಂದಿಗೆ ಒಪ್ಪಂದ ಮಾಡಿಕೊಂಡಾಗ ಆಶ್ರಯ ನೀಡಲು ನಿರಾಕರಣೆ.
1979-88	ಆಫ್‌ಘಾನಿಸ್ತಾನ	ಮುಜಾಹಿದ್ದಿನ್‌ಗೆ ಬೆಂಬಲ, ಹಲವಾರು ಬಿಲಿಯನ್ ಡಾಲರ್‌ಗಳ ಸಹಾಯ, ಇಲ್ಲಿವರೆಗೆ 1 ಮಿಲಿಯನ್‌ಗಿಂತಲೂ ಹೆಚ್ಚಿನ ಜನ ಸತ್ತಿದ್ದಾರೆ.
1980	ನಿಕರಾಗುವ	ಕಾಂಗ್ರೆಸ್ಸಿನಿಂದ ಕಾನೂನು ಬಾಹಿರವೆನಿಸಿಕೊಂಡ ಮೇಲೂ, ಅಮೆರಿಕಾಡಳಿತ ಇರಾನಿಗೆ ಶಸ್ತ್ರಾಸ್ತ್ರ ಮಾರಾಟ ಮಾಡಿತು. ಮಾರಾಟದ ಹಣವನ್ನು ನಿಕರಾಗ್ವುದ ಎಡಪಂಥೀಯ ಸರ್ಕಾರ ಉರುಳಿಸುವ ಪ್ರಯತ್ನ ಮಾಡುತ್ತಿದ್ದವರಿಗೆ ನೀಡಿತು. ಬಂದುರಿನಲ್ಲಿ ಗಣಿಗಾರಿಕೆ ನಡೆಸಲು ಅಮೆರಿಕದ ನೌಕೆಗಳ ಸ್ಥಾಪನೆ.
1980-88	ಇರಾನ್-ಇರಾಕ್	ಇರಾನ್ ಮೇಲೆ ಸದ್ದಾಂ ನಡೆಸಿದ ಆಕ್ರಮಣಕ್ಕೆ ಶಸ್ತ್ರಾಸ್ತ್ರ ಸರಬರಾಜು. ಮುಂದೆ ನೌಕಪಡೆ ಕಳಿಸಿದ್ದು. ಇರಾನಿಗೆ ಶಸ್ತ್ರಾಸ್ತ್ರ ನೀಡಲು ಇಸ್ರೇಲ್‌ನನ್ನು ಒತ್ತಾಯಿಸಿದ್ದು, 1985ರಲ್ಲಿ ತಾನೇ ಗೌಪ್ಯವಾಗಿ ಇರಾನಿಗೆ ಶಸ್ತ್ರಾಸ್ತ್ರ ಸರಬರಾಜು ಮಾಡಿತು. ಸದ್ದಾಂ ಖರ್ದ್‌ರ ಮೇಲೆ ರಾಸಾಯನಿಕ ಅಸ್ತ್ರಗಳನ್ನು ಪ್ರಯೋಗಿಸಿದ ಮೇಲೂ ಇರಾಕಿನೊಂದಿಗೆ ಆರ್ಥಿಕ ಸಂಬಂಧ ಏರ್ಪಡಿಸಿದ್ದು.


1981-92	ಎಲ್-ಸಾಲ್ವಡೊರ್	75,000 ಜನರನ್ನು ಕೊಲ್ಲಲ್ಲು ಅಲ್ಲಿನ ಆಡಳಿತಕ್ಕೆ ಮಿಲಿಟರಿ ಪಡೆಯ ಸಹಕಾರ.
1983	ಪ್ಯಾಲೆಸ್ಟೈನ್	ಸಬ್ರಾ, ಶಾಕಿಲ ನಿರಾಶ್ರಿತರ ಶಿಬಿರದಲ್ಲಿ 1800 ಜನ ನಿರಾಶ್ರಿತರನ್ನು ಇಸ್ರೇಲಿಗಳು ಕೊಂದು ಹಾಕಿದರು. ಆಗ ಮೌನವಾಗಿತ್ತು ಅಮೆರಿಕ.
1983	ಲೆಬನಾನ್	ಲೆಬನಾನ್ ಮೇಲೆ ಇಸ್ರೇಲ್ ಆಕ್ರಮಣ ಮಾಡಿ 17,500 ಜನರ ಕೊಲೆ ಮಾಡಿದ್ದನ್ನು ಸಮರ್ಥಿಸಿಕೊಂಡಿದ್ದು.
1983	ಗ್ರೆನಿಡಾ	ಕ್ರಾಂತಿ ಹತ್ತಿಕ್ಕಲು ಬಾಂಬ್ ದಾಳಿ.
1986	ಲಿಬ್ಯಾ	ಪ. ಜರ್ಮನಿಯಲ್ಲಿ ಇಬ್ಬರು ಅಮೆರಿಕ ಸೈನಿಕರ ಕೊಲೆಯಾದುದಕ್ಕೆ, ಲಿಬ್ಯಾ ರಾಜಧಾನಿ ಟ್ರಿಪೋಲಿಯ ಮೇಲೆ ಅಮೆರಿಕದ ಬಾಂಬ್ ದಾಳಿ. ಅಲ್ಲಿ ಸತ್ತ 100 ಜನರಲ್ಲಿ ಬಹಳಷ್ಟು ಜನ ನಾಗರೀಕರು.
1989-90	ಪನಾಮ	ಸರ್ಕಾರ ಉರುಳಿಸಲು ಅಮೆರಿಕ ಪಡೆಗಳ ರವಾನೆ, ಭಾಗಶಃ ಪನಾಮ ನಗರದ ಮೇಲೆ ಬಾಂಬ್ ದಾಳಿ.
1992-94	ಯುಗೋಸ್ಲಾವಿಯ	NATOದ ಸರ್ಬಿಯಾ, ಮಾಂಟೆನೆಗ್ರೊ ಪಡೆಗಳ ನೇತೃತ್ವ.
1990	ಇರಾಕ್	ಗಲ್ಫ್ ಯುದ್ಧದಲ್ಲಿ 20,0000 ನಾಗರೀಕರ ಕೊಲೆ, ಅಗತ್ಯ ಔಷಧಿ, ಆಹಾರ ಇತ್ಯಾದಿಗಳ ರವಾನೆಗೆ ತಡೆ. 1995ರ ಹೊತ್ತಿಗೆ 1 ಮಿಲಿಯನ್ ಜನರು ಸತ್ತಿದ್ದರು ಅವರಲ್ಲಿ ಅರ್ಧ ಮಕ್ಕಳು.
1995	ಕ್ರೊಶಿಯಾ	ಕ್ರೊಶಿಯಾ ದಾಳಿ ಮಾಡವ ಮೊದಲೇ, ಕ್ರಜಿನಾದಲ್ಲಿ ಸರ್ಬಿಯನ್ನರ ವಾಯುನೆಲೆಯ ಮೇಲೆ ದಾಳಿ.
1998	ಆಫ್ಘಾನಿಸ್ತಾನ	ಸರ್ಕಾರ ಉರುಳಿಸಲು ಬಾಂಬ್‌ಗಳ ಸುರಿಮಳೆ ನಡೆಸಿ, ಯುರೇನಿಯಂ ಬಳಸಿ ನಾಗರೀಕರ ಕೊಲೆ.
1998	ಇರಾಕ್	ಶಸ್ತ್ರಾಸ್ತ್ರ ಪರಿಶೀಲನೆ ಕುರಿತು ಚರ್ಚೆ ನಡೆಸಬೇಕೆಂದು ಸಂಯುಕ್ತ ರಾಷ್ಟ್ರಗಳ ಸೆಕ್ಯೂರಿಟಿಯ ಕೌನ್ಸಿಲ್ ಹೇಳಿದಾಗಲು ಅಮೆರಿಕ ಮತ್ತು ಬ್ರಿಟನ್ ಇರಾಕ್‌ನ ಮೇಲೆ ಬಾಂಬ್ ದಾಳಿ ನಡೆಸಿದವು.
1998	ಸೊಡಾನ್	ರಾಸಾಯನಿಕ ಅಸ್ತ್ರಗಳನ್ನು ತಯಾರಿಸುತ್ತಿದೆ ಎಂದು ಆರೋಪಿಸಿ ಔಷಧ ತಯಾರಿಸುವ ಕಾರ್ಖಾನೆ ಮೇಲೆ ಬ್ಯಾಂಬ್ ದಾಳಿ ನಡೆಸಿ ಔಷಧಿಗಳನ್ನು ಧ್ವಂಸ ಮಾಡಿತು. 10000 ಜನ ಈ ದಾಳಿಗೆ ಬಲಿಯಾದರು.
1999	ಯುಗೊಸ್ಲ್ಯಾವಿಯ	ಕೊಸಾವೊನಿಂದ ಸರ್ಬಿಯನರನ್ನು ಹೊರಹಾಕಲು 3 ತಿಂಗಳ ಬಾಂಬ್ ದಾಳಿ.

> "ಮನೆಯ ಕತ್ತಲಿಗೆ ಮನೆಯನ್ನೇ ಸುಡುವುದು ಬೇಡ, ಸಮರದ ಸದ್ದಡಗಲಿ, ನಮ್ಮ-ನಿಮ್ಮ ಮನೆ ಅಂಗಳದಲಿ ದೀಪ ಉರಿಯುತಿರಲಿ."
>
> -ಸಾಹಿರ್ ಲೂದಿಯಾನ್ವಿ

ಅಮೆರಿಕಾದ ವಸಾಹತುಶಾಹಿ ನೀತಿ







‘ಅಮೆರಿಕಾ’ ಜಗತ್ತಿನಲ್ಲಿ ಪ್ರಜಾಪ್ರಭುತ್ವದ ರಕ್ಷಕನೆಂಬ ಸೋಗನ್ನು ಹಾಕುತ್ತಿದೆ. ಜಗತ್ತಿನ ಎಲ್ಲಾ ರಾಷ್ಟ್ರಗಳು ಅಮೆರಿಕಾವನ್ನು ಪ್ರಜಾಪ್ರಭುತ್ವದ ಸಂಕೇತವೆಂದು ಗುರುತಿಸಬೇಕೆಂದು ಹಾತೊರೆಯುತ್ತದೆ. ಜಾಗತಿಕ ಮಟ್ಟದಲ್ಲಿ ಭಯೋತ್ಪಾದನೆಯನ್ನು ಮಟ್ಟಹಾಕುವ ಸೂತ್ರಧಾರ ತಾನೆಂದು ಭಾವಿಸಿದೆ. ಆದರೆ ಐತಿಹಾಸಿಕ ಸತ್ಯಗಳನ್ನು ಮುಚ್ಚಿಹಾಕಲು ಸಾಧ್ಯವಿಲ್ಲ. ಕಾಲ ಸರಿದಿರಬಹುದು, ಆದರೆ ಗಾಯದ ನೆನಪು ಅಷ್ಟು ಸುಲಭವಾಗಿ ಮರೆಯಲು ಸಾಧ್ಯವಿಲ್ಲ. ವಿಶೇಷವಾಗಿ ನೋವನ್ನುಂಡ ಜನರು ಅಷ್ಟು ಸುಲಭವಾಗಿ ಮರೆಯಲು ಸಾಧ್ಯವಿಲ್ಲ. ಇತಿಹಾಸದ ಪುಟಗಳಲ್ಲಿ ಕಣ್ಣು ಹಾಯಿಸಿದರೆ ಅಮೆರಿಕಾ ವಿವಿಧ ದೇಶಗಳ ಮೇಲೆ ನಡೆಸಿದ ಕ್ರೌರ್ಯ, ಹಿಂಸೆ, ದಬ್ಬಾಳಿಕೆ ಕಣ್ಣಿಗೆ ರಾಚುತ್ತದೆ. ಕಣ್ಣಿಗೆ ರಾಚುವ ಸತ್ಯಗಳನ್ನು ಮುಚ್ಚಿಡುವುದು ಹೇಗೆ? ಮತ್ತೆಷ್ಟು ದಬ್ಬಾಳಿಕೆ ನಡೆಸುವುದು, ಕ್ರೌರ್ಯಕ್ಕೆ ಮಣೆಹಾಕುವುದು. ಹಿಂಸೆಯ ಕಹಳೆಯೂದಿ ಅಮಾಯಕ ಜನರ ಮಾರಣಹೋಮ ಮಾಡುವುದು. ಇದು ಅಮೆರಿಕಾ ಅನುಸರಿಸಿಕೊಂಡು ಬಂದ ನೀತಿ. ಸೆಪ್ಟೆಂಬರ್ 11 ರಂದು ಅಮೆರಿಕಾದ ವಾಣಿಜ್ಯ ಶೃಂಗಗಳ ಮೇಲೆ ನಡೆದ ಬಾಂಬ್ ದಾಳಿಗೆ ಪ್ರತೀಕಾರವಾಗಿ ಅಮೆರಿಕಾ ಆಫ್ಘಾನಿಸ್ತಾನದ ಮೇಲೆ ಸಾರಿರುವ ಯುದ್ಧದ ಹಿಂದಿರುವ ಅದರ ವಸಾಹತುಶಾಹಿ ವಿದೇಶಾಂಗ ನೀತಿಯು ಇಂದು ನಿಚ್ಚಳವಾಗಿದೆ.

ಬಿನ್‌ಲ್ಯಾಡನ್ ಇಂದು ಜಗತ್ತಿನಲ್ಲಿಯೇ ಕುಖ್ಯಾತ ಭಯೋತ್ಪಾದಕನಾಗಿದ್ದಾನೆ. ಇಂತಹ ಭಯೋತ್ಪಾದಕನನ್ನು ಬೆಳಸಿ ಪೋಷಿಸಿದವರು ಯಾರು? ಬಿನ್‌ಲ್ಯಾಡನ್‌ನನ್ನು ನೀರೆರೆದು ಪೋಷಿಸಿದವರು ಅಮೆರಿಕಾ ಹಾಗೂ ಪಾಕಿಸ್ತಾನದ ಸರ್ಕಾರಗಳು. ರಷ್ಯಾದ ವಿರುದ್ಧ ಹೋರಾಡಲು ಬುಡಕಟ್ಟು ಜನರಿಗೆ ಸೈನಿಕ ಬೆಂಬಲ ನೀಡಿ, ಅವರಿಗೆ ಅಗತ್ಯವಾದ ತರಬೇತಿಯನ್ನು ನೀಡಲು ಹಣಕಾಸು ನೆರವನ್ನು ಈ ದೇಶಗಳು ನೀಡಿದವು. ಸಿರಿವಂತ ಬಂಡವಾಳಶಾಹೀ ದೇಶಗಳಿಗೆ ರಷ್ಯಾ ದೇಶದ ಸಮಾಜವಾದದ ಭಯ. ಸಮಾಜವಾದ ಸರ್ಕಾರಗಳಿರುವ ದೇಶಗಳೆಲ್ಲೆಲ್ಲಾ, ಆ ಸರ್ಕಾರಗಳನ್ನು ಉರುಳಿಸುವ ಹುನ್ನಾರದಿಂದ ಸ್ಥಳೀಯ ಜನರನ್ನು ಎತ್ತಿಕಟ್ಟಿ, ಆ ದೇಶಗಳಲ್ಲಿ ಅಂತಃ ಕಲಹವನ್ನು ಉಂಟುಮಾಡುವ ಕುಟಿಲ ತಂತ್ರವನ್ನು ಅಮೆರಿಕಾ ರೂಪಿಸುತ್ತಾ ಬಂದಿದೆ. ಇಂತಹ ಕುಟಿಲ ತಂತ್ರದ ಕೂಸೇ ಬಿನ್ ಲ್ಯಾಡನ್.

ಇಂದು ಶ್ರೀಮಂತ ದೇಶಗಳ ಕಣ್ಣು ತೃತೀಯ ಜಗತ್ತಿನ ನೈಸರ್ಗಿಕ ಸಂಪತ್ತಿನ ಮೇಲಿದೆ. ಈ ನೈಸರ್ಗಿಕ ಸಂಪತ್ತನ್ನು ಕಬಳಿಸಲು ನೇರವಾದ ಹಾದಿಯನ್ನು ಈ ಶ್ರೀಮಂತ ದೇಶಗಳು ಹುಡುಕುತ್ತಲೇ ಬಂದಿವೆ. ಆಯಾ ದೇಶದ ಸರ್ಕಾರಗಳನ್ನು ತಮ್ಮ ಕೈಗೊಂಬೆಯಾಗಿಸಿ ಕೊಂಡರೆ ಇಂತಹ ನೈಸರ್ಗಿಕ ಸಂಪತ್ತನ್ನು ನೇರವಾಗಿ ಲೂಟಿ ಮಾಡಬಹುದು. ಹಾಗಾಗಿ ಈ ದೇಶಗಳನ್ನು ರಾಜಕೀಯವಾಗಿ ಸಂಪೂರ್ಣವಾಗಿ ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಳ್ಳುತ್ತವೆ. ಇದಕ್ಕೆ ಪೂರಕವಾಗುವಂತಹ ರಾಜಕೀಯ ವಾತಾವರಣವನ್ನು ನಿರ್ಮಿಸಲು ಯಾವ ಹಾದಿಯನ್ನು ಬೇಕಾದರೂ ಈ ದೇಶಗಳು ಆಯ್ದುಕೊಳ್ಳುತ್ತವೆ. ತೃತೀಯ ಜಗತ್ತಿನ ಅರ್ಧದಷ್ಟು ನೈಸರ್ಗಿಕ ಸಂಪತ್ತನ್ನು ಅಮೆರಿಕಾ ಇಂಗ್ಲೆಂಡ್‌ಗಳಂತಹ ದೇಶಗಳು ಲೂಟಿ ಮಾಡುತ್ತಾ ಬಂದಿವೆ.

ಬಹಳಷ್ಟು ಶ್ರೀಮಂತ ದೇಶಗಳು ತೈಲಕ್ಕಾಗಿ ಇಂದು ಅರಬ್ ದೇಶಗಳನ್ನು ಅವಲಂಬಿಸಬೇಕಾಗಿದೆ. ಅರಬ್ ದೇಶ ತೈಲ ಸಂಪತ್ತನ್ನು ಹೇರಳವಾಗಿ ಹೊಂದಿವೆ. ಅಮೆರಿಕಾ ಬಳಸುವ ಶೇ. 40ರಷ್ಟು ತೈಲ ಈ ದೇಶಗಳಿಂದ ಬರಬೇಕಾಗುತ್ತದೆ. ಅರಬ್ ದೇಶಗಳಲ್ಲಿ ತೈಲ ಸಂಪತ್ತಿದ್ದರೂ ಅದನ್ನು ಶುದ್ಧೀಕರಿಸುವ ಆಧುನಿಕ ತಂತ್ರಜ್ಞಾನ ಅಲ್ಲಿಲ್ಲ. ಜಪಾನ್ ಬೃಹತ್ತಾದ ತೈಲ ಶುದ್ಧೀಕರಿಸುವ ರಿಫೈನರಿಗಳನ್ನು ಹೊಂದಿವೆ. 1996ರಲ್ಲಿ ಆಫ್ಘಾನಿಸ್ತಾನದಲ್ಲಿ ತಾಲಿಬಾನ್ ಸರ್ಕಾರ ಆಡಳಿತಕ್ಕೆ ಬಂದಾಗ ಅಮೆರಿಕಾದ ತೈಲ ಕಂಪನಿಗಳು ಅಲ್ಲಿಯ ನಾಯಕರನ್ನು ಅಮೆರಿಕಕ್ಕೆ ಕರೆದು ಸನ್ಮಾನಿಸಲಾಯಿತು. ಸೋವಿಯತ್ ಸೆಂಟ್ರಲ್ ಏಷಿಯಾದಿಂದ ಆಫ್ಘಾನಿಸ್ತಾನದ ಮೂಲಕ ತೈಲ ಕೊಳವೆಯನ್ನು ತರುವುದು ಅಮೆರಿಕಾದ ಮುಖ್ಯ ಉದ್ದೇಶವಾಗಿತ್ತು. ಈ ಮೂಲಕ ಒಂದರ್ಥದಲ್ಲಿ ಅರಬ್ ದೇಶಗಳನ್ನು ತೈಲ ವಸಾಹತು ದೇಶವನ್ನಾಗಿಸುವುದು ಅಮೆರಿಕಾದ ಉದ್ದೇಶವಾಗಿದೆ.

ಅಮೆರಿಕಾದ ಬಹುರಾಷ್ಟ್ರೀಯ ಕಂಪನಿಗಳು ನೂರಾರು ಕೋಟಿ ಡಾಲರ್ ವ್ಯವಹಾರವನ್ನು ಅರಬ್ ದೇಶಗಳಲ್ಲಿ ಮಾಡುತ್ತಿದೆ.

ಆಯಿಲ್, ಆಟೋಮೊಬೈಲ್, ಏರ್‌ಲೈನ್ ನಿರ್ಮಾಣ, ಸಾಫ್ಟ್‌ವೇರ್ ಹೀಗೆ ಹಲವಾರು ರೀತಿಯ ವ್ಯವಹಾರವನ್ನು ಈ ದೇಶಗಳಲ್ಲಿ ನಡೆಸುತ್ತಿವೆ. ಅರಬ್ ದೇಶಗಳಲ್ಲಿ ಅಗಾಧವಾದ ತೈಲ ಸಂಪತ್ತಿದ್ದರೂ, ತೈಲ ರಿಫೈನರಿಗಳು ಶ್ರೀಮಂತ ರಾಷ್ಟ್ರಗಳಲ್ಲಿವೆ. ಇಂಗ್ಲೆಂಡಿನಲ್ಲಿ ನೈಸರ್ಗಿಕವಾಗಿ ಒಂದು ತೊಟ್ಟು ಆಯಿಲ್ ಕೂಡಾ ದೊರೆಯುವುದಿಲ್ಲ. ವ್ಯಂಗ್ಯವೆಂದರೆ ಜಗತ್ತಿನಲ್ಲಿಯೇ ದೊಡ್ಡ ಆಯಿಲ್ ಮಾರಾಟಗಾರ ದೇಶವೆಂದರೆ ಬ್ರಿಟನ್.

ಇರಾನ್-ಇರಾಕ್ ಸಮಸ್ಯೆ, ಪಾಲಿಸ್ಟೈನರು ತಮ್ಮ ನೆಲಕ್ಕಾಗಿ ನಡೆಸುತ್ತಿರುವ ಹೋರಾಟ, ಇಸ್ರೇಲ್, ಅರಬರನ್ನು ಕೊಂದಿರುವ ಸಂಖ್ಯೆ, ಕೊರಿಯಾ, ವಿಯಟ್ನಾಂ, ನಿಕರಾಗುವ, ಚಿಲಿ, ಕೊಲಂಬಿಯಾ ಹೀಗೆ ಪ್ರತಿಯೊಂದು ದೇಶದಲ್ಲಿಯೂ ಅಲ್ಲಿಯ ಜನರನ್ನು ಎತ್ತಿಕಟ್ಟಿ ಅಮೆರಿಕಾ ಈ ದೇಶಗಳನ್ನು ತನ್ನ ಕೈಗೊಂಬೆಯನ್ನಾಗಿಸಿಕೊಳ್ಳುತ್ತಿದೆ. ಈ ಮೂಲಕ ಅಮೆರಿಕಾ ತನ್ನ ಬಂಡವಾಳವನ್ನು ಬೇಯಿಸಿಕೊಳ್ಳುತ್ತಿದೆ. ಸಾಮ್ರಾಜ್ಯಶಾಹಿ ದೇಶಗಳ ಮುಖವಾಣಿಯಾಗಿ ಅಮೆರಿಕಾ ಕಾರ್ಯಪ್ರವೃತ್ತವಾಗಿದೆ. ತೃತೀಯ ಜಗತ್ತಿನ ಹಾಗೂ ಸಣ್ಣ ದೇಶಗಳ ವ್ಯವಹಾರದಲ್ಲಿ ತಾನು ಮೂಗು ತೂರಿಸಿ ಅಮೆರಿಕಾ ತನ್ನ ಹಿತಾಸಕ್ತಿಯನ್ನು ಕಾಯ್ದುಕೊಳ್ಳುತ್ತಿದೆ. ಕೊಲಂಬಿಯಾ ಇದಕ್ಕೆ ಉತ್ತಮ ನಿದರ್ಶನವಾಗಿದೆ. ಅಲ್ಲಿಯ ಗೆರಿಲ್ಲಾ ಹೋರಾಟವನ್ನು ಮಟ್ಟಹಾಕುವುದು ಅಮೆರಿಕಾದ ಆಂತರಿಕ ಆಸೆ.

ಅಮೆರಿಕಾ, ಬ್ರಿಟನ್, ಜಪಾನ್, ಫ್ರಾನ್ಸ್ ಮುಂತಾದ ದೇಶಗಳ ವಿದೇಶಾಂಗ ನೀತಿಯನ್ನು ರೂಪಿಸುವಲ್ಲಿ ಶಸ್ತ್ರಾಸ್ತ್ರಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಶಸ್ತ್ರಾಸ್ತ್ರಗಳನ್ನು ತಯಾರಿಸುವುದು, ಅವುಗಳ ಕೃತಕ ಅಗತ್ಯವನ್ನು ಸೃಷ್ಟಿಸುವುದು, ತನ್ಮೂಲಕ ಕೃತಕ ಬೇಡಿಕೆಯನ್ನು ಉಂಟುಮಾಡುವುದು ವಿದೇಶಾಂಗ ನೀತಿಯ ಅವಿಭಾಜ್ಯ ಅಂಗವಾಗಿದೆ. ಹಾಗಾಗಿ ಶಸ್ತ್ರಾಸ್ತ್ರ ಬೇಡಿಕೆಯನ್ನು ಉಂಟುಮಾಡಬೇಕಾದರೆ ಒಂದು ದೇಶದೊಳಗಿನ ಜನರನ್ನು ಒಬ್ಬರ ವಿರುದ್ಧ ಎತ್ತಿಕಟ್ಟಿ ಯುದ್ಧವನ್ನು ಅನಿವಾರ್ಯವಾಗುವಂತೆ ಮಾಡುವುದು. ನಂತರ ಹಣಕಾಸಿನ, ಶಸ್ತ್ರಾಸ್ತ್ರಗಳ ಪೂರೈಕೆ ಮಾಡುವುದು. ಶ್ರೀಮಂತ ದೇಶಗಳಿಗೆ ತಾವು ತಯಾರಿಸಿಟ್ಟುಕೊಂಡಿರುವ ಶಸ್ತ್ರಾಸ್ತ್ರಗಳ ವ್ಯಾಪಾರಕ್ಕೆ ಮಾರುಕಟ್ಟೆಯನ್ನು ಯುದ್ಧ ನಿರತ ದೇಶಗಳು ಒದಗಿಸುತ್ತವೆ.

ಅಮೆರಿಕಾ ಹಾಗೂ ಇತರ ಮಿತ್ರ ರಾಷ್ಟ್ರಗಳು ತೆಗೆದುಕೊಂಡಿರುವ ನಿಲುವು ಅಮೇರಿಕಾದ ಆಂತರಿಕ ಉದ್ದೇಶವನ್ನು ಬಯಲು ಗೊಳಿಸಿದೆ. ಇತ್ತೀಚೆಗೆ ಇರಾಕ್ ಮೇಲಿನ ಆರ್ಥಿಕ ನಿರ್ಬಂಧಗಳನ್ನು ಮುಂದುವರಿಸುವಲ್ಲಿ ಅಮೆರಿಕಾ ಯಶಸ್ವಿಯಾಗಿದೆ. ವಿಶ್ವ ತೈಲ ಬೆಲೆಯನ್ನು ನಿಯಂತ್ರಿಸುವುದು ಉದ್ದೇಶವಾಗಿದೆ. ಯುದ್ಧವನ್ನು ಮುಂದುವರಿಸುವುದು ಅಮೆರಿಕಾಕ್ಕೆ ಅತ್ಯಗತ್ಯವಾಗಿದೆ. ಮುಖ್ಯ ಉದ್ದೇಶವಾಗಿದೆ. ಯುದ್ಧವನ್ನು ಮುಂದುವರಿಸುವುದರಿಂದ ತನ್ನಲ್ಲಿರುವ ನವೀನ ಸ್ವರೂಪದ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸುವ ಅವಕಾಶ ದೊರೆಯುತ್ತದೆ. ಜೊತೆಗೆ ಶಸ್ತ್ರಾಸ್ತ್ರಗಳ ಮಾರುಕಟ್ಟೆಯ ಬೇಡಿಕೆಯು ತೀವ್ರಗೊಳ್ಳುತ್ತದೆ. ವಿಶ್ವದಲ್ಲಿಯೇ ಶಸ್ತ್ರಾಸ್ತ್ರಗಳನ್ನು ತಯಾರಿಸುವ ಮೊದಲನೆಯ ದೇಶವೆಂದರೆ ಅಮೇರಿಕಾ. ಈ ಸ್ವಂತ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವುದಕ್ಕೋಸರ ಪ್ರಜಾಪ್ರಭುತ್ವದ ಮುಖವಾಡ ಹಾಕಿರುವ ಅಮೆರಿಕಾ ಬೆಂಬಲ ನೀಡುತ್ತಿರುವುದು ಮಿಲಿಟರಿ ಹಾಗೂ ಮತಾಂಧ ಸರ್ಕಾರಗಳಿಗೆ.

ಈಗ ಅಮೆರಿಕಾ ಆಫ್ಘಾನಿಸ್ತಾನದ ವಿರುದ್ಧ ನಡೆಸುತ್ತಿರುವ ಕಾರ್ಯಾಚರಣೆ ಕೇವಲ ಅದು ಆಫ್ಘಾನಿಸ್ತಾನಕ್ಕೆ ಸೀಮಿತವಾಗಿದೆ ಎಂದು ಭಾವಿಸಲು ಸಾಧ್ಯವಿಲ್ಲ. ಅಮೆರಿಕಾ ತನ್ನ ಪ್ರಾಬಲ್ಯವನ್ನು ವಿಸ್ತರಿಸುವ ಉದ್ದೇಶವನ್ನು ಹೊಂದಿರುವುದು ಸ್ಪಷ್ಟವಾಗಿದೆ. ತನ್ನ ಮಾರುಕಟ್ಟೆಯ ಹರವನ್ನು ವಿಸ್ತರಿಸುವ ಆಸೆ ಅಮೆರಿಕಕ್ಕೆ ಇದೆ.

ಸೋವಿಯತ್ ಒಕ್ಕೂಟದ ಅವನತಿ ವಿಶ್ವದಲ್ಲಿ ಇಂತಹ ದುರಂತಗಳಿಗೆ ಸುಲಭ ಹಾದಿಯನ್ನು ನಿರ್ಮಿಸಿದೆ. ಸಮಾಜವಾದದ ತಾತ್ವಿಕ ಪರಿಕಲ್ಪನೆ ಬಂಡವಾಳಶಾಹಿ ದೇಶಗಳಿಗೆ ಒಂದು ದೊಡ್ಡ ಸವಾಲಾಗಿತ್ತು. ರಷ್ಯಾದಲ್ಲಿ ಸಮಾಜವಾದಿ ಸರ್ಕಾರದ ಪತನ ಅಮೇರಿಕಾದ ಸಾಮ್ರಾಜ್ಯಶಾಹಿ ನೀತಿಯನ್ನು ಜಾರಿಗೆ ತರಲು ಪೂರಕವಾದ ವಾತಾವರಣವನ್ನು ಹುಟ್ಟುಹಾಕಿದೆ. ಚೀನಾ ಒಂದು ಪ್ರಭಲ ದೇಶವಾಗಿ ಹೊರ ಹೊಮ್ಮುತ್ತಿರುವುದು ಅಮೆರಿಕಾಕ್ಕೆ ಒಂದು ಚಿಂತೆಯಾಗಿದೆ.

ಬಿನ್ ಲ್ಯಾಡನ್‌ನನ್ನು, ಸೆಪ್ಟೆಂಬರ್ 11ರ ದುರಂತವನ್ನು ನೆಪವಾಗಿರಿಸಿಕೊಂಡು ಅಮೇರಿಕಾ ಏಷ್ಯಾ ವಲಯದಲ್ಲಿ ತನ್ನ ನಿಯಂತ್ರಣದ ಹಸ್ತವನ್ನು ಚಾಚುತ್ತಿರುವುದು ಸ್ಪಷ್ಟವಾಗಿದೆ. ಈ ಹಿನ್ನಲೆಯಲ್ಲಿ ಅಮೆರಿಕಾ ಹಾಗೂ ಮಿತ್ರ ರಾಷ್ಟ್ರಗಳು ಭಯೋತ್ಪಾದನೆಯ ವಿರುದ್ಧ ಯುದ್ಧ ಸಾರುತ್ತಿರುವುದು ಎಷ್ಟರ ಮಟ್ಟಿಗೆ ವಾಸ್ತವ ಸಂಗತಿ? ಈ ದೇಶಗಳೇ ಭಯೋತ್ಪಾದನೆಯನ್ನು ನೀರೆರೆದು ಪೋಷಿಸಿ, ಜಾಗತಿಕ ಮಟ್ಟದಲ್ಲಿ ಬೆಳೆಸಿದ್ದು. ಈ ಭಯೋತ್ಪಾದನೆಯ ವಿರುದ್ಧ ಯುದ್ಧ ಸಾರಿರುವ ಹಿಂದಿರುವ ಉದ್ದೇಶವೇನು? ಪ್ರಜಾಪ್ರಭುತ್ವದ ಮುಖವಾಡ ಹಾಕಿ ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಎಂತಹ ಶಕ್ತಿಗಳಿಗಾದರೂ ಬೆಂಬಲ ನೀಡಿ ಬೆಳೆಸುವ ಈ ದೇಶಗಳ ಕುಟಿಲ ನೀತಿಯನ್ನು ತೃತೀಯ ಜಗತ್ತಿನ ರಾಷ್ಟ್ರಗಳು ಕಣ್ತೆರೆದು ನೋಡಬೇಕಾಗಿದೆ.

ಮುಲ್ಲಾ ಉಮರನ ಕಳೆದುಹೋದ ಕಣ್ಣು

ಬಿ. ಎಂ. ಹನೀಫ್

ಇರುಳು ಹಗಲೆನ್ನದ ಹಾಗೆ
ಬಂದೂಕುಗಳು ಬೆಂಕಿ ಉಗುಳುತ್ತಿದ್ದ
ಪಾಮೀರ್ ಪರ್ವತಶ್ರೇಣಿಯ ಬಂಡೆಕತ್ತಲೆಯಲ್ಲಿ
ನೀಳಗಡ್ಡದ ಆ ನಿಲುವಂಗಿ-ಮುಲ್ಲಾ ಉಮರ್
'ಅಲ್ಲಾಹು ಅಕ್ಬರ್' ಎಂದು ನೀಲಾಕಾಶಕ್ಕೆ ಎರಡೂ ಕೈಗಳನ್ನೆತ್ತಿ
ಕೆಳಗಿಳಿಸಿ
ಇನ್ನೇನು ಎದೆಯ ಮೇಲೆ ಕಟ್ಟಬೇಕೆನ್ನುವಾಗ....
'ಢಮಾರ್' ಎಂದು ಸಿಡಿಯಿತು ಬಾಂಬು.

ಅದು ಮಗ್ರಿಬ್ ನಮಾಜಿನ ಸಮಯ
ಅಲ್ಲಿ ಇಳಿಸಂಜೆಯ ಕೆಂಪು ಆಕಾಶವಿರಲಿಲ್ಲ
ದಣಿದ ರೆಕ್ಕೆಗಳನ್ನು ನಿಧಾನಕ್ಕೆ ಬೀಸಿ ಮನೆಗೆ ಮರಳುವ
ಬೆಳ್ಳಕ್ಕಿಗಳ ಸಾಲೂ ಇರಲಿಲ್ಲ
ಸಿಡಿದ ಬಾಂಬು ಸಹಸ್ರಚೂರುಗಳಾಗಿ
ಧೂಳು, ರಕ್ತ, ಹೊಗೆ, ಕೆಮ್ಮು, ಕಫ
ಎಲ್ಲ ಮಂಜು ಮಂಜಾಗಿ....ಕೊನೆಗೆ ಕತ್ತಲೆಯಲ್ಲಿ
ನೆಲದಿಂದ ಮೇಲೆದ್ದ ಮುಲ್ಲಾ ಉಮರ್ ಆಕಾಶ ದಿಟ್ಟಿಸಿದಾಗ
ತೆರೆದದ್ದು ಒಂದೇ ಕಣ್ಣು!

ಒಂದೇ ಕಣ್ಣಿನಲ್ಲಿ ಮನುಷ್ಯ ಎಷ್ಟನ್ನು ನೋಡಬಲ್ಲ?
ಯೋಚಿಸುತ್ತಾ ನಾನೂ ಹಾಗೆಯೇ ಮುಚ್ಚಿದೆ ಒಂದು ಕಣ್ಣು
ಇನ್ನೊಂದನ್ನು ತೆರೆದೆ
ತೆರೆದ ಕಣ್ಣಿಗೆ ಕಂಡದ್ದು ಎಲ್ಲ ಅರ್ಧ......ಅರ್ಧಂಬರ್ಧ....
ಇನ್ನು ಸತ್ಯವಾದರೂ ಹೇಗೆ ಕಂಡೀತು ಪೂರ್ಣ?

ಎಡಪಂಥೀಯ ರಷ್ಯನ್ನರ ಜತೆಗಿನ ಯುದ್ಧದಲ್ಲಿ ಮುಲ್ಲಾ ಉಮರ್
ಕಳೆದುಕೊಂಡದ್ದು ಬಲ ಕಣ್ಣೇ ಇರಬಹುದೆ?
ಕಣ್ಣು ಯಾವುದಾದರೇನು
ಒಂದು ಕಣ್ಣಿಗೆ ಕಂಡದ್ದು ಮಾತ್ರ ಅರ್ಧಸತ್ಯ.

ಹಾಗೆ ಯುದ್ಧದಲ್ಲಿ ಉಮರನ ಒಂದು ಕಣ್ಣನ್ನು ಕಿತ್ತುಕೊಂಡೊಯ್ದ
ರಷ್ಯನ್ನರಿಗಾದರೂ ದಕ್ಕೀತೆ ಪೂರ್ಣಸತ್ಯ
ಎಂದರೆ ಅದೂ ಇಲ್ಲ...

ಎರಡೂ ಕಣ್ಣಿದ್ದು ಕುರುಡರಾಗಿದ್ದ ಆ ಎಡಪಂಥೀಯರು
ತಮ್ಮ ಕಣ್ಣಾಗಿದ್ದ ಕಮ್ಯುನಿಸಮ್ಮನ್ನೇ ಕಳೆದುಕೊಂಡರಲ್ಲ
ಆಗ ಉಮರನ ಆ ಒಂಟಿ ಕಣ್ಣು ಗಹಗಹಿಸಿ ನಕ್ಕಿರಬಹುದೆ?

ಇರುವ ಒಂದೇ ಒಂದು ಕಣ್ಣನ್ನಾದರೂ ಈ ಉಮರ್
ಉಳಿಸಿಕೊಂಡಾನೆಂದರೆ.....
ಆ ಕಣ್ಣಿಗೆ ಬಿದ್ದ ನ್ಯೂಯಾರ್ಕಿನ ಅವಳಿಗೋಪುರ
ಕಣ್ಣೊಳಗಿನ ಕಿಸುರಾಗಿ ಕಾಡಿ, ಭಯದ ಬಸುರಾಗಿ
ತಿಂಗಳು ತುಂಬುವ ಮುನ್ನವೇ ಗರ್ಭಾಘಾತ
ನಾಲ್ಕೂವರೆ ಸಾವಿರ ಮನುಷ್ಯರ
ಎರಡೂ ಕಣ್ಣುಗಳನ್ನು ಕಿತ್ತ ರಾಕ್ಷಸ ವಿಮಾನ.

ಹಾಗೆ ಅಲ್ಲಿ ನ್ಯೂಯಾರ್ಕಿನ ಬೀದಿಯಲ್ಲಿ ಬಿದ್ದ ರಕ್ತದ ಹನಿ
ಚಿಗಿತು, ಮೇಲೆದ್ದು ರಕ್ತಬೀಜಾಸುರ ಸಂತತಿಯಾಗಿ
ಈಗ ಕಾಬೂಲಿನ ಬೀದಿಗಳಲ್ಲಿ
ರಕ್ತಸಿಕ್ತ ಕಂದಮ್ಮಗಳ ಸಾವಿರ ಕಣ್ಣುಗಳ ಮೇಲೆ ನೊಣಗಳ ರಾಶಿ.

ಕಣ್ಣಿಗೆ ಕಣ್ಣು, ಕೈಗೆ ಕೈ, ಕಾಲಿಗೆ ಕಾಲು
ಹಮ್ಮುರಾಬಿಯ ಕಲ್ಲುಶಾಸನ ಹೆಜ್ಜೆಹೆಜ್ಜೆಗೆ ತೊಡರುತ್ತಿದ್ದರೆ
ಮಾತಿಗೆ ಮಾತು, ಹೃದಯಕ್ಕೆ ಹೃದಯ
ಮನಸ್ಸಿಗೆ ಮನಸ್ಸು ಕೊಡುವುದಾದರೂ ಹೇಗೆ?

ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ
ಅಂಗಹೀನರ ಮೇಲೆ ಅಮೆರಿಕಾಸುರನ ಮೂರನೆಯ ಕಣ್ಣು
ಒಳಗಣ್ಣಿಲ್ಲದ ಕುರುಡು ಜಗತ್ತಿನಲ್ಲಿ ಬಾಂಬುಗಳೇ ಬ್ರೆಡ್ಡು
ರಕ್ತವೇ ಸಾರು
ಹಸಿದ ತೋಳದ ಹಿಂದೆ ಕುರಿಗಳ ಸಾಲು ಸಾಲು.

ಕೊನೆಗೆ ಪ್ರಾರ್ಥನೆ ಇಷ್ಟೇ-
ಹೂವು ಬಿದ್ದ ಕಣ್ಣಿನವರು
ನಡೆವ ದುರ್ಗಮ ದಾರಿಯಲ್ಲಿ ಹೂವರಳಲಿ
ರಂಜಾನಿನ ಚಂದಿರ ಶಾಂತಿಯ ಬೆಳದಿಂಗಳು ಚೆಲ್ಲಲಿ.

ಆಮೀನ್

ಯುದ್ಧ - ಯಾರ ಆಯ್ಕೆ?

ಸೆಪ್ಟೆಂಬರ್ 11, 2001 : ಪೆಂಟಗಾನ್ ಹಾಗೂ ವಿಶ್ವ ವಾಣಿಜ್ಯ ಕೇಂದ್ರಗಳ ಮೇಲೆ ದಾಳಿ ನಡೆದಾಗಿನಿಂದ ಪ್ರಪಂಚದ ವರ್ತಮಾನಗಳೆಲ್ಲ ಅಮೆರಿಕಾ ದೇಶವನ್ನೇ ಕೇಂದ್ರವಾಗಿ ಇಟ್ಟುಕೊಂಡಿವೆ. ತನಗೆ ಗೊತ್ತಿಲ್ಲದವರ ವಿರುದ್ಧ ಯುದ್ಧ ನಡೆಸಿ ಜಯ ಪಡೆದಿದ್ದೇನೆಂದು ಅಮೆರಿಕ ಭಾವಿಸಿದೆ. ತನ್ನ ವೈರಿ ಯಾರು? ಯಾಕೆ? ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳುವ ಮೊದಲೇ ಅಮೆರಿಕಾ ಭಯೋತ್ಪಾದನೆಯ ವಿರುದ್ಧ ಅಂತರ್‌ರಾಷ್ಟ್ರೀಯ ಒಕ್ಕೂಟವೊಂದನ್ನು ಏರ್ಪಡಿಸಿ ವಾಯು, ಜಲ, ನೆಲ ಪಡೆಯ ಸೈನ್ಯವನ್ನೆಲ್ಲ ಬಳಸಿಕೊಂಡು ಯುದ್ಧ ಮಾಡುತ್ತಿದೆ. ಮಾಧ್ಯಮವನ್ನು ತನ್ನ ಪರವಾಗಿಸಿಕೊಂಡು ಯುದ್ಧಕ್ಕೆ ಬದ್ಧರಾಗುವಂತೆ ಮಾಡಿದೆ.



ಅಮೆರಿಕಾದ ಮೇಲೆ ದಾಳಿ ನಡೆದಾಕ್ಷಣ, ಕೋಮೋದ್ರಿಕ್ತವಾದ ಅಮೇರಿಕಾದ ಜನರಿಗಾಗಿ ಅವರು ಒಬ್ಬ ವೈರಿಯನ್ನು ಹೆಸರಿಸಲೇ ಬೇಕಿತ್ತು. ಇಲ್ಲದಿದ್ದರೂ ಒಬ್ಬರನ್ನು ಸೃಷ್ಟಿಸಲೇ ಬೇಕಿತ್ತು. ಯುದ್ಧ ಪ್ರಾರಂಭವಾದ ಮೇಲೆ ತನ್ನಿಂದ ತಾನಾಗಿ ಒಂದು ಸಂದರ್ಭ, ತರ್ಕ, ಸಮರ್ಥನೆ ಸಿಗುತ್ತದೆ ಎನ್ನುವುದರ ಅರಿವು ಅವರಿಗಿತ್ತು. ಯುದ್ಧದ ದಾಹ ಅಮೇರಿಕನ್ನರ ಸಹಜ ಪ್ರವೃತ್ತಿ. ಆದರೆ ಈಗ ಕಾಣಿಸಿಕೊಂಡದ್ದು ಹೊಸ ಪ್ರವೃತ್ತಿಯಲ್ಲಿ ಮಾತ್ರ. ಹಳೆಯ ಹೆಂಡವನ್ನು ಹೊಸ ಬಾಟಲಿಗೆ ಹಾಕಿದಂತೆ.

ಅಮೆರಿಕಾದ ಅಧ್ಯಕ್ಷ ಬುಷ್-ಅಮೆರಿಕಾದ ವೈರಿಗಳೂ ಸ್ವಾತಂತ್ರ್ಯದ ವೈರಿಗಳು ಎಂದು ಬಣ್ಣಿಸಿದ್ದಾರೆ. "ಭಯೋತ್ಪಾದಕರು ನಮ್ಮನ್ನೇಕೆ ದ್ವೇಷಿಸುತ್ತಾರೆ" ಎಂಬ ಅಮೆರಿಕನ್ನರ ಪ್ರಶ್ನೆಗೆ ಆತ ಉತ್ತರಿಸಿದುದು ಹೀಗೆ: ಅವರು ನಮ್ಮ ಸ್ವಾತಂತ್ರ್ಯವನ್ನು ಅಂದರೆ ಅಮೆರಿಕಾದ ಧಾರ್ಮಿಕ ಸ್ವಾತಂತ್ರ್ಯ, ಮಾತಿನ ಸ್ವಾತಂತ್ರ್ಯ, ಮತದಾನದ ಸ್ವಾತಂತ್ರ್ಯವನ್ನು ವಿರೋಧಿಸುತ್ತಾರೆ. ಅಮೆರಿಕಾ ಸರ್ಕಾರ ಹೇಳುವುದನ್ನು ಅಮೆರಿಕಾದ ಜನತೆ ನಂಬಬೇಕು. ಸರ್ಕಾರ ವೈರಿ ಎಂದವನು ವೈರಿಯಾಗಿರುತ್ತಾನೆ, ಸರ್ಕಾರ ಹೇಳುವ ಉದ್ದೇಶವೇ ವೈರಿಯ ಉದ್ದೇಶವಾಗಿರುತ್ತದೆ - ಎಂದು ಜನತೆ ನಂಬಬೇಕು. ಇದಕ್ಕಾವ ಸಾಕ್ಷಿ, ಪುರಾವೆಗಳು ಬೇಕಿಲ್ಲ.

ತಮ್ಮ ಮಿಲಿಟರಿ, ಆರ್ಥಿಕ, ಹಾಗೂ ತಾಂತ್ರಿಕ ವ್ಯೂಹಗಳಿಗಾಗಿ ಸಾರ್ವಜನಿಕರಿಗೆ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಅವರ ಸ್ವತಂತ್ರ್ಯ ಬದುಕಿನ ರೀತಿಗಳನ್ನು ವೈರಿಗಳು ನಾಶಪಡಿಸಲಿಚ್ಛಿಸುತ್ತಾರೆ ಎಂದು ಹೇಳಿ ಸರ್ಕಾರ ಅವರನ್ನು ನಂಬಿಸಬೇಕಾಗಿದೆ. ಈಗಿರುವ ದುಃಖ, ಸಿಟ್ಟಿನ ಸನ್ನಿವೇಶದಲ್ಲಿ ಇಂತಹ ಅಂಶಗಳನ್ನು ಸುಲಭವಾಗಿ ಬಳಸಿಕೊಳ್ಳಬಹುದಾಗಿದೆ. ಒಂದು ಪಕ್ಷ ಇವುಗಳೇ ನಿಜವಾಗಿದ್ದಿದ್ದಲ್ಲಿ ಅಮೇರಿಕಾದ ಆರ್ಥಿಕತೆ, ಮಿಲಿಟರಿಗೆ ಸಂಕೇತಗಳಾದ ಪೆಂಟಗನ್, ವಿಶ್ವವಾಣಿಜ್ಯ ಸಂಸ್ಥೆಗಳ ಬದಲು ಸ್ವಾತಂತ್ರ್ಯದ ಪ್ರತೀಕಗಳಾದ ಕಟ್ಟಡ ಪ್ರತಿಮೆಗಳನ್ನು ನಾಶಮಾಡಬೇಕಿತ್ತು.

ದ್ವೇಷಕ್ಕೆ ಒಳಗಾದವರು ಅಮೆರಿಕಾದ ಜನರಲ್ಲ, ಆದರೆ ಸರ್ಕಾರದ ಪಾಲಿಸಿ, ಯೋಜನೆಗಳು ಎಂಬುದನ್ನು ಅಮೆರಿಕಾದ ಜನತೆ ಅರಿಯಬೇಕಾಗಿದೆ. ಅಲ್ಲಿ ನಡೆದ ಘಟನೆ ಭೀಕರ ದುರಂತ ಎಂಬುದರಲ್ಲಿ ಎರಡು ಮಾತಿಲ್ಲ. ಅವರ ದುಃಖ ಅವರ್ಣನೀಯವಾದುದು ಎಂಬುದರಲ್ಲಿ ಸಂದೇಹವಿಲ್ಲ. ಆದರೆ 11ರ ದುರಂತ ಯಾಕೆ ನಡೆಯಿತು ಎಂಬುದನ್ನು ಅರ್ಥ ಮಾಡಿಕೊಳ್ಳಲು ಇದೊಂದು ಅವಕಾಶ. ಆದರೆ ಅದರ ಬದಲು ಇಡಿಯ ಜಗತ್ತು ಅವರ ದುಃಖಕ್ಕೆ ಸ್ಪಂದಿಸುವ ಹಾಗೂ ಅದಕ್ಕಾಗಿ ಹಗೆತನ ತೀರಿಸಿಕೊಳ್ಳುವ ಅವಕಾಶವಾಗಿ ಸೆಪ್ಟೆಂಬರ್ 11ರ ದುರಂತವನ್ನು ಬಳಸಿಕೊಳ್ಳಲಾಗುತ್ತಿದೆ. ಹಾಗಾದರೆ ಇನ್ನೂ ಕಠಿಣವಾದ ಸಂಗತಿಗಳನ್ನು ನಾವು ಹೇಳಬೇಕಾಗುತ್ತದೆ, ಕಠಿಣವಾದ ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ. ನಮ್ಮ ನೋವು, ಹತಾಶೆಗಳಿಗಾಗಿ ನಾವು ದ್ವೇಷಿಸಲ್ಪಟ್ಟಿರುವ, ನಿರ್ಲಕ್ಷಿಸಲ್ಪಟ್ಟಿರುವ, ಕ್ರಮೇಣ ಮೂಕರಾಗಿಸಿರುವ ಸತ್ಯಗಳನ್ನೂ ನಾವು ಹೇಳಬೇಕಾಗುತ್ತದೆ.

ಸೆಪ್ಟೆಂಬರ್ 11ರ ಆಕ್ರಮಣಕಾರಿಗಳ ಉದ್ದೇಶಗಳು ನಮಗಿನ್ನೂ ಸ್ಪಷ್ಟವಾಗಿಲ್ಲ. ಯಾವ ರಾಜಕೀಯ ಸಂದೇಶವನ್ನೂ ಅವರು ಕೊಟ್ಟಿಲ್ಲ. ಆತ್ಮಹತ್ಯೆಯ ಚೀಟಿಗಳಿಲ್ಲ. ಯಾರೂ ಕಾರ್ಯದ ಹೊಣೆಗಾರಿಕೆಯನ್ನು ಒಪ್ಪಿಕೊಂಡಿಲ್ಲ. ಹಾಗಾಗಿ ರಾಜಕಾರಣಿಗಳು, ರಾಜಕೀಯ ವಕ್ತಾರರು, ಬರಹಗಾರರು ತಮ್ಮ ತಮ್ಮ ವ್ಯಾಖ್ಯಾನಗಳನ್ನೇ ನೀಡುವಂತಹ ಸನ್ನಿವೇಶದಲ್ಲಿ ನಾವು ಈ

ಆಕ್ರಮಣವನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ವ್ಯಾಖ್ಯಾನ, ಕಲ್ಪನೆ, ಎಲ್ಲವೂ ಸರಿ. ಆದರೆ ಯುದ್ಧ? ಹೇಳುವುದೆಲ್ಲವನ್ನೂ ಜಾಗ್ರತೆಯಾಗಿ ಹೇಳಲೇಬೇಕಿದೆ. ಅಮೆರಿಕಾ ಅಂತರ್ ರಾಷ್ಟ್ರೀಯ ಭಯೋತ್ಪಾದನೆಯ ವಿರುದ್ಧದ ಒಕ್ಕೂಟದಲ್ಲಿ ತನ್ನನ್ನು ಗುರುತಿಸಿ ಕೊಂಡಿದೆ. ಇದು ದೇವರ ಸಂದೇಶ ಎನ್ನುವ ರೀತಿಯಲ್ಲಿ ಎಲ್ಲಾ ದೇಶಗಳಿಗೆ ಆಹ್ವಾನ ನೀಡುತ್ತಿದೆ. ಮೊದಲು ತನ್ನನ್ನು 'ಆಪರೇಷನ್ ಇನ್‌ಫೈನೆಟ್ ಜಸ್ಟೀಸ್' ಎಂದು ಕರೆದುಕೊಂಡು - ನಂತರ ಇದು ಅಲ್ಲಾನನ್ನು ನಂಬುವವರಿಗೆ ಅವಮಾನಿಸಿದಂತೆ ಎಂಬ ಅರ್ಥ ಬರುತ್ತಿದೆ ಎಂದು ಗೊತ್ತಾದ ಮೇಲೆ 'ಆಪರೇಷನ್ ಎಂಡ್ಯೂರಿಂಗ್ ಫ್ರೀಡಂ' ಎಂಬ ಹೆಸರಿನಲ್ಲಿ ಗುರುತಿಸಿಕೊಂಡಿದ್ದಾರೆ.

ಈ ಇನ್‌ಫೈನೆಟ್ ನ್ಯಾಯ, ಅಥವಾ ಸ್ವಾತಂತ್ರ್ಯದ ಉಳಿಸುವಿಕೆ ಯಾರಿಗೋಸ್ಕರ? ಇದು ಅಮೆರಿಕಾದ ಭಯೋತ್ಪಾದನೆಯ ವಿರುದ್ಧ ಹೋರಾಟವೋ ಅಥವಾ ಜಗತ್ತಿನ ಭಯೋತ್ಪಾದನೆಯ ವಿರುದ್ಧ ಹೋರಾಟವೋ? 7000 ಜನರ ಬದುಕಿಗೆ ಎಷ್ಟು ಸಾವಿರ ಬದುಕಿನ ನಾಶದ ಹೋರಾಟಕ್ಕೆ ಈ ಹುನ್ನಾರ?

ಅಮೆರಿಕಾದ ಆರ್ಥಿಕ ಬಲುವಳಿಗಳಿಂದಾಗಿ ಇರಾಕಿನ 500,000 ಮಕ್ಕಳು ಅಸುನೀಗಿದರು. ಈ ಬಗ್ಗೆ ಅಮೆರಿಕಾದ ಸೆಕ್ರಟರಿ ಮ್ಯಾಡ್‌ಲೈನ್ ಆಲ್‌ಬ್ರೈಟ್‌ರವರ ಅಭಿಪ್ರಾಯ ಕೇಳಿದಾಗ-ಇದು ಕಠಿಣವಾದ ಆಯ್ಕೆಯಾಗಿತ್ತು. ಆದರೆ ಅವರು ತೆತ್ತ ಬೆಲೆ ಯೋಗ್ಯವಾದದ್ದು ಎಂದರು. ಹೀಗೆ ಹೇಳಿದುದಕ್ಕಾಗಿ ಆಕೆ ತನ್ನ ಕೆಲಸ ಕಳೆದುಕೊಳ್ಳಲಿಲ್ಲ. ಅಮೆರಿಕಾದ ಅಭಿಪ್ರಾಯ, ಆಕಾಂಕ್ಷೆಗಳನ್ನು ಪ್ರತಿನಿಧಿಸುತ್ತಾ ಆಕೆ ಪ್ರವಾಸ ಮಾಡುತ್ತಲೇ ಇದ್ದಳು. ಮಕ್ಕಳು ಸಾಯುತ್ತಲೇ ಇದ್ದರು.

ಇದು 'ಇನ್‌ಫೈನೆಟ್ ಜಸ್ಟೀಸ್'! ಈ ನ್ಯಾಯ ಎಷ್ಟು ಜನ ಇರಾಕಿಗಳ ಬದುಕನ್ನು ನಾಶ ಮಾಡುತ್ತಿದೆ? ಎಷ್ಟು ಜನ ಆಫ್ಘಾನ್ನರನ್ನು ಸತ್ತ ಅಮೆರಿಕನ್ನರಿಗಾಗಿ ಬಲಿತೆಗೆದುಕೊಳ್ಳುತ್ತದೆ. ಎಷ್ಟೋ ಜನ ಹೆಂಗಸರು, ಮಕ್ಕಳನ್ನು ಬಲಿ ತೆಗೆದುಕೊಳ್ಳುತ್ತದೆ. ಜಗತ್ತಿನ ಬಲಿಷ್ಠ ರಾಷ್ಟ್ರಗಳು ಅನೇಕಬಾರಿ ಯುದ್ಧದಲ್ಲಿ ನಾಶವಾದ ಆಫ್ಘಾನಿಸ್ತಾನದ ಗೋರಿಗಳನ್ನು ಮತ್ತೆ ಕೆದಕತೊಡಗಿವೆ.

ಆಫ್ಘಾನಿಸ್ತಾನದ ಆರ್ಥಿಕತೆ ಪತನಗೊಂಡಿದೆ. ಅಲ್ಲಿ ನಾಶ ಮಾಡಲು ದೊಡ್ಡ ಪಟ್ಟಣಗಳಿಲ್ಲ, ದೊಡ್ಡ ಹೆದ್ದಾರಿಗಳಿಲ್ಲ, ಕೈಗಾರಿಕಾ ಕಾಂಪ್ಲೆಕ್ಸ್‌ಗಳಿಲ್ಲಿ, ನೀರಿನ ಪ್ಲ್ಯಾಂಟ್‌ಗಳಿಲ್ಲ. ಜಮೀನುಗಳು ಸಾಮೂಹಿಕ ಗೋರಿಗಳ ಸ್ಥಾನಗಳಾಗಿವೆ. ಹಳ್ಳಿಗಾಡು ಭೂಮಿ-ಗಣಿಪ್ರದೇಶಗಳಿಂದ ಆವೃತವಾಗಿದೆ. ಅಲ್ಲಿ ಸೈನಿಕರು ಹೋಗುವುದಕ್ಕಾಗಿ ಅಮೆರಿಕನ್ನರು ಮೊದಲು ರಸ್ತೆಯನ್ನು ಮಾಡಿ ನಂತರ ಸೈನಿಕರನ್ನು ಸಾಗಿಸಬೇಕಾಗುತ್ತಿದೆ.

ಅಮೆರಿಕಾದ ಆಕ್ರಮಣಕ್ಕೆ ಹೆದರಿ ಒಂದು ಮಿಲಿಯನ್ ಆಫ್ಘಾನ್ನರು ತಮ್ಮ ಮನೆಗಳಿಂದ ಓಡಿ ಹೋಗಿದ್ದಾರೆ. ಅಮೆರಿಕಾದ ಲೆಕ್ಕದ ಪ್ರಕಾರ ಎಂಟು ಮಿಲಿಯನ್ ಆಫ್‌ಘನ್ನರಿಗೆ ತುರ್ತು ಚಿಕಿತ್ಸೆಯ ಅವಶ್ಯಕತೆ ಇದೆ. ಆಹಾರ, ಚಿಕಿತ್ಸೆಯ ಸರಬರಾಜು ಇಲ್ಲದಿರುವುದರಿಂದ ಸಂಬಂಧಪಟ್ಟ ಏಜೆನ್ಸಿಗಳು ಅಲ್ಲಿಂದ ಕಾಲ್ತೆಗಿಯುವಂತಾಗುತ್ತಿದೆ. ಬಿ.ಬಿ.ಸಿ. ವರದಿಯ ಪ್ರಕಾರ ಇದು ಇಂದಿನ ಸಂದರ್ಭದಲ್ಲಿ ನಡೆದ ಅತ್ಯಂತ ಕರಾಳವಾದ ಮಾನವ ದುರಂತ. ಹೊಸ ಶತಮಾನದ 'ಇನ್‌ಫೈನೈಟ್ ಜಸ್ಟೀಸ್' ವೀಕ್ಷಿಸುತ್ತಿದ್ದೇವೆ. ಕೊಲ್ಲುವುದನ್ನು ಕಾಯುತ್ತಲೇ ನಾಗರೀಕರು ಹಸಿವಿನಿಂದ ಸರಳುತ್ತಿದ್ದಾರೆ.

ಅಮೆರಿಕಾದಲ್ಲಿ ಆಫ್ಘಾನಿಸ್ತಾನವನ್ನು ಬಾಂಬಿನ ಮೂಲಕ ಶಿಲಾಯುಗಕ್ಕೆ ತಳ್ಳುವಂತಹ ಕಟುಮಾತುಗಳು ಕೇಳಿಬರುತ್ತಿವೆ. ಆದರೆ ಆಫ್ಘಾನಿಸ್ತಾನ ಇರುವುದೇ ಆ ಸ್ಥಿತಿಯಲ್ಲಿ. ಅದರ ಆ ಸ್ಥಿತಿಗೆ ಅಮೆರಿಕಾದ ಪಾತ್ರ ಮುಖ್ಯವಾದುದೇ ಆಗಿದೆ.

1979ರಲ್ಲಿ ಆಫ್ಘಾನಿಸ್ತಾನವನ್ನು ರಷ್ಯಾ ದಾಳಿ ಮಾಡಿದಾಗ ಅಮೆರಿಕಾದ CIA ಹಾಗೂ ಪಾಕಿಸ್ತಾನದ ISI ಆಫ್ಘಾನಿಸ್ತಾನದಲ್ಲಿ ರಕ್ಷಣಾತ್ಮಕ ಎನ್ನಿಸುವಂತಹ ಯುದ್ಧವನ್ನು ಆರಂಭಿಸಿದರು. ಆಫ್ಘಾನಿಸ್ತಾನವನ್ನು ಬಲಪಡಿಸಿ ಸೋವಿಯತ್ ರಷ್ಯಾದ ಕಮ್ಯುನಿಸ್ಟ್ ಬಲವನ್ನು ಮುರಿಯಲು ಪ್ರಯತ್ನಿಸಿದರು. ಇದಕ್ಕಾಗಿ ಮುಸ್ಲಿಂರಿಂದ ಪವಿತ್ರ ಯುದ್ಧವನ್ನು ಸ್ಫೂರ್ತಿಗೊಳಿಸಿದರು. 40 ಮುಸ್ಲಿಂ ದೇಶಗಳಿಂದ 100,000 ಸಾವಿರ ಜನರ ಮುಸ್ಲಿಂ ಯುವಕರನ್ನು ಸೈನಿಕರನ್ನಾಗಿ ರೆಕ್ರೂಟ್ ಮಾಡಿಕೊಂಡರು.

1989ರಲ್ಲಿ 10 ವರ್ಷಗಳ ರಕ್ತಪತನದ ನಂತರ ರಷ್ಯನ್ನರು ಆಫಘನ್ನ ನಾಗರೀಕತೆಯನ್ನು ದುಸ್ಥಿತಿಗೆ ತಳ್ಳಿ ಅಲ್ಲಿಂದ ಕಾಲ್ತೆಗೆದರು. CIA ಹಣದ ಹೊಳೆಯನ್ನು ಹರಿಸಿತು. ಶಸ್ತ್ರಗಳನ್ನು ಕಳುಹಿಸುತ್ತಲೇ ಇತ್ತು. ನೂರಾರು ಹೆರಾಯಿನ್ ಪ್ರಯೋಗ ಶಾಲೆಯನ್ನು ಆಫ್ಘಾನಿಸ್ತಾನದಲ್ಲಿ ತೆರೆಯಿತು. CIA ಬಂದ ಎರಡು ವರ್ಷದಲ್ಲಿ ಪಾಕಿಸ್ತಾನ-ಆಫ್ಘಾನಿಸ್ತಾನದ ಗಡಿನಾಡುಗಳೆಲ್ಲ ಹೆರಾಯಿನ್ ತಯಾರಿಕೆಯಲ್ಲಿ ಜಗತ್ತಿನಲ್ಲಿ ಪ್ರಥಮ ಸ್ಥಾನ ಪಡೆದವು. ವರ್ಷದ ಲಾಭವಾದ 100 ರಿಂದ 200 ಮಿಲಿಯನ್ ಹಣವನ್ನು ಮಿಲಿಟೆಂಟ್ಸ್‌ಗಳ ತರಬೇತಿಗೆ ಹಾಗೂ ಅವರಿಗೆ ಶಸ್ತ್ರಾಸ್ತ್ರ ಒದಗಿಸುವುದಕ್ಕೆ ಬಳಸಲಾಯಿತು.

1995ರಲ್ಲಿ ಅಷ್ಟೇನೂ ಭಯಸ್ಥವಾಗಿಲ್ಲದ, ಮೂಲಭೂತ ವಾದಿಗಳಾದ ತಾಲಿಬಾನ್ ಆಫ್ಘಾನಿಸ್ತಾನದಲ್ಲಿ ಅಧಿಕಾರಕ್ಕೆ ಬಂದಿತು. ಅದಕ್ಕೆ ಫಂಡ್ ಮಾಡಿದವರು ISI ನವರು ಹಾಗೂ ಪಾಕಿಸ್ತಾನದ ಅನೇಕ ರಾಜಕೀಯ ಪಕ್ಷಗಳು. ನಂತರ ತಾಲೀಬಾನ್ ಭಯೋತ್ಪಾದಕ ಚಟುವಟಿಕೆಗಳನ್ನು ಹಮ್ಮಿಕೊಂಡಿತು. ಅವರ ಜನರೇ ಅವರಿಗೆ ಬಲಿಪಶುಗಳಾದರು. ಮುಖ್ಯವಾಗಿ ಹೆಂಗಸರು.

ತಾಲೀಬಾನ್ ಸರ್ಕಾರ ಹುಡುಗಿಯರ ಶಾಲೆಗಳನ್ನು ಮುಚ್ಚಿದರು, ಸರ್ಕಾರಿ ಕೆಲಸದಿಂದ ಹೆಂಗಸರನ್ನು ತೆಗೆದು ಹಾಕಿದರು. ಶರಿಯತ್ ಕಾನೂನುಗಳನ್ನು ಮಹಿಳೆಯರ ಮೇಲೆ ಒತ್ತಾಯಪೂರ್ವಕವಾಗಿ ಹೇರಿದರು. ಇಂತಹ ಅಂಧ ಕಾನೂನಿನಡಿ 'ಅನೈತಿಕ' ಎನ್ನಲ್ಪಟ್ಟ ಮಹಿಳೆಯರನ್ನು ಕಲ್ಲಿನಿಂದ ಹೊಡೆದು ಸಾಯಿಸಿದರು. ವ್ಯಭಿಚಾರಿಗಳೆನ್ನಿಸಿಕೊಂಡ ವಿಧವೆಯರು ಜೀವಂತವಾಗಿ ಗೋರಿಗಳಾದರು. ತಾಲೀಬಾನ್ ಸರ್ಕಾರದ ಮಾನವೀಯ ಹಕ್ಕುಗಳ ಬಗ್ಗೆಗಿನ ದಾಖಲೆಗಳನ್ನು ಗಮನಿಸಿದರೆ, ಯುದ್ಧವಾಗಲೀ, ಅಥವಾ ನಾಗರಿಕರ ಜೀವನದ ಮೇಲೆ ಯುದ್ಧ ಭೀಕರವಾಗಿ ಉಂಟುಮಾಡುವ ಸಾವು ನೋವುಗಳಾಗಲೀ ಅವರನ್ನು ಅಲುಗಿಸಲು ಸಾಧ್ಯವೇ ಇಲ್ಲ. ಇದಕ್ಕಾಗಿ ತಮ್ಮ ಉದ್ದೇಶಗಳಿಂದ ಅವರು ಹಿಂತಿಗೆಯುವುದೂ ಇಲ್ಲ.

ರಷ್ಯಾ, ಅಮೆರಿಕ ಹಾಳಾದ ಆಫ್ಘಾನಿಸ್ತಾನವನ್ನು ಮತ್ತೆ ಹಾಳುಮಾಡಲು ಕೈ ಜೋಡಿಸಿರುವುದಕ್ಕಿಂತ ವ್ಯಂಗ್ಯ ಇನ್ನೊಂದಿದೆಯೇ? ನೀವು ದುಸ್ಥಿತಿಯನ್ನು ಮತ್ತೆ ದುಸ್ಥಿತಿಯನ್ನಾಗಿ ಮಾಡಬಲ್ಲಿರಾ? ಆಫ್ಘಾನಿಸ್ತಾನದ ಮೇಲೆ ಬೀಳುವ ಬಾಂಬುಗಳು ಹಾಳುಗೊಂಡಿರುವುದನ್ನು ಅಲುಗಾಡಿಸುತ್ತವೆ, ಹಳೆಯ ಸಮಾಧಿಗಳನ್ನು ಪುಡಿಗೊಳಿಸುತ್ತವೆ, ಸತ್ತವರನ್ನು ಅಲುಗಾಡಿಸುತ್ತವೆ.

ಆಫ್ಘಾನಿಸ್ತಾನದ ನಿರ್ಜನ ಭೂಪ್ರದೇಶ, ಸೋವಿಯತ್ ಒಕ್ಕೂಟದ ಮಸಣವಾದ ಹಾಗೆಯೇ ಅಮೆರಿಕ ಪ್ರಾಭಲ್ಯದ ಏಕಧ್ರುವ ಜಗತ್ತಿನ ಚಿಮ್ಮು ಹಲಗೆ ಕೂಡ.

ಸೆಪ್ಟೆಂಬರ್‌ಗಿಂತ ಮುಂಚೆ ಕೂಡಾ ಪಾಕಿಸ್ತಾನದ ಗಡಿಯಲ್ಲಿ 3 ಮಿಲಿಯನ್ ಆಫ್ಘಾನ್ನಿನ ನಿರಾಶಿತರು ಇದ್ದರು. ಪಾಕಿಸ್ತಾನದ ಆರ್ಥಿಕ ಸ್ಥಿತಿ ಕೂಡಾ ಪತನಗೊಳ್ಳುತ್ತಿದೆ. ಜನಾಂಗದ ಮೇಲಿನ ಹಿಂಸೆ, ಜಾಗತೀಕರಣ, ರಾಚನಿಕ ಹೊಂದಾಣಿಕೆ ಕಾರ್ಯಕ್ರಮಗಳ ಹಾಗೂ ಮಾದಕ ವಸ್ತುಗಳ ರಾಜರುಗಳು ದೇಶವನ್ನು ತುಂಡು ತುಂಡು ಮಾಡಿಹಾಕಿದ್ದಾರೆ. ಸೋವಿಯತ್ತನ್ನು ಎದುರಿಸಲು ಹುಟ್ಟಿಕೊಂಡ ಭಯೋತ್ಪಾದಕ ತರಬೇತಿ ಕೇಂದ್ರಗಳು, ಮದರಸಾಗಳು-ಡ್ರ್ಯಾಗನ್ನ್‌ನ ಹಲ್ಲುಗಳ ತರಹ ಬೆಳೆದು ಕೊಂಡಿದ್ದವು. ಪಾಕಿಸ್ತಾನದ ನೆರವಿನಿಂದ ತಾಲೀಬಾನ್ ಅಸ್ತಿತ್ವಕ್ಕೆ ಬಂದಿತು.

ಅಮೆರಿಕ ಇಂದು ಪಾಕಿಸ್ತಾನವನ್ನು ತನ್ನ ಹಿತ್ತಲಬದಿಯ ಸಾಕು ಪ್ರಾಣಿಯನ್ನು ಬಿಟ್ಟುಬಿಡಲು ಕೇಳುತ್ತಿದೆ. ಭಾರತ ಅಮೇರಿಕಾಕ್ಕೆ ತನ್ನ baseನ್ನು ಇಂಡಿಯಾದಲ್ಲಿ ಮಾಡಿಕೊಳ್ಳಲು ಕೇಳಿರುವುದು ಭಯಾನಕ ಸಂಗತಿ. ದುಸ್ಥಿತಿಯ ಆರ್ಥಿಕತೆ, ಹೊಂದಿರುವ ಸಂಕೀರ್ಣ ಸಾಮಾಜಿಕ ವ್ಯವಸ್ಥೆ ಹೊಂದಿರುವ ಯಾವುದೇ ಮೂರನೇ ಜಗತ್ತಿನ ದೇಶಕ್ಕೆ ಇಷ್ಟರಲ್ಲಿ ಗೊತ್ತಾಗಬೇಕಾದ ಸಂಗತಿಯೆಂದರೆ ಉನ್ನತ ಆರ್ಥಿಕತೆ ಹೊಂದಿರುವ ರಾಷ್ಟ್ರವನ್ನು ನಮ್ಮ ದೇಶಗಳಿಗೆ ಆಹ್ವಾನಿಸುವುದೆಂದರೆ ನಮ್ಮ ಗಾಜಿನ ಮೂಲಕ ಇಟ್ಟಿಗೆಯನ್ನು ಹಾಕಿ ಎಂದು ಕೇಳಿದ ಹಾಗೆ ಆಗುತ್ತದೆ.

'ಆಪರೇಶನ್ ಎಂಡ್ಯೂರಿಂಗ್ ಫ್ರೀಡಂ' - ಅಮೇರಿಕಾದ ಬದುಕಿನ ರೀತಿಯನ್ನು ಎತ್ತಿಹಿಡಿಯುವುದಾಗಿದೆ. ಇದು ಜಗತ್ತಿನಲ್ಲಿ ಹೆಚ್ಚು ಕೋಪ ಹಾಗೂ ಭಯೋತ್ಪಾದನೆಯನ್ನು ಹುಟ್ಟು ಹಾಕಿದೆ. ಅಮೇರಿಕಾದ ಸಾಮಾನ್ಯ ನಾಗರಿಕರು ಅನಿಶ್ಚತತೆಯಲ್ಲಿ ಬದುಕಬೇಕಾಗುತ್ತಿದೆ.

ಅಮೆರಿಕ ಸರ್ಕಾರ, ಅಷ್ಟೇ ಏಕೆ, ಇತರ ಸರ್ಕಾರಗಳೂ ಕೂಡಾ ಯುದ್ಧದ ಈ ಸನ್ನಿವೇಶವನ್ನು ನಾಗರಿಕ ಹಕ್ಕು, ಸ್ವಾತಂತ್ರ್ಯದ ಹಕ್ಕು, ಕಾರ್ಮಿಕರ ವಜಾ ಗೊಳಿಸುವಿಕೆ, ಧಾರ್ಮಿಕ ಹಾಗೂ ಇತರ ಹಿಂದುಳಿದವರನ್ನು ಹಿಂಸಿಸುವುದು, ಸಾರ್ವಜನಿಕ ವೆಚ್ಚ ಕಡಿಮೆಗೊಳಿಸಿ, ಎಲ್ಲಾ ಸಂಪನ್ಮೂಲಗಳನ್ನು ಕೂಡಿಸಿ ರಕ್ಷಣಾ ಇಲಾಖೆಗೆ ವೆಚ್ಚ ಮಾಡುತ್ತಾರೆ. ಅಮೇರಿಕ ಸರ್ಕಾರ ಭಯೋತ್ಪಾದನೆಯನ್ನು ಇನ್ನೂ ಹೆಚ್ಚು ಹಿಂಸೆ ಹಾಗೂ ಶೋಷಣೆಯಿಂದ ಹೋಗಲಾಡಿಸುತ್ತೇವೆನ್ನುವುದು ಮೂರ್ಖತನ. ಭಯೋತ್ಪಾದಕತೆ ರೋಗವಲ್ಲ, ಆದರೆ ಲಕ್ಷಣ, ಭಯೋತ್ಪಾದನೆಗೆ ದೇಶವಿಲ್ಲ. ಇದು ಇಡಿಯ ಜಗತ್ತಿನದು, ಬಹುರಾಷ್ಟ್ರೀಯ ಸಂಸ್ಥೆಗಳ ತರಹ.

ಭಯೋತ್ಪಾದನೆಯನ್ನು ಅರ್ಥ ಮಾಡಿಕೊಳ್ಳಬೇಕೆಂದರೆ ಅಮೆರಿಕ ಮೊದಲನೆಯದಾಗಿ ಸಂತೋಷ, ದುಃಖ, ಕಥೆ, ಹಾಡು ಹಾಗೂ ಮೂಲಭೂತವಾಗಿ ಹಕ್ಕುಗಳನ್ನು ಹೊಂದಿರುವ ಇತರ ರಾಷ್ಟ್ರಗಳೊಡನೆ, ಜನರೊಡನೆ ಈ ಭೂಮಿಯನ್ನು ಹಂಚಿ ಕೊಂಡಿದ್ದೇನೆಂದು ಒಪ್ಪಿಕೊಳ್ಳಬೇಕು. ಆದರೆ ಅಮೇರಿಕಾದ ರಕ್ಷಣಾ ಸೆಕ್ರಟರಿ ಹೇಳುವ ವಿಜಯವನ್ನಲ್ಲ. ಅವನ ಪ್ರಕಾರ ವಿಜಯವೆಂದರೆ ಜಗತ್ತಿನ ಇತರರಿಗೆ ಅಮೇರಿಕನ್ನರನ್ನು ಅವರದೇ ರೀತಿ ಬದುಕಲು ಬಿಡಬೇಕೆಂದು ಇಡೀ ಜಗತ್ತಿಗೆ ತಿಳಿಸಿ ಹೇಳುವುದಾಗಿದೆ.

ಸೆಪ್ಟೆಂಬರ್ 11ರ ಆಕ್ರಮಣ - ಅತ್ಯಂತ ಹೀನಾಯವಾದ ಕ್ರಿಯೆ. ಬಹುಶಃ ಸಂದೇಶ ಬಿನ್ ಲ್ಯಾಡನ್ನದಿರಬಹುದು. ಆದರೆ ಇದನ್ನು ಬಹುಶಃ ಅಮೇರಿಕಾದ ಹಳೆಯ ಯುದ್ಧಗಳ ಬಲಿಪಶುಗಳು ಇದಕ್ಕೆ ಸಹಿ ಮಾಡುತ್ತಿದ್ದರು. ಕೊರಿಯಾ, ವಿಯಟ್ನಾಂ, ಕಾಂಬೋಡಿಯದಲ್ಲಿ ಮಿಲಿಯನ್ ಜನರು ಕೊಲೆಯಾಗಿದ್ದಾರೆ. 1982ರ ಅಮೇರಿಕಾದ ಸಹಾಯದಿಂದ ಇಸ್ರೇಲ್ ಲೆಬನಾನ್ ಮೇಲೆ ಮಾಡಿದ ಯುದ್ಧದಲ್ಲಿ 17,500


ಜನರು ಸತ್ತರು. ಡೆಸರ್ಟ್ ಸ್ಟಾರ್‌ನ ಆಪರೇಷನ್‌ನಲ್ಲಿ ಸಾವಿರಾರು ಜನರ ಪ್ಯಾಲಿಸ್ಟೇನಿಯರು ಸತ್ತರು. ಅಮೆರಿಕನ್ ಸರ್ಕಾರ ಬೆಂಬಲಿಸಿ, ತರಬೇತಿ ಕೊಡಿಸಿ ಶಸ್ತ್ರಾಸ್ತ್ರಗಳ ಕೊಡಿಸಿದ ಭಯೋತ್ಪಾದಕ ನಿರಂಕುಶಿಗಳು-ಯುಗೋಸ್ಲೋವಿಯ ಸೋಮಾಲಿಯ, ಚಿಲಿ, ನಿಕರಾಗುವ, ಎಲ್ ಸಾಲ್ವಡಾರ್, ಡೊಮಿನಿಕನ್ ರಿಪಬ್ಲಿಕ್ ಮುಂತಾದ ಕಡೆಯಲ್ಲಿ ಮಿಲಿಯಾಂತರ ಜನರನ್ನು ಕೊಂದಿದ್ದಾರೆ.

ಓಸಾಮ ಬಿನ್ ಲ್ಯಾಡನ್ ಅಮೆರಿಕನ್ ಕುಟುಂಬದ ನಿಗೂಢ ವ್ಯಕ್ತಿ. ಈಗ ಕುಟುಂಬದ ಸತ್ಯ ಬಯಲಾಗಿದೆ. ಎರಡು 'ಬಿಗ್ ಬಿ'ಗಳ ನಡುವೆ ಆಫ್ಘಾನಿಸ್ತಾನ ಚೂರು ಚೂರಾಗಿದೆ. ಗೋರಿಗಳು ಮತ್ತೆ ಅಲುಗಾಡತೊಡಗಿವೆ. ಅಮೇರಿಕಾದ ಅಧ್ಯಕ್ಷ ಬುಷ್ - ನೀವು ನಮ್ಮ ಜೊತೆಗಿರದಿದ್ದರೆ, ನಮ್ಮ ವಿರುದ್ಧ ಇದ್ದೀರಿ ಎಂದು ಹೇಳಿರುವುದು ದುರಂಹಕಾರದ ನಡತೆಯಾಗಿದೆ. ಈ ಆಯ್ಕೆ ಜನರದ್ದಲ್ಲ, ಜನರಿಗೆ ಬೇಕಾಗಿಯೂ ಇಲ್ಲ. ಭಯೋತ್ಪಾದನೆ ಧಾರ್ಮಿಕ ಮೂಲಭೂತವಾದಿಗಳಿಂದಾಗಿರಲಿ, ಮಿಲಿಟರಿಯಿಂದಾಗಿರಲಿ ಅದು ಕ್ಷಮೆಗೆ ಅರ್ಹವೇ ಅಲ್ಲ.

ನಮ್ಮ ಕಲೆ, ಸಾಹಿತ್ಯ, ಸಂಗೀತ, ನಾಟಕ ಎಲ್ಲವೂ ಅಮೆರಿಕಾ ಹಾಗೂ ಮೂಲಭೂತವಾದವೆರೆಡಕ್ಕೂ ಮೀರಿದ್ದು. ಜನರು ಈ ಎರಡರ ಮಧ್ಯೆ ಒಂದನ್ನು ಆರಿಸುತ್ತಾರೆ ಎಂಬುದು ಸುಳ್ಳು. ಜನರು ಕೊನೆಗೆ ಆರಿಸುವುದು ಮಾನವೀಯತೆಯ ಮಜಲನ್ನು ಮಾತ್ರ.

ಮೂಲ : ಅರುಂಧತಿ ರಾಯ್

ನಾನು ಸಲ್ಲುವಳಲ್ಲ



ತಿವಿಯ ಬೇಡಿ ನನ್ನ ನೀವಿಬ್ಬರು
ನಿಮ್ಮ ಬಂದೂಕಿನ ತುದಿಯಿಂದ
ನಾನು ಸಲ್ಲುವಳಲ್ಲ ನಿಮ್ಮಿಬ್ಬರಿಗು

ಹುಡುಕಬೇಡಿ ನಿಮ್ಮ ಧರ್ಮ, ಸಂಸ್ಕೃತಿಯ
ಉನ್ಮಾದದ ಸಂಕೇತಗಳನ್ನು
ನನ್ನ ಉಡಿಯಲ್ಲಿ
ನನ್ನ ಮುಡಿಯಲ್ಲಿ
ನನ್ನ ಮುಸುಕಿನಲ್ಲಿ
ಎರಡು ಹುಬ್ಬಿನ ನಡುವೆ ನಗುವ ಬಿಂದಿಯಲ್ಲಿ
ಬಿಸಿಲು ತಾಕದ ನನ್ನ
ಮಲ್ಲಿಗೆ ಹೂವಿನ ಬಿಳಿಚಿದ ನಗೆಯಲ್ಲಿ.

ಹುಡುಕಬೇಡಿ ನಿಮ್ಮ ಘನತೆಯನ್ನು
ನಾ ತೊಡುವ ಬಟ್ಟೆಯಲಿ
ಹೊರಚಲ್ಲುವ ನನ್ನ ಉಗುರಿನ ಬಣ್ಣಗಳಲ್ಲಿ.

ಹಾರಿಸಬೇಡಿ ನಿಮ್ಮ ವಿಜಯದ ಪತಾಕೆಯನ್ನು
ನನ್ನ ಕತ್ತಲ ಕೋಣೆಯಲ್ಲಿ.

ಹುಡುಕಬೇಡಿ ನಿಮ್ಮ ಭದ್ರತೆಯನ್ನು
ನನ್ನ ಬಂಧನದಲ್ಲಿ
ನಾನು ನಿಮ್ಮಿಬ್ಬರಿಗೂ ಸಲ್ಲುವಳಲ್ಲ.

ಹುಡುಕಬೇಡಿ ನಿಮ್ಮ ಅಭಿವೃದ್ಧಿಯ ಸಂಕೇತಗಳನ್ನು
ನನ್ನ ಅಗ್ಗದ ದುಡಿಮೆಯಲ್ಲಿ
ನನ್ನ ದೇಹದ ಬೆವರಿನ ವಾಸನೆಯಲ್ಲಿ.

ಹಾರಿಸಬೇಡಿ ನಿಮ್ಮ ವಿಜಯದ ಪತಾಕೆಯನ್ನು
ಬಿಚ್ಚಿದ ನನ್ನ ಬಿಡುಗಡೆಯ ನಗೆಯಲ್ಲಿ
ನಾನು ಸಲ್ಲುವಳಲ್ಲ ನಿಮ್ಮಿಬ್ಬರಿಗು.

ನಾನು ಸಲ್ಲುವುದು
ನಿದ್ದೆಯಲಿ ಸಾವುಂಡ ಎಳೆಯ ಕಂದಮ್ಮಗಳಿಗೆ
ಬಾಂಬಿನೊಂದಿಗೆ ಬೀಳುವ ತುತ್ತಿನ ಚೀಲುಗಳಿಗೆ
ಬಾಯ್ತೆರೆದ ಬಾಯಿಗಳಿಗೆ
ನಿದ್ದೆಯನು ಕಿತ್ತುಕೊಂಡ ನೀರವ ರಾತ್ರಿಗಳಿಗೆ.

ರಾಜೇಶ್ವರಿ ಎಚ್.ಎಸ್.

ಶಾಂತಿ ಸಂಸ್ಕೃತಿ

ವಂದನಾಶಿವ



ಅಮೆರಿಕದ ಗಗನಚುಂಬಿ ಅವಳಿ ಕಟ್ಟಡಗಳ ಮೇಲೆ ಭಯೋತ್ಪಾದಕರು ನಡೆಸಿದ ಬಾಂಬ್ ದಾಳಿಯನ್ನು ಖಂಡಿಸಿ ಸೆಪ್ಟೆಂಬರ್ 18ರಂದು ಸಾಲಿಡಾರಿಟಿ ದಿನವನ್ನಾಗಿ ಆಚರಿಸಲಾಯಿತು. ವಿಶ್ವವಾಣಿಜ್ಯ ಕೇಂದ್ರ ಹಾಗೂ ಪೆಂಟಗಾನ್‌ನಲ್ಲಿ ಜೀವ ಕಳೆದುಕೊಂಡ ಜನರಿಗಾಗಿ ಏರ್ಪಡಿಸಿದ ಶೋಕಾಚರಣೆಯ ಸಭೆಯಲ್ಲಿ ನಾನು ಭಾಗವಹಿಸಿದ್ದೆ.

ಭಯೋತ್ಪಾದಕರ ಹಾಗೂ ವಿವಿಧ ರೀತಿಯ ಹಿಂಸೆಗೆ ಬಲಿಯಾದ ಕೋಟ್ಯಾಂತರ ಜನರನ್ನು ನೆನೆದೆ. ಹಿಂಸೆಯ ಎಲ್ಲಾ ಸ್ವರೂಪವನ್ನು ಪ್ರತಿಭಟಿಸುವ ನನ್ನ ನಂಬಿಕೆಯನ್ನು ಪುನಃ ಗಟ್ಟಿಗೊಳಿಸಿಕೊಂಡೆ.

ಸೆಪ್ಟೆಂಬರ್ 18ರಂದು ನಾನು ಒರಿಸ್ಸಾ ರಾಜ್ಯದ ಕಾಶಿಪುರ ಜಿಲ್ಲೆಯ ಜೋಡಿಯಾ ಶಾಹಿ ಹಳ್ಳಿಯಲ್ಲಿದ್ದೆ. ನನ್ನೊಂದಿಗೆ ಲಕ್ಷ್ಮಿ ರಾಯಬರಿಯವರಿದ್ದರು. ಲಕ್ಷ್ಮಿಯ ಗಂಡ ಗಾಭಿಜೋಡಿಯಾ ಇತರ 20 ಆದಿವಾಸಿಗಳೊಂದಿಗೆ ಹಸಿವಿನಿಂದ ಸತ್ತಿದ್ದ. ಇದೇ ಹಳ್ಳಿಯಲ್ಲಿ ಸುಭರ್ಣಾ ಜೋಡಿಯಾ ಸಹ ಹಸಿವಿನಿಂದ ಸತ್ತಿದ್ದ. ನಂತರ ನಾನು ಬಿಲಾಮಲ್ ಹಳ್ಳಿಯಲ್ಲಿ ಗಂಡ ಸಾಧೆ, ದೊಡ್ಡ ಮಗ ಸೂರತೆ, ಚಿಕ್ಕ ಮಗ ಪೈಲಾ, ಸೊಸೆ ಸುಲಾಮಿ ಎಲ್ಲರನ್ನು ಕಳೆದುಕೊಂಡಿದ್ದ ಸಿಂಗಾರಿಯನ್ನು ಭೇಟಿಯಾಗಿದ್ದೆ.

ವಿಶ್ವಬ್ಯಾಂಕ್‌ನ ರಾಚನಿಕ ಹೊಂದಾಣಿಕೆಯ ಮೂಲತತ್ವವೇ ಇದಾಗಿದೆ. ಉದ್ದೇಶಪೂರ್ವಕವಾಗಿ ಹಸಿವಿನಿಂದ ನರಳುವ ಜನರಿಗೆ ಆಹಾರವನ್ನು ಕೊಡದೇ ಇರುವುದು, ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಅಸ್ತವ್ಯಸ್ಥ ಗೊಳಿಸುವುದು ವಿಶ್ವಬ್ಯಾಂಕಿನ ಮುಖ್ಯ ಗುರಿಯಾಗಿದೆ.

ಖರ್ಚನ್ನು ಕಡಿಮೆ ಮಾಡುವ ಆಧಾರದ ಮೇಲೆ ಇದನ್ನು ಸಮರ್ಥಿಸಲಾಗುತ್ತದೆ. ಆದರೆ 1991ರಲ್ಲಿ ಆಹಾರದ ಮೇಲೆ ನೀಡುವ ರಿಯಾಯತಿ 2,800 ಕೋಟಿಯಾಗಿದ್ದರೆ 2001ರಲ್ಲಿ 14,000 ಕೋಟಿಗೆ ಏರಿತ್ತು. ಆಹಾರ ಧಾನ್ಯವನ್ನು ಶೇಖರಿಸಿಡುವಲ್ಲಿ ಈ ಹೆಚ್ಚುವರಿ ಹಣವನ್ನು ವ್ಯಯಿಸಲಾಯಿತು. ಏಕೆಂದರೆ ವಿಶ್ವಬ್ಯಾಂಕ್ ಆಹಾರ ಧ್ಯಾನಕ್ಕೆ ನೀಡುತ್ತಿದ್ದ ರಿಯಾಯಿತಿಯನ್ನು ಹಿಂತೆಗೆದುಕೊಂಡಿತ್ತು. ಇದರಿಂದಾಗಿ ಆಹಾರ ಧಾನ್ಯಗಳ ಬೆಲೆ ಗಗನಕ್ಕೇರುವಂತೆ ಮಾಡಿತು. ಸಂಗ್ರಹಿಸಿಟ್ಟ ಧಾನ್ಯವನ್ನು ಪಡಿತರ ಮಾಡಲು ಕೊಳ್ಳುವ ಪ್ರಮಾಣವನ್ನು ಕಡಿಮೆ ಮಾಡಲಾಯಿತು. ಸಂಗ್ರಹವಾದ ಆಹಾರ ಪದಾರ್ಥಗಳ ಪ್ರಮಾಣ ಹೆಚ್ಚುತ್ತಾ ಹೋಯಿತು. ಹಾಗಾಗಿ ದೇಶದ ಆಹಾರ ಭದ್ರತೆಯ ವ್ಯವಸ್ಥೆ ಕುಸಿಯುತ್ತಾ ಬಂದಿದೆ.

ಎರಡು ನಿಮಿಷದ ಶೋಕಾಚರಣೆಯ ಮಧ್ಯದಲ್ಲಿ 60 ಮಿಲಿಯನ್ ಟನ್ ಆಹಾರ ಧಾನ್ಯಗಳು ಗೋದಾಮುಗಳಲ್ಲಿ ಕೊಳೆಯುತ್ತಾ ಬಿದ್ದಿದ್ದರೂ, ಹಸಿವಿಗೆ ತುತ್ತಾದ ಆದಿವಾಸಿ ಕುಟುಂಬಗಳನ್ನು ನೆನಪಿಸಿಕೊಂಡೆ. ಜನರನ್ನು ಬಡತನ, ಹಸಿವಿಗೆ ತಳ್ಳುವಂತಹ ನಮ್ಮ ದೇಶದ ಆರ್ಥಿಕ ನೀತಿಯು ಭಯೋತ್ಪಾದನೆಯ ಇನ್ನೊಂದು ಸ್ವರೂಪವೆಂದೆನಿಸಿತು.

ಮಹಾರಾಷ್ಟ್ರ, ರಾಜಾಸ್ಥಾನ, ಒರಿಸ್ಸಾದಲ್ಲಿ ಹಸಿವಿನಿಂದ ಉಂಟಾಗುತ್ತಿರುವ ಸಾವು ನಮ್ಮ ದೇಶದ ಆಹಾರ ಭದ್ರತೆಯು ಸಂಪೂರ್ಣವಾಗಿ ಕುಸಿಯುವುದರ ಸಂಕೇತವಾಗಿದೆ. ಕಾಶಿಪುರ ಪ್ರಕೃತಿಯಿಂದ ವರ ಪಡೆದ ಸಂಪದ್ಭರಿತ ಹಳ್ಳಿಯಾಗಿದೆ. 'ಹಸಿವು' ಎಂಬ ಶಬ್ದವೂ ಇಲ್ಲಿ ಹತ್ತಿರ ಸುಳಿಯುವಂತಿಲ್ಲ. ಇದು ಪ್ರಕೃತಿಯ ವಿರುದ್ಧ ಹಾಗೂ ಆದಿವಾಸಿ ಜನಾಂಗದ ವಿರುದ್ಧ ನಡೆಸುತ್ತಿರುವ ಹಿಂಸೆಯಾಗಿದೆ. ಇಲ್ಲಿಯ ಸಂಪನ್ಮೂಲಗಳನ್ನು ಕೈಗಾರಿಕೆಗೆ, ಖಾಸಗೀ ಕಂಪನಿಗಳಿಗಾಗಿ ಲೂಟಿ ಹೊಡೆಯಲಾಗುತ್ತಿದೆ. ಪ್ರಸ್ತುತದಲ್ಲಿ ಆಡಳಿತ ನಡೆಸುತ್ತಿರುವ ಸರ್ಕಾರ ಹಿಂದೆಂದೂ ಇರಲಿಲ್ಲ. ಇಲ್ಲಿ ಜನತೆಗಾಗಿ ಇರುವ ಸಾಮಾಜಿಕ ಅಭಿವೃದ್ಧಿಯ ಕಾರ್ಯಗಳನ್ನು, ಭದ್ರತೆಯನ್ನು ನೀಡುವಂತಹ ಕಾರ್ಯಗಳನ್ನು ನೋಡಲು ಸಾಧ್ಯವಿಲ್ಲ.

ಕಾಶಿಪುರ ಹಾಗೂ ಇನ್ನಿತರ ಪ್ರದೇಶಗಳಲ್ಲಿ ಹಸಿವಿನಿಂದ ಜನರು ಸಾಯುತ್ತಿರುವುದಕ್ಕೆ ಹಲವಾರು ಕಾರಣಗಳಿವೆ. ಈ ಪ್ರದೇಶಗಳಲ್ಲಿ ಸಿಗುವ ಅಪಾರ ಜೈವಿಕ ಸಂಪತ್ತನ್ನು ಲೂಟಿ ಹೊಡೆಯಲಾಗುತ್ತಿದೆ. ನಮ್ಮ ದೇಶದಲ್ಲಿ ಜಾರಿಯಲ್ಲಿರುವ ಆರ್ಥಿಕ ನೀತಿಯಿಂದಾಗಿ ಆಹಾರ ಭದ್ರತೆಯು ಸಂಪೂರ್ಣವಾಗಿ ಕುಸಿದು ಬಿದ್ದಿದೆ. ಹವಾಮಾನದ ಬದಲಾವಣೆಯಿಂದಾಗಿ ಬರಗಾಲ

ಉಂಟಾಗಿದ್ದು ಎರಡು ವರ್ಷ ರೈತರು ಬೆಳೆ ಬೆಳೆಯಲಾಗಲಿಲ್ಲ. ಈ ವರ್ಷ ಅತಿಯಾಗಿ ಬಿದ್ದಮಳೆಯಿಂದಾಗಿ ಬೆಳೆಯನ್ನು ಬೆಳೆಯುವುದರಲ್ಲಿ ವಿಫಲರಾದರು. 20 ವರ್ಷಗಳ ಹಿಂದೆ ಪೇಪರ್ ಹಾಗೂ ಪಲ್ಪ ತಯಾರಿಕೆಗಾಗಿ ಕಾಶಿಪುರದ ಕಾಡನ್ನು ಸಂಪೂರ್ಣವಾಗಿ ನಾಶಮಾಡಲಾಯಿತು. ಈಗ ನೆರೆಯ ಆಂಧ್ರಪ್ರದೇಶದಿಂದ ನೀಲಿಗಿರಿಯನ್ನು ತಂದು ಬೆಳೆಯಲಾಗುತ್ತಿದೆ.

ಪಲ್ಪ ಕೈಗಾರಿಕಾ ಭಯೋತ್ಪಾನೆಯು ಈ ಪ್ರದೇಶವನ್ನು ಸಂಪೂರ್ಣವಾಗಿ ನಾಶಗೊಳಿಸಿದೆ. ಈಗ ರಾಕ್ಷಸ ರೂಪದ ಮೈನಿಂಗ್ ಕಂಪನಿಗಳು ಬಂದಿವೆ. ನಾರ್ವೆಯ ದೈಡ್ರೊ, ಕೆನಡಾದ ಲಿಲ್‌ಕ್ಯಾನ್, ಭಾರತದ ಇಂಡಿಕೊ, ಸ್ಟರ್‌ಲೈಟ್ ಭಯೋತ್ಪಾದನೆಯ ಹೊಸ ಅಲೆಯನ್ನು ಬಿತ್ತುತ್ತಿವೆ. ಕಾಶಿಪುರದ ಬೆಟ್ಟಗಳಲ್ಲಿ ಸಿಗುವ ಬಾಕ್ಸೈಟ್ ಅದಿರಿನ ಮೇಲೆ ಈ ಕಂಪನಿಗಳು ಕಣ್ಣು ಹಾಕಿವೆ. ಅಲ್ಯೂಮಿನಿಯಂ ತಯಾರಿಕೆಗಾಗಿ ಬಾಕ್ಸೈಟ್‌ನ್ನು ಉಪಯೋಗಿಸಲಾಗುತ್ತಿದೆ. ಅಲ್ಯೂಮಿನಿಯಂನಿಂದ ಕೋಕಾಕೋಲಾದ ಕ್ಯಾನ್‌ಗಳನ್ನು, ಯುದ್ಧಗಳಿಗಾಗಿ ವಿಮಾನವನ್ನು ತಯಾರಿಸಲಾಗುತ್ತಿದೆ.

ಒಂದು ಕ್ಷಣ ಸಾವಿರಾರು ವರ್ಷಗಳಿಂದ ಪ್ರಕೃತಿ ನಿರ್ಮಿಸಿದ ಈ ಬೆಟ್ಟಗಳನ್ನು ವಿಶ್ವವಾಣಿಜ್ಯ ಕೇಂದ್ರಗಳೆಂದು ಕಲ್ಪಿಸಿಕೊಳ್ಳಿ. ಕೈಗಾರಿಕೆಗಾಗಿ ಹಾಗೂ ಮಾರುಕಟ್ಟೆಗಾಗಿ ಕಚ್ಚಾ ಪದಾರ್ಥಗಳನ್ನು ಒದಗಿಸುತ್ತಿರುವ ಈ ಬೆಟ್ಟಗಳ ಮೇಲೆ ಸೆಪ್ಟೆಂಬರ್ 11ರ ದುರಂತಕ್ಕಿಂತ ಎಷ್ಟು ದುರಂತಗಳು ನಡೆದಿದೆಯೆಂದು ಯೋಚಿಸಿ. ನನ್ನ ಊರಾದ ಡೂನ್ ವ್ಯಾಲಿಯಲ್ಲಿ 1993ರಲ್ಲಿ ಪರಿಸರ ಭಯೋತ್ಪಾದನೆಯನ್ನು ಉಂಟುಮಾಡುತ್ತಿದ್ದ ಗಣಿಗಾರಿಕೆಯನ್ನು ನಿಲ್ಲಿಸಿದೆವು. ಸರ್ವೋಚ್ಚ ನ್ಯಾಯಾಲಯ ಇಲ್ಲಿ ನಡೆಯುತ್ತಿದ್ದ ಗಣಿಗಾರಿಕೆಯನ್ನು ನಿಲ್ಲಿಸುವಂತೆ ಆದೇಶವನ್ನು ಹೊರಡಿಸಿತು. ಮನುಷ್ಯರ ಅಸ್ತಿತ್ವಕ್ಕೆ ತಡೆಯೊಡ್ಡುವ ವ್ಯಾಪಾರವನ್ನು ನಿಲ್ಲಿಸಬೇಕೆಂದು ಅಭಿಪ್ರಾಯಪಟ್ಟಿತು. ಆದರೆ ನಮ್ಮ 1980ರ ಪರಿಸರ ಹೋರಾಟದ ಯಶಸ್ಸುಗಳು ಜಾಗತೀರಣದಿಂದಾಗಿ ಸಂಪೂರ್ಣವಾಗಿ ನೆಲಕಚ್ಚಿದವು.

ಜಾಗತೀಕರಣದ ಪ್ರಭಾವದಿಂದಾಗಿ ಅದಿರಿಗ್ಗಾಗಿ ತೀವ್ರವಾದ ಹುಡುಕಾಟ ಪ್ರಾರಂಭವಾಗಿದೆ. ಅಲ್ಯೂಮಿನಿಯಂ ಕಂಪನಿಗಳು ಕಾಶಿಪುರವನ್ನೇ ಕೇಳುತ್ತಿದ್ದಾರೆ. ಆದರೆ ಕಾಶೀಪುರದ ಆದಿವಾಸಿಗಳು ತಮ್ಮ ನೆಲವನ್ನು ಬಿಡಲು ಒಪ್ಪುತ್ತಿಲ್ಲ. ಅಹಿಂಸಾ ಚಳುವಳಿಯ ಮೂಲಕ ಭೂಮಿ ಹಾಗೂ ತಮ್ಮ ಪ್ರದೇಶ ಜನರಿಗೆ ಹಾಗೂ ಪ್ರಕೃತಿಗೆ ಸೇರಿರುವುರೆಂದು ವಾದಿಸುತ್ತಾರೆ. 18ರಂದು ನಡೆದ ಸಭೆಯಲ್ಲಿ ಚಳುವಳಿಯ ಹಿರಿಯ ನಾಯಕಿಯಾದ ಮುಕ್ತಾ ಜೋಡಿಯಾ "ಭೂಮಿ ನಮ್ಮ ತಾಯಿ. ನಾವು ಅವಳ ಮಕ್ಕಳು. ಗಣಿಗಾರಿಕೆಗಾಗಿ ಕಂಪನಿಗಳು ನಮ್ಮ ಭೂಮಿಯನ್ನು ಬಿಡುವಂತೆ ಒತ್ತಾಯಿಸುವುದು ಸಾಧ್ಯವಿಲ್ಲ. ಈ ಭೂಮಿಯನ್ನು ಸೃಷ್ಟಿಮಾಡಿ ನಮಗೆ ನೀಡಿರುವುದು ದೇವರೇ ವಿನಾಃ ಸರ್ಕಾರವಲ್ಲ. ನಮ್ಮ ಭೂಮಿಯನ್ನು ನಮ್ಮಿಂದ ಕಿತ್ತುಕೊಳ್ಳುವ ಹಕ್ಕು ಸರ್ಕಾರಕ್ಕಿಲ್ಲ.

ನಮ್ಮ ಸಂಪನ್ಮೂಲಗಳನ್ನು ನಮ್ಮಿಂದ ಬಲಾತ್ಕಾರವಾಗಿ ಕಿತ್ತುಕೊಳ್ಳುವುದು ಕೂಡ ಭಯೋತ್ಪಾದನೆಯೇ. ಇದು ಬಹುರಾಷ್ಟ್ರೀಯ ಕಂಪನಿಗಳ ಭಯೋತ್ಪಾದನೆ. 200 ಹಳ್ಳಿಗಳ ಜನರ ಬದುಕಿಗೆ ಆಧಾರವಾದ ಭೂಮಿಯನ್ನು ಕಿತ್ತುಕೊಳ್ಳಲು ಹೆದರಿಕೆಯನ್ನುಂಟು ಮಾಡಿದ ಹಾಗೂ ಡಿಸೆಂಬರ್ 16ರಂದು ಪೊಲೀಸ್‌ರಿಂದಾಗಿ ತಮ್ಮ ಜೀವವನ್ನು ಕಳೆದುಕೊಂಡು ನೊಂದವರ ಕುಟುಂಬದವರ ಬೆಂಬಲಕ್ಕಾಗಿ ನಾನು ಅಲ್ಲಿ ಹೋಗಿದ್ದೆ.

ಪೊಲೀಸ್ ಫೈಯರಿಂಗ್‌ನಲ್ಲಿ ಸತ್ತವರಲ್ಲಿ ಅಭಿಲಾಷ್ ಒಬ್ಬ. ಅವನು ಸತ್ತಾಗ ಅವನ ಹೆಂಡತಿ ಸುಭರ್ಣಾ ಜೋಡಿಯಾ ಗರ್ಭಿಣಿಯಾಗಿದ್ದಳು. ನಾನು ಅವಳ ಹಳ್ಳಿಯಾದ ಮೈಕಾಂಚನಲ್ಲಿ ಭೇಟಿಯಾಗಲು ಹೋದಾಗ, ಬರ್ಬರವಾಗಿ ಕೊಲೆಯಾದ ತಂದೆಯ ಸಾವಿನ ನಂತರ ಹುಟ್ಟಿರ ಮಗುವನ್ನು ಎತ್ತಿಕೊಂಡು ಗುಡಿಸಲಿನ ಬಾಗಿಲಿನಲ್ಲಿ ಕುಳಿತ್ತಿದ್ದಳು. ನಾನು 'ಮಗುವಿಗೆ ಏನೆಂದು ಹೆಸರು ಹೆಸರಿಟ್ಟಿರುವೆ ಎಂದೆ. ಅವಳು ಮಗುವಿಗೆ ಹೆಸರನ್ನು ಸೂಚಿಸಲು ನನ್ನನ್ನೇ ಕೇಳಿದಳು. ನಾನು ಆ ಮಗುವಿಗೆ ಶಕ್ತಿ ಎಂದು ಹೆಸರಿನ್ನಿಟ್ಟೆ. ಶಾಂತಿಯ ಹಾದಿಯು ಶಕ್ತಿಯನ್ನು ಪಡೆಯುವಂತೆ. ಅವಳ ತಂದೆ ಹಾಗೂ ಇತರ ಆದಿವಾಸಿ ಜನರು ಹತ್ತು ವರ್ಷಗಳಿಂದ ಗಣಿಗಾರಿಕೆಯ ಕಂಪನಿಗಳ ಹಾಗೂ ಸರ್ಕಾರದ ಭಯೋತ್ಪಾದನೆಯನ್ನು ಪ್ರತಿಭಟಿಸುತ್ತಿದ್ದಾರೆ. ಸಾಂಕೇತಿಕವಾಗಿ ಹಾಗೂ ಭಯೋತ್ಪಾದನೆಯ ಎಲ್ಲ ಸ್ವರೂಪವನ್ನು ಪ್ರತಿಭಟಿಸುವ ಶಕ್ತಿ ಅವಳಾಗಲೆಂದು.

ಡ್ಯಾಂನಿಂದಾಗಿ 40 ವರ್ಷಗಳಿಂದ ತಮ್ಮ ನೆಲೆಯನ್ನು ತೊರೆದಿರುವ 50ಲಕ್ಷ ಜನರು ಭಯೋತ್ಪಾದನೆಗೆ ಬಲಿಯಾಗಿದ್ದಾರೆ. ಇವರು ಆಧುನಿಕ ತಂತ್ರಜ್ಞಾನ ಹಾಗೂ ವಿನಾಶಕಾರಕ ಅಭಿವೃದ್ಧಿಯ ಭಯೋತ್ಪಾದನೆಯ ನೆರಳಲ್ಲಿ ನೊಂದವರು. ಒರಿಸ್ಸಾದ 30,000 ಸಾವಿರ ಜನರು ಭಯಂಕರವಾದ ಚಂಡಮಾರುತಕ್ಕೆ ಬಲಿಯಾಗಿದ್ದಾರೆ. ಲಕ್ಷಾಂತರ ಜನರು ಹವಾಮಾನ ವೈಪರೀತ್ಯ ಹಾಗೂ ಇಂದಿನ ಮಾಲಿನ್ಯಕ್ಕೆ ಬಲಿಯಾಗುತ್ತಿದ್ದಾರೆ. ರಯೋ ಪೆಟ್ರೊಕೋಲ್‌ಗೆ ಸಹಿ ಮಾಡಲು ತಿರಸ್ಕರಿಸಿದ ಅಮೆರಿಕಾದ ಅಧ್ಯಕ್ಷ ಬುಷ್ ಪರಿಸರ ಭಯೋತ್ಪಾದಕ.

ಸಿಯೊಟಲ್ ನಾಗರೀಕರು WTO ಅನ್ನು ವಿಶ್ವ ಭಯೋತ್ಪಾದಕ ಕೇಂದ್ರವೆಂದು ಹೆಸರಿಸಲು ಮುಖ್ಯ ಕಾರಣವಿದು. ಮಿಲಿಯಾಂತರ ಜನರ ಬದುಕುವ ಹಕ್ಕನ್ನು ಇದು ಕಿತ್ತುಕೊಂಡಿದೆ.

ಸೆಪ್ಟೆಂಬರ್ 11ರ ದುರಂತ, ಮಿಲಿಟರಿ, ತಾಂತ್ರಿಕ, ಆರ್ಥಿಕ, ರಾಜಕೀಯ ಸ್ವರೂಪದ ಎಲ್ಲಾ ರೀತಿಯ ಭಯೋತ್ಪಾದನೆಯನ್ನು ನಿಲ್ಲಿಸುವ ಅವಕಾಶವನ್ನು ನಮಗೆ ನೀಡಿದೆ. ಭಯೋತ್ಪಾದನೆಯನ್ನು ಯುದ್ಧೋನ್ಮಾದದ ಮನಸ್ಸಿನಿಂದ ನಿಲ್ಲಿಸಲು ಸಾಧ್ಯವಿಲ್ಲ. ಏಕೆಂದರೆ ಇದು ಅಭದ್ರತೆ ಹಾಗೂ ಹೆದರಿಕೆಯನ್ನು ಹುಟ್ಟುಹಾಕುತ್ತದೆ. ಇದು ಪುನಃ ಭಯೋತ್ಪಾದನೆಯನ್ನು ಹುಟ್ಟುಹಾಕುತ್ತದೆ. ಇಂದು ನಡೆಯುತ್ತಿರುವ ಭಯೋತ್ಪಾದನೆಯ ವಿರುದ್ಧದ ಯುದ್ಧ ಹಿಂಸೆಯ ವಿಷವೃತ್ತವನ್ನು ಸೃಷ್ಟಿಸುತ್ತದೆ. ಅದು ಶಾಂತಿಯನ್ನಾಗಲೀ, ಭದ್ರತೆಯನ್ನಾಗಲೀ ಉಂಟುಮಾಡುವುದಿಲ್ಲ. ಯುದ್ಧದ ಅಲೆಯಿಂದಾಗಿ ಅಮೇರಿಕಾ, ಇಂಡಿಯಾ, ಏಷಿಯಾ ಹಾಗೂ ಅರಬ್ ದೇಶದ ಜನರ ಮೇಲೆ ಹಲ್ಲೆಗೊಳಗಾಗಿ ಸಾವಿಗೀಡಾಗುತ್ತಿದ್ದಾರೆ. ಎಲ್ಲ ಕಡೆ ಮೂಲಭೂತವಾದಿಗಳು ದ್ವೇಷ ಸಾಧನೆಯ ಮನೋಭಾವನೆಯಿಂದ ಕುದಿಯುತ್ತಿದ್ದಾರೆ.

ಶಾಂತಿಯ ಸಂಸ್ಕೃತಿ, ಪ್ರಜಾಪ್ರಭುತ್ವ ಹಾಗೂ ಜನರ ಭದ್ರತೆಯಿಂದ ಮಾತ್ರ ಭಯೋತ್ಪಾದನೆಯನ್ನು ತಡೆಯಲು ಸಾಧ್ಯ. ಸೆಪ್ಟೆಂಬರ್ 11ರ ನಂತರದ ದಿನಗಳನ್ನು ನಾಗರೀಕತೆ ಮತ್ತು ಅಥವಾ ಪ್ರಜಾಪ್ರಭುತ್ವ ಮತ್ತು ಭಯೋತ್ಪಾದನೆಯೆಂದು ವ್ಯಾಖ್ಯಾನಿಸುವುದು ತಪ್ಪು. ಇದು ಎರಡು ರೀತಿಯ ಭಯೋತ್ಪಾದನೆಯ ವಿರುದ್ಧ ನಡೆಯುತ್ತಿರುವ ಯುದ್ಧ. ಈ ಎರಡು ವಿಧವಾದ ಭಯೋತ್ಪಾದನೆಯು ಏಕಸ್ವರೂಪದ ಸಂಸ್ಕೃತಿಯನ್ನು ಪ್ರತಿಪಾದಿಸುತ್ತಾ, ಶಾಂತಿ ಸ್ಥಾಪನೆಗೆ ಅಗತ್ಯವಾದ ಬಹುಸಂಸ್ಕೃತಿಯನ್ನು ನಾಶಪಡಿಸುತ್ತವೆ. ಹಿಂಸೆಯ ಪ್ರತಿಪಾದಕ ಸಂಸ್ಕೃತಿಯ ಮುಖ್ಯವಾಹಿನಿಯ ಭಾಗವಾಗುತ್ತವೆ. ಅವು ಅದೇ ತೆರನಾದ ಅಸ್ತ್ರವನ್ನು ಹಾಗೂ ತಾಂತ್ರಿಕತೆಯನ್ನು ಉಪಯೋಗಿಸುತ್ತವೆ. ಹಿಂಸೆಗೆ ಆದ್ಯತೆ ನೀಡುವುದು ಹಾಗೂ ಹೆದರಿಸುವ ತಂತ್ರವನ್ನು ಬಳಸುವಲ್ಲಿ ಇದು ಒಂದೇ ನಾಣ್ಯದ ಎರಡು ಮುಖಗಳು. ಎಲ್ಲಾ ಕಡೆಯಲ್ಲೂ ಇವರಿಗೆ ಬಲಿಪಶುಗಳಾಗುವವರು ಮಾತ್ರ ಜನಸಾಮಾನ್ಯರು.

ವಿಶ್ವದಾದ್ಯಂತ ಇರುವ ಜನರು ಶಾಂತಿ ಹಾಗೂ ಭದ್ರತೆಗಾಗಿ ಹಾತೊರೆಯುತ್ತಾರೆ. ಆದರೆ ಹಿಂಸೆ ಹಾಗೂ ಬೆದರಿಕೆ ಅವರ ಶಾಂತಿ ಹಾಗೂ ಭದ್ರತೆಯನ್ನು ಕಿತ್ತುಕೊಳ್ಳುತ್ತದೆ. ಜೋಡಿಯಶಾಹಿ ಹಳ್ಳಿಯಲ್ಲಿ ಜನರು ನನಗಾಗಿ ಒಂದು ಕಲ್ಲಿನಂತಹ ದೇವರ ಬಳಿ ದೀಪವೊಂದನ್ನು ಹಚ್ಚಿದ್ದರು. ವಿಶ್ವವಾಣಿಜ್ಯ ಕೇಂದ್ರದ ಗೋಪುರಗಳಿಗೆ ಹೋಲಿಸಿದರೆ ಆದಿವಾಸಿಗಳ ಗುಡಿ ಬಾಹ್ಯ ದೃಷ್ಟಿಕೋನದಿಂದ ಅಮುಖ್ಯವೆಂದೆನಿಸಬಹುದು. ಆದರೆ ಅಧ್ಯಾತ್ಮತೆಯ ದೃಷ್ಟಿಕೋನದಿಂದ ನೋಡಿದರೆ, ಆದಿವಾಸಿಗಳ ಗುಡಿ ಮಹತ್ವಪೂರ್ಣವೆಂದೆನಿಸುತ್ತದೆ. ಏಕೆಂದರೆ ಇದು ಭೂಮಂಡಲವನ್ನು ಒಳಗೊಳ್ಳುವ ಶಕ್ತಿಯನ್ನು ಹೊಂದಿದೆ.

ವಿಶ್ವವಾಣಿಜ್ಯ ಗಗನಚುಂಬೀ ಕಟ್ಟಡ ಉರುಳುವುದನ್ನು ಇಡೀ ವಿಶ್ವವೇ ನೋಡಿತು. ಆದರೆ ಮಿಲಿಯಾಂತರ ಜನರ ದೇವಸ್ಥಾನಗಳು, ಮನೆ, ಭೂಮಿಯನ್ನು ಅನ್ಯಾಯ, ದುರಾಸೆ, ಜಾಗತೀಕರಣದಿಂದಾಗಿ ಕಿತ್ತುಕೊಳ್ಳಲಾಗುತ್ತಿದೆ.

ನಾವು ಕಪ್ಪು ಮಂಗಳವಾರದ ದಿನ ಬಲಿಯಾದ ಜನರನ್ನು ನೆನೆಯುವಂತೆ ಈ ಉಪಗ್ರಹದ ಭವಿಷ್ಯವನ್ನೇ ಚಿವುಟಿ ಹಾಕುವ ವಿವಿಧ ರೀತಿಯ ಭಯೋತ್ಪಾದನೆಗೆ ಬಲಿಯಾದ ಅಗೋಚರ ವ್ಯಕ್ತಿಗಳಿಗೆ ನಮ್ಮ ಬೆಂಬಲವನ್ನು ಸೂಚಿಸಿ ಬಲಗೊಳಿಸೋಣ. ಈ ದುರಂತದ ಅಮಾನುಷ ಚರಿತ್ರೆಯ ಕ್ಷಣವನ್ನು ಶಾಂತಿಯ ಸಂಸ್ಕೃತಿಯನ್ನಾಗಿ ಬದಲಾಯಿಸೋಣ.

ಮಹಿಳೆಯರಿಗೆ ಸಂಬಂಧಪಟ್ಟ, ಹೆಚ್ಚು ಪ್ರಸ್ತುತವಾದ ವಿಷಯಗಳನ್ನು ಕುರಿತು ಮಾನಸ ಪತ್ರಿಕೆಯ ಮೂಲಕ ಓದುಗರೊಂದಿಗೆ ಸಂವಾದ ನಡೆಸುವ ಯೋಜನೆಯನ್ನು ಪತ್ರಿಕೆ ರೂಪಿಸಿದೆ. ಮಹಿಳೆಯರ ಬದುಕಿಗೆ ನೇರವಾಗಿ ಸಂಬಂಧಿಸಿದ ದೈನಂದಿನ ಸಮಸ್ಯೆಗಳನ್ನು ಸೈದ್ಧಾಂತಿಕ ನೆಲೆಯನ್ನು ರೂಪಿಸುವುದು ಈ ಆಲೋಚನೆಯ ಉದ್ದೇಶ. ಈ ಬಾರಿ ಚರ್ಚೆ ಆರಿಸಿಕೊಂಡ ವಿಷಯ "ವಿವಾಹ ಮಹಿಳೆಗೆ ಭದ್ರತೆಯನ್ನು ನೀಡುತ್ತಿದೆಯೆ?" ಈ ವಿಷಯ ಕುರಿತು ಓದುಗರು ತಮ್ಮ ವಿಚಾರಗಳನ್ನು [ನಿಮ್ಮ ಕೈಬರಹದಲ್ಲಿ ಮೂರು ಪುಟಗಳಿಗೆ ಮೀರದಂತೆ] ಬರೆದು ಕಳಿಸುವುದರ ಮೂಲಕ ಚರ್ಚೆಯಲ್ಲಿ ಭಾಗವಹಿಸಿ, ಅರ್ಥಪೂರ್ಣಗೊಳಿಸಬೇಕೆಂದು ಕೋರುತ್ತೇವೆ.

-ಸಂ. ಮಂಡಳಿ

ಅಮಾನುಷತೆಯ ತೆಕ್ಕೆಯಲ್ಲಿ

ನಮ್ಮ ಕುಟುಂಬದಲ್ಲಿ ಐದು ಹೆಣ್ಣು ಮಕ್ಕಳಿದ್ದೆವು. ಅಣ್ಣ-ತಮ್ಮಂದಿರು ಯಾರು ಇರಲಿಲ್ಲ. ನಾನು ಪ್ರೌಢ ವಯಸ್ಸಿನಲ್ಲಿದ್ದಾಗ ನಮ್ಮ ಕುಟುಂಬ ಸುಖಮಯವಾಗಿತ್ತು. ಆ ದಿನಗಳಲ್ಲಿ ಯಾಂಗ್‌ಸನ್‌ನ ನ್ಯಾಮ್‌ಬ ದಾಂಗ್ ಪ್ರದೇಶದ ಜನರೆಲ್ಲರಿಗೂ ನಮ್ಮ ತಂದೆ ಕಿಮ್‌ಕ್ಯೊಂಗ್ ಡಾಯ್ ಪರಿಚಯವಿತ್ತು. ಯಾಂಗ್ ಸನ್‌ನಲ್ಲಿದ್ದ ಒಂದು ಜಮೀನನ್ನು ವ್ಯವಸಾಯ ಮಾಡುವುದಕ್ಕಾಗಿ ಬೇರೆಯವರ ಬಳಿ ಸಾಲ ಪಡೆದು ಬಂಡವಾಳ ಹಾಕಿದ್ದರು. ಆದರೆ ಅದು ನಷ್ಟದ ದಾರಿ ಹಿಡಿಯಿತು. ಎಲ್ಲ ಆಸ್ತಿಯನ್ನು ಕಳೆದುಕೊಂಡೆವು. ಸಾಲ ಕೊಟ್ಟವರು ನಮಗೆ ಹಣ ವಾಪಸ್ಸು ಕೊಡಲಿಲ್ಲ ಎಂದರೆ ನಿನಗೆ ಪೊಲೀಸ್‌ನ ಬಳಿ ಕರೆದುಕೊಂಡು ಹೋಗುತ್ತೇವೆಂದು ತಂದೆಗೆ ಹೆದರಿಸಿದ್ದರು. ತಂದೆಗೆ ಹುಷಾರಿರಲಿಲ್ಲ, ಹೆದರಿದ ಅಮ್ಮ ಮತ್ತು ಅಜ್ಜಿ ತಂದೆಯ ಗಮನಕ್ಕೆ ತರದೆಯೇ ನಾವು ಹಣ ಕೊಡುತ್ತೇವೆಂದು ಸಾಲಪತ್ರಕ್ಕೆ ಸಹಿ ಹಾಕಿದ್ದರು. ತಂದೆಯ ಮರಣದ ನಂತರ ನಮ್ಮ ಆಸ್ತಿಯೆಲ್ಲವನ್ನು ಕಿತ್ತುಕೊಂಡಿದ್ದರು. ನಮ್ಮ ಜೀವನ ಸಾಗಿಸುವಷ್ಟು ಮಾತ್ರ ನಮ್ಮ ಬಳಿ ಉಳಿದಿತ್ತು.

ತಂದೆಯ ಮರಣದ ನಂತರ ನಮ್ಮ ಕುಟುಂಬಕ್ಕೆ ಗಂಡಸಿನ ದಿಕ್ಕಿಲ್ಲದಂತಾಯಿತು. ಆದಾಗ್ಯೂ ಜೀವನ ನಡೆಸುತ್ತಿದ್ದೆವು. ಅಕ್ಕಂದಿರು ಮದುವೆ ವಯಸ್ಸಿಗೆ ಬಂದಿದ್ದರು. ಬೇಗ ಮದುವೆ ಮಾಡದಿದ್ದರೆ ಜಪಾನಿನ ಸೈನಿಕರು ಕೊಂಡ್ರೊಯ್ಯುತ್ತಿದ್ದರು. ಅದಕ್ಕೆ ಬೇಗ ಮದುವೆ ಮಾಡುತ್ತಿದ್ದರು. ನಾನು 16 ವಯಸ್ಸಿನವಳಾಗಿದ್ದು ಸ್ವತಂತ್ರವಾಗಿ ತಿರುಗಾಡುತ್ತ ದನವನ್ನು ಮೇಯಿಸಲು ಹೋಗುತ್ತಿದ್ದೆ.

1941ರಲ್ಲಿ ಒಂದು ದಿನ ಅವರು ನನ್ನನ್ನು ಹುಡುಕಿಕೊಂಡು ಬಂದಿದ್ದರು. ಆ ಜಪಾನಿ ವ್ಯಕ್ತಿಯೊಂದಿಗೆ ಅಧಿಕಾರಿಯೊಬ್ಬ ಬಂದಿದ್ದ. ನಾನು ಚಾಂಗ್‌ಶಿನ್ ಡೇರವರೊಂದಿಗೆ ಹೋಗಬೇಕೆಂದು ತಿಳಿಸಿದರು. ಆ ಸಮಯದಲ್ಲಿ ಸ್ಥಳೀಯ ಅಧಿಕಾರಿಯು ತುಂಬಾ ಶಕ್ತಿಯುತವಾಗಿದ್ದ. ಅವರು ಹೇಳಿದ ಹಾಗೆ ಕೇಳದಿದ್ದರೆ ನನ್ನನ್ನು ಇಲ್ಲಿ ವಾಸಿಸಲು ಬಿಡುವುದಿಲ್ಲ ಎಂದರು.

ಆ ಜಪಾನಿಯನು ಯಾವುದೇ ಸ್ಥಾನ ಸೂಚಿಸದ ಹಳದಿ ಬಣ್ಣದ ಸಮವಸ್ತ್ರ ತೊಟ್ಟಿದ್ದ. ಆತ ಅರ್ಧ ಕೊರಿಯಾದವನಾಗಿದ್ದು ಕೊರಿಯಾ ಭಾಷೆಯನ್ನು ಬಲ್ಲವನಾಗಿದ್ದ. ಅವರು ನನ್ನನ್ನು ಕರೆದುಕೊಂಡು ಹೋಗುವುದರ ಜೊತೆಗೆ ಅವರ ಬಳಿ ಇದ್ದ ದಾಖಲೆಗಳಿಗೆ ಅಮ್ಮ ಸಹಿ ಹಾಕಬೇಕೆಂದು ಒತ್ತಾಯಿಸಿದರು. ನಾನು ಮೂರು ವರ್ಷಗಳು ಕಾರ್ಖಾನೆಯಲ್ಲಿ ಕೆಲಸ ಮಾಡಿ ನಂತರ ಹಿಂದಿರುಗುವಂತೆ ದಾಖಲೆಯಲ್ಲಿದೆಯೆಂದು ತಿಳಿಸಿದರು. ಎಲ್ಲ ಹೆಂಗಸರಂತೆ ಓದು ಬರಹ ತಿಳಿಯದ ಅಮ್ಮ ಅವರು ಹೇಳಿದ್ದೆ ನಿಜವೆಂದು ನಂಬಿ ಸಹಿ ಹಾಕಿದ್ದರು.

ಯಾಂಗ್ ಸನ್‌ನಿಂದ ನನ್ನಂತೆಯೇ 20 ಹುಡುಗಿಯರನ್ನು ಪೂಸನ್‌ಗೆ ಕರೆದುಕೊಂಡು ಹೋಗಲಾಗಿತ್ತು. ಅವರು ಸಹ ನನ್ನಂತೆಯೇ ಕಾರ್ಖಾನೆಯಲ್ಲಿ ಕೆಲಸ ಮಾಡುವುದಕ್ಕಾಗಿ ಬಂದಿದ್ದರು. ಆ ವಿಷಯ ತಿಳಿದ ನನಗೆ ಆತಂಕವಾಗಲಿಲ್ಲ. ನೆಲದ ಮೇಲೆ ಚಾಪೆಗಳಿರುವಂತಹ ಒಂದು ಉಗ್ರಾಣದಂತಹ ಕೊಠಡಿಗೆ ಕರೆದೊಯ್ದು ನಮ್ಮೆಲ್ಲರಿಗೂ ಅಲ್ಲೇ ಉಳಿಯುವಂತೆ ಸೂಚಿಸಲಾಗಿತ್ತು.

ಕೆಲವು ವಾರಗಳ ನಂತರ ಜಪಾನಿಗೆ ಕರೆದೊಯ್ಯಲಾಯಿತು. ನಾವು ಅಲ್ಲಿ ಒಂದು ವಾರದ ಕಾಲ ಉಳಿದಿದ್ದೆವು. ನಂತರ ತೈವಾನ್‌ಗೆ ಕರೆದೊಯ್ಯಲಾಯಿತು. ಅಲ್ಲಿ 3 ರಿಂದ 4 ತಿಂಗಳುಗಳ ಕಾಲ ಇದ್ದೆವು. ನಾವು ಅಲ್ಲಿ ಕಾಯುವುದನ್ನು ಬಿಟ್ಟು ಏನು ಮಾಡುತ್ತಿರಲಿಲ್ಲ. ಮೇಲಿನಿಂದ ಆದೇಶ ಬರುವುದಕ್ಕಾಗಿ ಅವರು ಕಾಯುತ್ತಿದ್ದರೆಂದು ಅಂದುಕೊಂಡಿದ್ದೆ. ತೈವಾನ್‌ನಲ್ಲಿ ಒಂದು ಸಾಧಾರಣವಾದ ಮನೆಯಲ್ಲಿ ಇದ್ದೆವು. ಆ ಮನೆಗೆ ಬಂದು ಹೋಗುತ್ತಿದ್ದ ಜಪಾನಿಯನು, ತಾನು ಜಪಾನಿನ ಪೊಲೀಸರೊಂದಿಗೆ ಸಂಪರ್ಕವನ್ನಿಟ್ಟುಕೊಂಡಿದ್ದೇನೆಂದು ಹೇಳಿದ್ದನು. ಆದ್ದರಿಂದ ಬಯಸಿದಾಗ ಇಲ್ಲಿಗೆ ಬಂದುಹೋಗುವ ಸ್ವಾತಂತ್ರ್ಯ ತನಗಿದೆ ಎಂದು ಹೇಳಿದ್ದನು.

ಬಹುಶಃ ಆ ಸಂಪರ್ಕ ನಿರೀಕ್ಷಿಸಿದ ಮಟ್ಟಿಗೆ ಕೆಲಸ ಮಾಡಲಿಲ್ಲ. ನಮ್ಮನ್ನು ಯಾವ ಜಿಲ್ಲೆಗೆ ಕರೆದೊಯ್ಯಬೇಕೆಂಬ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವ ಮೊದಲೇ ನಮ್ಮನ್ನು ಕರೆದುಕೊಂಡು ಬಂದಿದ್ದರಿಂದ ಹೆಚ್ಚು ಸಮಯ ಕಾಯಲಾಯಿತೆಂದು ನಾನು ತಿಳಿದಿದ್ದೆ.

ತೈವಾನ್‌ನಿಂದ ನಮ್ಮನ್ನು ಗ್ಯಾಂಗ್‌ಡಾಂಗ್‌ಗೆ ಕರೆದುಕೊಂಡು ಹೋಗಲಾಯಿತು. ನಾವು ಅಲ್ಲಿ ತಲುಪಿದ ಕೂಡಲೆ, ನಮ್ಮನ್ನು ಆರೋಗ್ಯ ತಪಾಸಣೆಗಾಗಿ ಮಿಲ್ಟ್ರಿ ವೈದ್ಯರ ಬಳಿ ಕರೆದೊಯ್ಯ

ಲಾಗಿತ್ತು. ನಮ್ಮಲ್ಲಿ ಯಾರಿಗಾದರೂ ಲೈಂಗಿಕ ಕಾಯಿಲೆಗಳಿವೆಯೇ ಎಂದು ಪರೀಕ್ಷಿಸುವುದೇ ಈ ತಪಾಸಣೆಯ ಉದ್ದೇಶವಾಗಿತ್ತು. ಮೊಟ್ಟಮೊದಲ ಬಾರಿಗೆ ಒಬ್ಬ ಅಪರಿಚಿತನಿಗೆ ಬಟ್ಟೆ ತೆಗೆದು ನನ್ನ ದೇಹವನ್ನು ತೋರಿಸಲೇ ಬೇಕಾದ ಸನ್ನಿವೇಶ ಎದುರಾಗಿತ್ತು. ಮಿಲ್ಟಿ ವೈದ್ಯನ ಮುಂದೆ ನನ್ನ ಕಾಲುಗಳನ್ನು ಹರಡಿ ಮೇಜಿನ ಮೇಲೆ ಮಲಗಿದ್ದ ನನಗೆ ಹೆದರಿಕೆಯೊಂದಿಗೆ ಈ ತಪಾಸಣೆ ನಡೆಸಿದ್ದರ ಉದ್ದೇಶವೇನಿರಬಹುದೆಂದು ದಿಗ್ಭ್ರಮಿತಳಾದೆ.

ನಾನು 16 ವರ್ಷದ ಹುಡುಗಿಯಾಗಿದ್ದರೂ ಲೈಂಗಿಕತೆಯ ಬಗ್ಗೆ ಅರಿವಿಲ್ಲದ ನಾನು ಮಗುವಿಗಿಂತ ಹೆಚ್ಚು ಮುಗ್ಧಳಾಗಿದ್ದೆ.

ವೈದ್ಯರು ನಡೆಸುತ್ತಿದ್ದ ತಪಾಸಣೆಯನ್ನು ತಡೆಯಲು ನಾನು ಹಲವಾರು ಬಾರಿ ಒದ್ದಿದ್ದೆ. ಆದರೆ ವೈದ್ಯರು ಇದು ಕಡ್ಡಾಯವೆಂದು ನನ್ನ ಬಟ್ಟೆಗಳನ್ನು ಬಲವಂತವಾಗಿ ತೆಗೆದು ತಪಾಸಣೆಯನ್ನು ಮಾಡಿ ಮುಗಿಸಿದರು. ವೈದ್ಯರು ನನ್ನನ್ನು ತಪಾಸಣೆಗೆ ಒಳಪಡಿಸುತ್ತಿದ್ದಾಗ ಹಲವು ಪ್ರಶ್ನೆಗಳನ್ನು ಕೇಳುತ್ತಿದ್ದರು, ಅವುಗಳ ತಲೆಬುಡ ಅರ್ಥವಾಗದ ನಾನು ಏನು ಉತ್ತರಿಸಲಿಲ್ಲ.

ತಪಾಸಣೆಯ ನಂತರ ನಮ್ಮೆಲ್ಲರನ್ನು ಕಂಫರ್ಟ್ ಹೌಸ್‌ಗೆ ಕರೆದುಕೊಂಡು ಹೋಗಲಾಗಿತ್ತು. ಆ ಮನೆಯು 15 ಅಂತಸ್ತಿನ ಖಾಲಿ ಕಟ್ಟಡವಾಗಿತ್ತು. ಸೈನಿಕರೆಲ್ಲರು ಮೊದಲನೆಯ ಮಹಡಿಯಲ್ಲಿದ್ದರು. 2ನೆಯ ಮಹಡಿಯಿಂದ ಮೇಲಕ್ಕೆ ಕಂಫರ್ಟ್ ಹೌಸ್ ಇತ್ತು. 15ನೇ ಮಹಡಿಯವರೆಗೂ ಹೋದರೆ ಅದು ಜನರು ವಾಸ ಮಾಡಲು ಯೋಗ್ಯವಾಗಿತ್ತು. ಗ್ಯಾಂಗ್‌ಡಾಂಗ್‌ನಲ್ಲಿ ನಾವು ಸ್ವತಂತ್ರವಾಗಿ ಎಲ್ಲೂ ಹೋಗದಂತೆ ಸೈನಿಕರು ತಡೆಯುತ್ತಿದ್ದರು. ಅಕಸ್ಮಾತ್ತಾಗಿ ಹೋದರು ಗ್ಯಾಂಗ್‌ಡಾಂಗ್‌ನ ಸೈನಿಕರು ಬಂದೂಕಗಳೊಂದಿಗೆ ನಮ್ಮನ್ನು ಹಿಂಬಾಲಿಸುತ್ತಿದ್ದರು. ಸ್ನಾನದ ಮನೆಯನ್ನು ಕಂಫರ್ಟ್ ಮನೆ ಒಳಗಡೆಯೇ ಮಾಡಿದ್ದರು.

ಸೈನಿಕರನ್ನು ಲೈಂಗಿಕವಾಗಿ ತೃಪ್ತಿ ಪಡಿಸುವ ಸೇವೆಯ ಕೆಲಸಕ್ಕಾಗಿ 2ನೇ ದಿನ ನಮ್ಮನ್ನು ಒತ್ತಾಯಿಸಲಾಗಿತ್ತು. ಪ್ರಾರಂಭದಲ್ಲಿ ನಾನು ಗಂಡಸರು ಬರುವುದನ್ನು ಪ್ರತಿಭಟಿಸುತ್ತಿದ್ದೆ. ಈ ಪ್ರತಿಭಟನೆಯ ಪರಿಣಾಮವಾಗಿ ಊಟ ಕೊಡದೆ, ಹೊಡೆಯುವುದರ ಮೂಲಕ ಶಿಕ್ಷಿಸಲಾಗಿತ್ತು. ದುಃಖಿತಳಾದ ನಾನು ಹೆಚ್ಚು ಕಾಲ ಪ್ರತಿಭಟಿಸಲಾಗದೆ ಅವರು ಹೇಳಿದಂತೆ ಮಾಡುವುದು ಅನಿವಾರ್ಯವಾಗಿತ್ತು. ಗಂಡಸರೊಂದಿಗೆ ಯಾವುದೇ ಅನುಭವ ಹೊಂದಿರದ ನನಗೆ ಈ ಭರ್ಬರ ಲೈಂಗಿಕ ಗುಲಾಮಗಿರಿಯನ್ನು ಸಹಿಸುವುದು ಅಸಾಧ್ಯವಾಗಿತ್ತು. ನನ್ನ ಯೋನಿ ಭಾಗ ಹರಿದು ಊದಿ ಹೋಗಿತ್ತು. ನಾನು ಅನುಭವಿಸಿದ ಆ ನರಕಯಾತನೆ ಯಾವುದೇ ವಿವರಣೆಗೆ ನಿಲುಕದ್ದು, ಅದನ್ನು ಹೇಳಲು ಸಹ ನನಗೆ ಹೇಸಿಗೆಯೆನಿಸುತ್ತದೆ. ಇದರಿಂದ ನನಗೆ ಇದ್ದ ದಾರಿ ಎರಡೆ ಸಾಯುವುದು ಇಲ್ಲ, ತಪ್ಪಿಸಿಕೊಂಡು ಓಡುವುದು. ಆದರೆ ತಪ್ಪಿಸಿಕೊಂಡು ಓಡುವುದು ಸಾಧ್ಯವಾಗಿರಲಿಲ್ಲ.

ಅಲ್ಲಿ ಹಲವಾರು ಜನ ಹೆಂಗಸರಿದ್ದರೂ ಎಲ್ಲರೂ ಒಟ್ಟಿಗೆ ಸೇರಲು ಬಿಡುತ್ತಿರಲಿಲ್ಲ. ನಮ್ಮನ್ನು ಬೇರೆ ಬೇರೆ ಗುಂಪುಗಳನ್ನಾಗಿ ಬೇರ್ಪಡಿಸಲಾಗಿತ್ತು. ಆರ್ಮಿ ಬೇಸ್ ಹೊರಗಡೆ ಕಂಫರ್ಟ್ ಹೌಸ್ ಮಾಡಲಾಗಿತ್ತು. ಸಾಮಾನ್ಯ ಸೈನಿಕರು ಬೆಳಗ್ಗೆ 8 ರಿಂದ ಸಂಜೆ 5 ಗಂಟೆಯವರೆಗೆ ನಮ್ಮೊಂದಿಗೆ ಇರುತ್ತಿದ್ದರು. ಮೇಲ್ದರ್ಜೆ ಸೈನಿಕ ಅಧಿಕಾರಿಗಳು ಸಂಜೆ 7 ಗಂಟೆಗಳ ನಂತರ ಬರುತ್ತಿದ್ದರು. ವಾರದ ದಿನಗಳಲ್ಲಿ 15 ಜನ ಗಂಡಸರು ನನ್ನ ಬಳಿ ಬರುತ್ತಿದ್ದರು. ಆದರೆ ವಾರದ ಕೊನೆಯ ದಿನಗಳು ಅತ್ಯಂತ ಭಯಾನಕವಾಗಿತ್ತು. ವಾರದ ದಿನಗಳಲ್ಲಿ ಕುಳಿತು ವಿಶ್ರಾಂತಿಯನ್ನು ಪಡೆಯಲು ಸ್ವಲ್ಪ ಸಮಯವಾದರೂ ಇರುತ್ತಿತ್ತು. ಆದರೆ ಭಾನುವಾರಗಳಲ್ಲಿ ವಿಶ್ರಾಂತಿಯ ಬಗ್ಗೆ ಯೋಚಿಸಲು ಸಾಧ್ಯವಾಗುತ್ತಿರಲಿಲ್ಲ. ಒಬ್ಬರ ನಂತರ ಒಬ್ಬರು ಬರುತ್ತಿದ್ದರು. ಎಷ್ಟು ಸೈನಿಕರು ಬಂದು ಹೋಗಿದ್ದಾರೆಂಬುದನ್ನು ನೆನಪಿಸಿಕೊಳ್ಳುವುದು ಅಸಾಧ್ಯವಾಗಿತ್ತು. ಬಹುಶಃ 10 ಜನರು ಅಥವಾ 50 ಜನರಿಗಿಂತ ಹೆಚ್ಚು. ಪ್ರತಿಯೊಬ್ಬ ಸೈನಿಕನು ಒಂದು ಟಿಕೆಟ್ ಹಾಗೂ ನಿರೋಧ್ ಪೊಟ್ಟಣದೊಂದಿಗೆ ಬರುತ್ತಿದ್ದನು. ಸಂಜೆಯ ವೇಳೆಯಲ್ಲಿ ಟಿಕೆಟ್‌ಗಳನ್ನು ಆಡಳಿತಾಧಿಕಾರಿಗೆ ಕೊಡುತ್ತಿದ್ದೆ. ಅವನು ಸೈನಿಕರನ್ನು ಹೊರಗೆ ಅಟ್ಟುತ್ತಿದ್ದ, ಆ ಆಡಳಿತಾಧಿಕಾರಿಯು ಜಪಾನಿಯನಾಗಿದ್ದ. ಟಿಕೆಟ್ ನೀಡಿ ಹಣ ಪಡೆಯಬೇಕೆಂದು ನನಗೆ ಗೊತ್ತಿರಲಿಲ್ಲ. ಹಣ ನೀಡುವುದರ ಬದಲಿಗೆ ಊಟ, ಬಟ್ಟೆ ಮತ್ತು ಅಲಂಕಾರ ವಸ್ತುಗಳನ್ನು ಅಗತ್ಯವಿದ್ದಾಗ ಕೊಡುತ್ತಿದ್ದ. ಜಪಾನ್ ಯುದ್ಧದಲ್ಲಿ ಗೆದ್ದರೆ ನಮಗೆ ಹೆಚ್ಚು ಹಣವನ್ನು ನೀಡುತ್ತೇವೆಂದು ಹೇಳುತ್ತಿದ್ದ.

ವಿಶ್ರಾಂತಿಯ ವೇಳೆಯಲ್ಲಿ ಎಲ್ಲಾ ಯುವತಿಯರು ಒಟ್ಟಿಗೆ ಕುಳಿತು ಅಳುತ್ತಿದ್ದೆವು. ನಾವು ಮನೆಗೆ ಹೋಗಬೇಕಾದರೆ ಜಪಾನ್ ಯುದ್ಧದಲ್ಲಿ ಗೆಲ್ಲಬೇಕೆಂದು ಯೋಚಿಸುತ್ತಿದ್ದೆವು. ಜಪಾನಿಯರ ಗೆಲುವಿಗಾಗಿ ಪ್ರಾರ್ಥಿಸುತ್ತಿದ್ದೆವು.

ಒಳ್ಳೆ ಮತ್ತು ಹೆಚ್ಚು ಶುಚಿ ಇರುವಂತಹ ಊಟ ಕೊಡುತ್ತಿದ್ದರು. ಲೈಂಗಿಕ ಸುರಕ್ಷತೆಗಾಗಿ ವಾರಕ್ಕೊಮ್ಮೆ ಚಿಕಿತ್ಸೆಗಾಗಿ ಹೋಗುತ್ತಿದ್ದೆವು. ನನ್ನ ಆರೋಗ್ಯ ಚೆನ್ನಾಗಿದ್ದ ಕಾರಣ

ಕಾಯಿಲೆಗಳಿಗೆ ಒಳಗಾಗುತ್ತಿರಲಿಲ್ಲ. ಕೆಲವೊಮ್ಮೆ ಅನೇಕ ಗಾಯಗಳಿಗೆ ಒಳಗಾಗಿದ್ದೆ. ನಾನು ಗಾಯಗೊಳ್ಳುತ್ತಿದ್ದಾಗ ಮತ್ತೆ ಗಾಯವಾಸಿಯಾಗುವವರೆಗೂ ವಿಶ್ರಾಂತಿಯನ್ನು ಪಡೆಯುತ್ತಿದ್ದೆ. ನಂತರ ಎಂದಿನಂತೆ ಸೈನಿಕರಿಗೆ ತೃಪ್ತಿ ಪಡಿಸುವುದಕ್ಕೆ ಕಳುಹಿಸುತ್ತಿದ್ದರು.

2 ವರ್ಷಗಳ ನಂತರ ಈ ನರಕಯಾತನೆಯ ಜೀವನದಿಂದ ನಮ್ಮನ್ನು ಹಾಂಗ್‌ಕಾಂಗ್‌ಗೆ ಕರೆದುಕೊಂಡು ಹೋಗಲಾಗಿತ್ತು. ಒಂದು ಕಡೆ ಹಾಂಗ್‌ಕಾಂಗ್ ಮತ್ತೊಂದು ಕಡೆ ಕಿವ್ರ್ಯು (Kewrew) ಎಂಬ ಸಮುದ್ರವಿದ್ದಿತು. ನಾವು ಅಲ್ಲಿ ಇದ್ದಾಗ, ಎಷ್ಟೋ ಜಪಾನಿನ ಸೈನಿಕರು ಈ ಪರ್ಯಾಯ ದ್ವೀಪವನ್ನು ವಶಪಡಿಸಿಕೊಳ್ಳುವುದಕ್ಕಾಗಿ ಹೋಗಿ ಕೊಲ್ಲಲ್ಪಟ್ಟಿದ್ದರು. ಸಾಮಾನ್ಯ ಜನರು ನೀರಿನ ಮೇಲೆ ಎಣ್ಣೆ ಸುರಿದು ಬೆಂಕಿ ಹಚ್ಚಿದ್ದರು ಎಂದು ಕೇಳಲ್ಪಟ್ಟಿದ್ದೆ.

ನಮ್ಮನ್ನು ಹಾಂಗ್‌ಕಾಂಗ್‌ನಿಂದ ಸಿಂಗಪುರಕ್ಕೆ ರವಾನಿಸಲಾಯಿತು. ಸಿಂಗಪುರದಲ್ಲಿ 'Camfort house' ಉದ್ದನೆಯ ಕಟ್ಟಡವಾಗಿದ್ದು ಸಣ್ಣಸಣ್ಣ ಕೊಠಡಿಗಳನ್ನಾಗಿ ವಿಂಗಡಿಸಲಾಗಿತ್ತು. ಅಲ್ಲಿ ತುಂಬಾ ಬಿಸಿ ಇತ್ತು. ಮತ್ತೆ ಸಿಂಗಾಪುರದಿಂದ ಮಲೇಶಿಯಾಕ್ಕೆ, ನಂತರ ಜಾವಾಕ್ಕೆ ಕರೆದುಕೊಂಡು ಹೋಗಲಾಗಿತ್ತು.

ನಮ್ಮನ್ನು ಹೊಸ ಜಾಗಕ್ಕೆ ಕರೆದೊಯ್ಯುವುದಕ್ಕೆ ಮೊದಲು ಒಂದು ಜಾಗದಲ್ಲಿ 2 ತಿಂಗಳು ಉಳಿಯಬೇಕಾಗುತ್ತಿತ್ತು. ಯುದ್ಧಗಳು ನಡೆಯುತ್ತಿದ್ದನ್ನು ಆಧರಿಸಿ ನಮ್ಮನ್ನು ಕರೆದುಕೊಂಡು ಹೋಗಲಾಗುತ್ತಿತ್ತು. ನಾವಿದ್ದ ಜಾಗಕ್ಕೆ 8 ಕಿಲೋಮೀಟರ್ ದೂರದಿಂದ ಬಂದೂಕಿನ ಶಬ್ದ ಕೇಳಿಸಿತ್ತು. ಏನಾದರೂ ಸೈನಿಕರು ಹೊಸ ಜಾಗವನ್ನು ಆಕ್ರಮಿಸಿಕೊಂಡಿದ್ದರೆ, ನಾವು ಅವರನ್ನು ಹಿಂಬಾಲಿಸಬೇಕಾಗಿದ್ದಿತು. ಕೆಲವು ಸೈನಿಕರು ಬೆಟ್ಟಗಳಲ್ಲಿದ್ದರು. ಅವರನ್ನು ತೃಪ್ತಿ ಪಡಿಸುವುದಕ್ಕಾಗಿ 10-10 ಜನಗಳನ್ನು ಒಳಗೊಂಡ ಗುಂಪುಗಳಾಗಿ ಅಲ್ಲಿಗೆ ಹೋಗುತ್ತಿದ್ದೆವು. ಒಂದು ವಾರ ಅಲ್ಲೇ ಇದ್ದು ನಂತರ ವಾಪಸ್ಸಾಗಿದ್ದೆವು.

ಈ ರೀತಿ ಸೈನಿಕರೊಂದಿಗೆ ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಪ್ರಯಾಣ ಮಾಡಿ ಬಡಪಾಗಿ ಹೋಗುತ್ತಿದ್ದೆವು. ನಾನು ಸೈನಿಕರೊಂದಿಗೆ ಅನೇಕ ಫೋಟೋಗಳನ್ನು ತೆಗೆಸಿಕೊಂಡಿದ್ದೆ. ಆದರೆ ಈಗ ನನ್ನ ಬಳಿ ಒಂದೂ ಇಲ್ಲ. ನಾನು Camfort houseನಲ್ಲಿ ಇದ್ದಂತಹ ಸಂದರ್ಭದಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುತ್ತಿದ್ದೆ. ನಾನು ಜಾಗ ಬದಲಾಯಿಸಿದಾಗಲೆಲ್ಲ ನನ್ನ ಹೆಸರನ್ನು ಬದಲಾಯಿಸಿಕೊಳ್ಳುತ್ತಿದ್ದೆ.

ಆಗ ಎಲ್ಲ ಗುಂಪಿನವರು ಮನೆಯ ಹೆಸರುಗಳನ್ನು ಹೊಂದಿದ್ದೆವು. ನಾನು 'ಕೊ, ಹೊ' ಎಂಬ ಮನೆಯಲ್ಲಿದ್ದೆ. ಸೈನ್ಯದ ಒಂದು ಘಟಕ ಬೇರೆಯ ಕಡೆ ಹೋಗಬೇಕಾಗಿತ್ತು. ಆಗ ಅವರೊಂದಿಗೆ ಯಾವ ಗುಂಪಿನ ಹುಡುಗಿಯರು ಹೋಗಬೇಕೆಂದು ಚರ್ಚೆ ನಡೆಸಲಾಗಿತ್ತು. ನಾವು ಯಾವಾಗಲೂ ಸೈನಿಕರನ್ನು ಹಿಂಬಾಲಿಸುತ್ತಿದ್ದೆವು. ಆ ರೀತಿ ಅವರೊಂದಿಗೆ ಹೋದಾಗಲೆಲ್ಲ ನಮ್ಮ ಮನೆಯ ಹೆಸರನ್ನು ಬಳಸುತ್ತಿದ್ದೆವು. ಹಾಂಗ್‌ಕಾಂಗ್‌ನಿಂದ ಬಂದ ನಂತರ ಯಾವಾಗಲೂ ಚೈನ ಮತ್ತು ಜಪಾನಿ ಹೆಂಗಸರು ನಮ್ಮ ಗುಂಪಿನಲ್ಲಿ ಇರುತ್ತಿದ್ದರು. ಅವರು ನಮಗಿಂತ ಹಿರಿಯರಾಗಿದ್ದರು. ನಾವು ಜಪಾನಿನ ಹೆಂಗಸರೊಂದಿಗೆ ಸೇರುತ್ತಿರಲಿಲ್ಲ.

ಜಪಾನ್ ಯುದ್ಧದಲ್ಲಿ ಸೋತಿತ್ತು, ಸ್ವತಂತ್ರ ನಮಗೆ ಬಂದಿತ್ತು. ನಾವು ಇನ್ನು ನಮ್ಮ ಮನೆಗಳಿಗೆ ಹೋಗಬಹುದೆಂದು ಹೇಳಿದ್ದರು. ಜಪಾನಿನ ಸೈನಿಕರು ಏನು ಹೇಳುತ್ತಿದ್ದರೋ ಅದನ್ನು ನಾವು ನಂಬಲೇ ಬೇಕಿತ್ತು. ಯಾಕೆಂದರೆ ನಾವು ಎಲ್ಲಿ ಇದ್ದೇವೆ ಹೇಗೆ ಮನೆಗೆ ಹೋಗಬೇಕೆಂಬುದು ಗೊತ್ತಿರಲಿಲ್ಲ.

ಬೇರೆ ಬೇರೆ ಗುಂಪಿನಿಂದ ಬಂದಿದ್ದ ಒಟ್ಟು 50 ಜನ ಮಹಿಳೆಯರನ್ನು 16 ಆಸ್ಪತ್ರೆಗಳಲ್ಲಿ ಇರಿಸಿದ್ದರು. ಆಸ್ಪತ್ರೆಯಲ್ಲಿ ನಮಗೆ ಅವರು ಚಿಕಿತ್ಸೆಯ ಮೂಲಭೂತ ನೈಪುಣ್ಯತೆಗಳನ್ನು ಕಲಿಸಿದ್ದರು ಹಾಗೂ ಆಸ್ಪತ್ರೆಯನ್ನು ಸ್ವಚ್ಛಗೊಳಿಸುವ ಕೆಲಸವನ್ನು ನಮ್ಮಿಂದ ಮಾಡುಸುತ್ತಿದ್ದರು.

ನನ್ನ ಸಂಬಂಧಿಕಳ ಗಂಡನೊಬ್ಬ ನನ್ನನ್ನು ಆಸ್ಪತ್ರೆಯಲ್ಲಿ ಗುರುತಿಸಿದ್ದ. ನನ್ನ ಫೋಟೋದೊಂದಿಗೆ ಅಲ್ಲಿಗೆ ಬಂದಿದ್ದ. ತೈವಾನ್‌ನಿಂದ ಗ್ಯಾಂಗ್‌ಡಾಂಗ್‌ಗೆ ಹೋಗುವ ಮುಂಚೆ ನಮ್ಮ ಕುಟುಂಬದವರಿಗೆ ನಾನು ಚೆನ್ನಾಗಿದ್ದೇನೆ ಎಂದು ತಿಳಿಸಲು ಒಂದು ಪತ್ರ ಬರೆದಿದ್ದೆ. ನನ್ನ ಫೋಟೊವನ್ನು ಅದರೊಂದಿಗೆ ಕಳಿಸಿದ್ದೆ. ನನ್ನ ಸಂಬಂಧಿಯ ಗಂಡ ತಕ್ಷಣ ದಕ್ಷಿಣ ಪೆಸಿಫಿಕ್‌ನ ಸರಬರಾಜು ವಿಭಾಗಕ್ಕೆ ಕಳಿಸಲ್ಪಟ್ಟಿದ್ದರು.

ಅವರು ಹೋಗುವ ಕಡೆ ಕೊರಿಯನ್ ಮಹಿಳೆಯರು ಇದ್ದರೆ ಅಲ್ಲಿ ನನ್ನನ್ನು ಹುಡುಕಿ ಮನೆಗೆ ಕರೆತರುವಂತೆ ನನ್ನ ತಾಯಿ ಅವರಿಗೆ ಹೇಳಿದ್ದಳು. ಅವರು ನನಗೆ ಗೊತ್ತಿರಲಿಲ್ಲ. ಆದರೆ ಅವರ ಹತ್ತಿರವಿದ್ದ ಫೋಟೋ ನಾನು ತೈವಾನ್‌ನಲ್ಲಿರುವಾಗ ನನ್ನ ಮನೆಗೆ ಕಳಿಸಿದ್ದೆ, ಎಂಬುದು ಖಚಿತವಾಗಿ ತಿಳಿದಿತ್ತು.

ನನ್ನ ಸಂಬಂಧಿಯ ಗಂಡ ನನಗೆ ತಕ್ಷಣ ರಿಸಿವಿಂಗ್ ಸೆಂಟರ್‌ಗೆ ಹೋಗುವಂತೆ ಒತ್ತಾಯಿಸಿದರು. ರಿಸಿವಿಂಗ್ ಸೆಂಟರ್‌ನಲ್ಲಿ ಮನೆಗೆ

ಹಿಂತಿರುಗುವಂತಹ ಅವಕಾಶಗಳಿದ್ದವು. ಮೊದಲಿಗೆ ನಾನು ರಿಸಿವಿಂಗ್ ಸೆಂಟರ್‌ಗೆ ಹೋಗುವುದು ಬೇಡವೆಂದು ಆಸ್ಪತ್ರೆಯವರು ನಿರಾಕರಿಸಿದರು. ಕಾರಣ ನಾನು ವ್ಯಕ್ತಿಯಾಗಿ ಅಲ್ಲಿಗೆ ಹೋಗಲು ಸಾಧ್ಯವಿರಲಿಲ್ಲ. ಆದರೆ ನನ್ನ ಸಂಬಂಧಿಯ ಗಂಡ ನನ್ನ ಜವಾಬ್ದಾರಿಯನ್ನು ಸಂಪೂರ್ಣವಾಗಿ ವಹಿಸಿಕೊಳ್ಳುತ್ತೇನೆಂದು ಒತ್ತಾಯಿಸಿ ವಚನವಿತ್ತ ಮೇಲೆ ಆಸ್ಪತ್ರೆಯವರು ಒಪ್ಪಿಗೆ ನೀಡಿದರು. ಸುಮಾರು 20 ಜನ ಹೆಂಗಸರೊಂದಿಗೆ ನಾನು ರಿಸಿವಿಂಗ್ ಸೆಂಟರ್‌ಗೆ ಹೋದೆ.

ಸೆಂಟರ್‌ನಲ್ಲಿ 200ಕ್ಕೂ ಹೆಚ್ಚು ಮಹಿಳೆಯರಿದ್ದರು. ಅವರೆಲ್ಲ ಅಲ್ಲಿ ಎತ್ತರವಾಗಿದ್ದು, ಉದ್ದನೆಯ ಮೂಗುಳ್ಳವರಾಗಿದ್ದರು. ಅಮೆರಿಕನ್ ಸೈನಿಕರನ್ನು ನಾನು ಪ್ರಥಮ ಬಾರಿಗೆ ನೋಡಿದ್ದು ಅಲ್ಲೆ.

ಸೆಂಟರ್‌ನಲ್ಲಿ ಗಂಡಸರು ಮತ್ತು ಹೆಂಗಸರು ಒಂದು ತಂತಿಯ ಬೇಲಿ ಮೂಲಕ ಬೇರ್ಪಡಿಸಿದ್ದರು. ಅಕ್ಕ ಪಕ್ಕದಲ್ಲಿ ಉಗ್ರಾಣಗಳಿದ್ದವು. ನಮಗೆ ಊಟ ಕೊಡಲು ಗಂಡಸರು ಬರುತ್ತಿದ್ದರು. ಕೆಲವೊಮ್ಮೆ ಅಮೆರಿಕನ್ ಸೈನಿಕರು ಕೆಲವು ಜನರೊಂದಿಗೆ ತನಿಖೆ ನಡೆಸಲು ಬರುತ್ತಿದ್ದರು. ಅದು ಬಿಟ್ಟರೆ ಅವರು ನಮ್ಮ ಮಧ್ಯೆ ಪ್ರವೇಶಿಸುತ್ತಿರಲಿಲ್ಲ.

ಕೊರಿಯಾ ಗಂಡಸರು ಹೆಂಗಸರನ್ನು ನೋಡಿಕೊಳ್ಳು ತ್ತಿದ್ದರಲ್ಲದೇ, ನಮ್ಮನ್ನು ಬೇಟಿಯಾಗಲು ಬಂದವರನ್ನು ಪರೀಕ್ಷಿಸುತ್ತಿದ್ದರು. ನನ್ನ ಸಂಬಂಧಿಯ ಗಂಡನನ್ನು ಅಲ್ಲಿ ಯಾವಾಗಲೂ ನೋಡುತ್ತಿದ್ದೆ.

ಸೆಂಟರ್‌ನಲ್ಲಿ ಆಹಾರವನ್ನೂ ಮಾರಾಟ ಮಾಡುತ್ತಿದ್ದರು. ಹಣವಿದ್ದವರು ಅವನ್ನು ಕೊಂಡುಕೊಳ್ಳಬಹುದಿತ್ತು. ಆಹಾರಕ್ಕೆ ಬದಲಾಗಿ ಬಟ್ಟೆಗಳನ್ನು ಕೊಡಬಹುದಿತ್ತು. ಸೆಂಟರ್‌ನಲ್ಲಿ ನಮ್ಮ ಹೆಸರು ಮತ್ತು ವಿಳಾಸವನ್ನು ತೆಗೆದುಕೊಂಡಿದ್ದರು. ನಮ್ಮ ಜಪಾನಿನ ಹೆಸರುಗಳನ್ನು ನಾವು ಅಲ್ಲಿ ಬಳಸುವಂತಿರಲಿಲ್ಲ.

ಮುಂಜಾನೆಯಲ್ಲಿ ನಾವು ಕೊರಿಯಾದ ರಾಷ್ಟ್ರಗೀತೆಯನ್ನು ಹಾಡುತ್ತಿದ್ದೆವು. ರಿಸಿವಿಂಗ್ ಸೆಂಟರ್‌ನಲ್ಲಿ ನಾವು ಯಾವುದೇ ಕೆಲಸ ಮಾಡುತ್ತಿರಲಿಲ್ಲ. ಆಗಾಗ್ಗೆ ಅಮೇರಿಕಾದ ಸೈನಿಕನೊಬ್ಬ ಬಂದು ನಮ್ಮ ಬ್ಯಾಗುಗಳನ್ನು ಪರಿಶೋಧಿಸುತ್ತಿದ್ದ. ಬೆಲೆ ಬಾಳುವ ವಸ್ತುಗಳನ್ನು ಸೆಂಟರ್‌ನಿಂದ ತೆಗೆದುಕೊಂಡು ಹೋಗುವಾಗ ಯಾರಾದರೂ ಸಿಕ್ಕಿ ಬಿದ್ದರೆ ಅವರನ್ನು ಹೋಗಲು ಬಿಡುತ್ತಿಲಿಲ್ಲ. ಹಾಗಾಗಿ ಹಡಗು ಏರುವುದಕ್ಕೆ ಮುಂಚೆ ಪ್ರತಿಯೊಬ್ಬರು ತಮ್ಮ ಅಮೂಲ್ಯ ವಸ್ತುಗಳನ್ನು ಅಲ್ಲಿರುವವರಿಗೆ ಕೊಟ್ಟು ಅದನ್ನು ಮಾರಿ ಆಹಾರವನ್ನು ಕೊಂಡುಕೊಳ್ಳುವಂತೆ ಹೇಳಿ ಹೋಗುತ್ತಿದ್ದರು.

ರಿಸಿವಿಂಗ್ ಸೆಂಟರ್‌ನಲ್ಲಿ ಒಂದು ವರ್ಷ ಕಳೆದ ನಂತರ, ನಾನು ಹಡಗಿನಲ್ಲಿ ಮನೆಗೆ ಹೊರಟಿದ್ದೆ. ನಾನು ಮನೆಗೆ ಹೋಗುವುದಕ್ಕೆ ಅತ್ಯಂತ ಹೆಚ್ಚು ಸಮಯ ತೆಗೆದುಕೊಂಡಿತ್ತು. ಹೆಂಗಸರು ಗಂಡಸರು 3,000 ಜನರಿದ್ದರು. ಅವರಲ್ಲಿ ತುಂಬಾ ಮಹಿಳೆಯರು ಯುದ್ಧದ ಸಮಯದಲ್ಲಿ ಆರಾಮವಾಗಿದ್ದರು. ಅದರಲ್ಲಿ ಕೆಲವು ಹೆಂಗಸರು ತಮ್ಮ ಗಂಡಂದಿರ ಜೊತೆಗೆ ತಮ್ಮ ಸಣ್ಣಪುಟ್ಟ ವ್ಯವಹಾರ ನಡೆಸಲು ಬಂದವರಾಗಿದ್ದರು. ಹಡಗಿನಲ್ಲಿ ನಮಗೆ ಹೆಚ್ಚು ಆದ್ಯತೆಯನ್ನು ಕೊಡಲಾಗಿತ್ತು.

ಪೂಸನ್‌ನಲ್ಲಿ ಹಡಗು ನಿಲ್ಲಿಸಲು ಅವಕಾಶ ಕೊಟ್ಟಿರಲಿಲ್ಲ. ಪ್ರಯಾಣದ ಸಮಯದಲ್ಲಿ ಪ್ರಯಾಣಿಕನೊಬ್ಬ ಕಾಲರದಿಂದ ಸತ್ತದ್ದರಿಂದ ಅವಕಾಶ ನೀಡಿರಲಿಲ್ಲ. ಆದಾಗ್ಯೂ ನನ್ನ ಸಂಬಂಧಿಯ ಗಂಡ ಪೂಸನ್ ತೀರದಲ್ಲಿರುವವರಿಗೆ ನಾವು ಮನೆಗೆ ಬಂದಿದ್ದೇವೆಂದು ತಿಳಿಸಿದರು. ಆ ಕುಟುಂಬದ ವ್ಯವಹಾರ ಮೀನುಗಾರಿಕೆಯಾಗಿತ್ತು. ಹಾಗಾಗಿ ನಮ್ಮ ಹಡಗು ಬಂದು ತಲುಪಿದ್ದರ ಬಗ್ಗೆ ನಮ್ಮ ಕುಟುಂಬಕ್ಕೆ ಪತ್ರ ಬರೆಯಲು ಸಾಧ್ಯವಾಯಿತು. ನನ್ನ ಸಂಬಂಧಿಕರು ಹಾಗೂ ಅಕ್ಕಂದಿರು ಬಂದದ್ದಲ್ಲದೆ ನಮಗೆ ಕಿಮ್‌ಚಿ ಹಾಗೂ ಇತರ ಆಹಾರಗಳನ್ನು ತಂದರು. ನಾವು ನಮ್ಮ ಪ್ರಯಾಣಿಕರೊಂದಿಗೆ ಇದನ್ನು ಹಂಚಿಕೊಂಡೆವು.

ವಾರದ ನಂತರದ ಅಧಿಕಾರಿಗಳಿಗೆ ಕಾಲರದಿಂದ ಪ್ರವಾಸಿಗ ಸತ್ತಿಲ್ಲ ಎಂದು ತಿಳಿದುಬಂದದ್ದರಿಂದ ನಮ್ಮ ಹಡಗನ್ನು ನಿಲ್ಲಿಸಲು ಅವಕಾಶ ಕೊಟ್ಟಿದ್ದರು. ನಾವು ತೀರದಲ್ಲಿ ಇಳಿಯುವಷ್ಟರಲ್ಲೇ ರಾತ್ರಿಯಾಗಿತ್ತು.

ನಮ್ಮ ಸಾಮಾನುಗಳ ಜೊತೆಗೆ ಕೊಠಡಿಗೆ ಹೋಗಲು ಹೇಳಲಾಯಿತು. ಅಲ್ಲಿ ಕೊರಿಯಾ ಹಾಗೂ ಅಮೆರಿಕದ ಶೋಧಕರು ನಮ್ಮಲ್ಲಿರುವ ಹಣವನ್ನೆಲ್ಲ ಕೊಟ್ಟುಬಿಡಲು ಹೇಳಿದ್ದರು. ಅವರು ಅದರ ಬದಲಿಗೆ ರೈಲಿನ ಟಿಕೆಟ್ ಹಾಗೂ 1,000 ಎನ್‌ಗಳನ್ನು ಕೊಟ್ಟಿದ್ದರು.

ನಾನು ಮನೆಗೆ ಹಿಂದಿರುಗಿದ್ದಾಗ 23 ವರ್ಷಗಳಾತ್ತು. ನಾನು ಮನೆ ಬಿಟ್ಟಾಗ 16 ವರ್ಷದವಳಾಗಿದ್ದೆ. ಒಟ್ಟು 8 ವರ್ಷಗಳ ಕಾಲ ಹೊರಗೆ ಇದ್ದೆ. ನನ್ನ ಅಕ್ಕಂದಿರು ಮತ್ತು ನನ್ನ ತಂಗಿಯು ಸಹ ಅವರವರ ಕುಟುಂಬಗಳೊಂದಿಗೆ ಜಪಾನಿಗೆ ಹೋಗಿದ್ದರು. ಯಾಂಗ್‌ಸಾನ್‌ನ ಮನೆಯಲ್ಲಿ ನನ್ನ ತಾಯಿ ಮಾತ್ರ ಇದ್ದರು.

ನಾನು ನನ್ನ ಮನೆಯಲ್ಲಿ ಒಬ್ಬೊಂಟಿಯಾಗಿದ್ದೆ. ನಾನು ಇಲ್ಲಿಂದ ಹೋದ ಮೇಲೆ ಇನ್ನು ಅನೇಕರನ್ನು ನನ್ನಂತೆ

ಕರೆದುಕೊಂಡು ಹೋಗಿರುವುದಾಗಿ ತಿಳಿದಿತ್ತು. ಯಾರು ಸಹ ಅವರಿಗೆ ಯುದ್ಧದ ಸಮಯದಲ್ಲಿ ತಮಗೆ ಏನಾಯಿತು ಎಂದು ಹೇಳಿರಲಿಲ್ಲ. ಕಂಫರ್ಟ್ ಮನೆಗೆ ಯಾರು ಹೋಗಿದ್ದರೆಂಬ ವಿಚಾರವೇ ನನಗೆ ತಿಳಿದಿರಲಿಲ್ಲ. ಅವರು ಕಾರ್ಖಾನೆಗಳಲ್ಲಿ ಅಥವಾ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದೆವೆಂದು ಹೇಳುತ್ತಿದ್ದರು. ನಿಜವೆಂದರೆ ನಾನು ಸಹ ಯುದ್ಧದ ಸಮಯದಲ್ಲಿ 16ನೇ ಮಿಲಿಟರಿ ಆಸ್ಪತ್ರೆಯಲ್ಲಿದ್ದೆ ಎಂದು ತಿಳಿಸಿದ್ದೆ.

ಅವರು ನಾನು ಹೇಳಿದ್ದನ್ನು ನಂಬಿದ್ದರು. ಏಕೆಂದರೆ ನಾನು ಅನೇಕ ವಯಸ್ಸಾದವರಿಗೆ ಇನ್‌ಜೆಕ್ಷನ್ಸ್ ಕೊಡುತ್ತಿದ್ದೆ. ಹಾಗೂ ಅನೇಕ ಔಷಧಿಗಳ ಬಗ್ಗೆ ತಿಳಿದಿದ್ದೆ. ಹಳ್ಳಿಗಾಡು ಪ್ರದೇಶಗಳಲ್ಲಿ ಡಾಕ್ಟರ್ಸ್ ಇರಲಿಲ್ಲ.

ನನ್ನ ತಾಯಿ ಮತ್ತು ನನ್ನ ಅಕ್ಕ ಮಾತ್ರ ನನ್ನ ಕಂಫರ್ಟ್ ಮನೆಯ ಜೀವನದ ಸತ್ಯಾಂಶವನ್ನು ಬಲ್ಲವರಾಗಿದ್ದರು. ಉಳಿದ ಸಹೋದರಿಯರು ಅವರಿಂದ ನನ್ನಕಥೆ ತಿಳಿದುಕೊಂಡಿದ್ದರು.

ಈ ಸಂದರ್ಭದಲ್ಲಾಗಲೇ ನನ್ನ ಸಹೋದರಿಯರು ಅವರ ಮಕ್ಕಳೊಂದಿಗೆ ಚೆನ್ನಾಗಿ ಬದುಕುತ್ತಿದ್ದು ನನಗೆ ಅಸೂಯೆಯನ್ನುಂಟು ಮಾಡಿತ್ತು. ಪ್ರಾರಂಭದಲ್ಲಿ ನನ್ನ ತಾಯಿಗೂ ಸಹ ನನ್ನ ರಹಸ್ಯದ ಬಗ್ಗೆ ತಿಳಿಯದಿದ್ದ ಕಾರಣ ನನ್ನ ಮದುವೆಯ ಬಗ್ಗೆ ಮಾತಾನಾಡುತ್ತಿದ್ದರು. ನಾನು ಆಗ ಅವರಿಗೆ ನನ್ನ ಕಂಫರ್ಟ್ ಮನೆಯ ಜೀವನದ ಬಗ್ಗೆ ಅನಿವಾರ್ಯವಾಗಿ ಹೇಳಲೇ ಬೇಕಾಗಿತ್ತು. ಆ ನಂತರ ಅವರು ನನ್ನ ಮದುವೆಯ ಯೋಚನೆಯನ್ನು ಬಿಟ್ಟಿದ್ದರು.

ಕಂಫರ್ಟ್ ಮನೆಯಲ್ಲಿ ನನ್ನ ಜೊತೆಗಿದ್ದ ಹುಡುಗಿಯರು ಟಾಂಗ್‌ಯಾಂಗ್ ಮತ್ತು ಕೊ ಜೋನಲ್ಲಿದ್ದರು. 25 ಮತ್ತು 26 ವರ್ಷಗಳ ವಯಸ್ಸಿನವರಾಗಿದ್ದು ಯಾವುದೇ ನೈಪುಣ್ಯತೆಗಳು ಗೊತ್ತಿಲ್ಲದೆ ಅವರು ವೇಶ್ಯಾವಾಟಿಕೆ ಮಾಡುತ್ತಿದ್ದರು. ಅವರಿಗೆ ಆ ಕೆಲಸ ಅಸಹನೀಯವಾಗಿದ್ದಲ್ಲವೇ ಎಂದು ಕೇಳಿದಾಗ, ತಮಗೆ ಗೊತ್ತಿರುವುದೇ ಅಂದು ಎಂದು ಹೇಳಿದ್ದರು.


ನಾನು ಒಂದು ಸಾರಾಯಿ ಅಂಗಡಿಯನ್ನು ಇಟ್ಟಿದ್ದೆ, ಏಕೆಂದರೆ ನನಗೆ ಅದು ಒಂದೇ ವ್ಯವಹಾರ ಗೊತ್ತಿದ್ದುದು. ಒಬ್ಬೊಂಟಿಯಾಗಿ ಕೆಲಸ ನಡೆಸಲು ಕಷ್ಟವಾಗಿತ್ತು. ಈ ಮನೆತನದಂತಹ ಹುಡುಗಿ ಜಪಾನಿಗೆ ಹೋಗಿ ಒಂದು ಸಾರಾಯಿ ಅಂಗಡಿ ನಡೆಸುತ್ತಿದ್ದ ಬಗ್ಗೆ ಅನೇಕರು ಮಾತಾನಾಡಿಕೊಳ್ಳುತ್ತಿದ್ದರು. ಹಾಗಾಗಿ ವಿಚ್ಛೇದಿತನಾದ, ವಯಸ್ಸಾದವನೊಂದಿಗೆ ನಾನು ಮದುವೆಯಾಗಲು ನಿಶ್ಚಯಿಸಿದ್ದೆ.

ನಾನು ಕಂಫರ್ಟ್ ಹೆಂಗಸಾಗಿದ್ದಂತಹ ರಹಸ್ಯ ನನ್ನ ಗಂಡನಿಗೆ ಗೊತ್ತಿರಲಿಲ್ಲ. ಅವನು ಸತ್ತು ಇಂದಿಗೆ ಐದು ವರ್ಷಗಳಾಗಿವೆ. ಅವನ ಬಗ್ಗೆ ನನಗೆ ತುಂಬಾ ದುಃಖವೆನಿಸುತ್ತದೆ. ನನಗೆ ಮಕ್ಕಳೇ ಆಗಲಿಲ್ಲ. ಹಾಗಾಗಿ ಅವನ ವಂಶೋದ್ಧರಕ ಯಾರು ಇರಲಿಲ್ಲ. ನನಗೇಕೆ ಮಕ್ಕಳಾಗಲಿಲ್ಲವೆಂದು ತಿಳಿಯಲು ಆಸ್ಪತ್ರೆಗೆ ಹೋಗಿದ್ದೆ, ನನ್ನಲ್ಲಿ ಏನು ತೊಂದರೆಯಿಲ್ಲವೆಂದು ಹೇಳಿದರು.

ನನ್ನ ಗಂಡನಿಗೆ ಅವನ ಸಂಬಂಧಿಕರ ಕಡೆಯ ಅಳಿಯಂದಿರು ಮತ್ತು ಸೊಸೆಯಂದಿರು ಇದ್ದರು. ಅವರೆಲ್ಲಾ ಅವನನ್ನು ತುಂಬಾ ಇಷ್ಟಪಡುತ್ತಿದ್ದರು. ಒಳ್ಳೆ ವ್ಯಕ್ತಿಯಾಗಿದ್ದು ಯಾವತ್ತು ಸಾರಾಯಿ ಕುಡಿಯುತ್ತಿರಲಿಲ್ಲ. ಆತ ಸತ್ತ ಮೇಲೆ ನಾನು ಸಾರಾಯಿ ಅಂಗಡಿ ವ್ಯವಹಾರ ಮುಂದುವರಿಸಿದ್ದೆ. ನಾನು ವ್ಯವಹಾರ ನಡೆಸುತ್ತಿದ್ದ ಅಂಗಡಿಯ ಕಟ್ಟಡವನ್ನು ಉರುಳಿಸಿದ್ದರು. ಅದರಿಂದ ಬಂದ ಪರಿಹಾರ ಹಣದೊಂದಿಗೆ ನಾನು ಈಗಿನ ಹೊಸ ಕೊಠಡಿಗೆ ಬಂದಿದ್ದೆ. ನಾನು ಈಗ ಕೆಲಸ ಹುಡುಕುತ್ತಿದ್ದೇನೆ.

ಈ ದಿನಗಳಲ್ಲಿ ನಾನು ಇಚ್ಛಿಸುತ್ತಿರುವುದೇನೆಂದರೆ ಶಾಂತವಾಗಿ ಬದುಕುವುದು, ನನ್ನ ಹಳೆಯ ಗಾಯಗಳನ್ನು ಕೆದಕದಿದ್ದರೆ ಸಾಕು, ನಾನು ಸಾಯುವ ಮುಂಚೆ ನನಗೆ ಪರಿಹಾರದ ಹಣ ಸಿಗಲೆಂದು ಬಯಸುತ್ತಿದ್ದೇನೆ.

ಮೂಲ : ಎ.ಡಬ್ಲ್ಯೂ. ಎಚ್.ಆರ್.ಸಿ.
ಪುಸ್ತಕದಿಂದ ಆಯ್ದ ಲೇಖನ
ಕನ್ನಡಕ್ಕೆ : ಲಕ್ಷ್ಮಿ ಎ.



ಯುದ್ಧ ವಿರೋಧಿಸುವ ಮಹಿಳೆಯರು

"ಮಹಿಳೆಯಾಗಿ ನನಗೆ ಯಾವುದೇ ದೇಶವೆಂಬುದಿಲ್ಲ ಮಹಿಳೆಯಾಗಿ ಇಡೀ ವಿಶ್ವವೆ ನನ್ನ ದೇಶ.

ಪ್ರಪಂಚದ ಬಹುಜನರೊಂದಿಗೆ ಈ ಕೆಳಗೆ ಸಹಿ ಮಾಡಿರುವ ಮಹಿಳಾ ಸಂಘಗಳ ನಾವು ಸೆಪ್ಟಂಬರ್ 11ರಂದು ನಡೆದ ಭೀಕರ ಕೃತ್ಯ ಹಾಗೂ ಆಫ್ಘಾನಿಸ್ತಾನದ ಮೇಲೆ ಅಮೆರಿಕ ನಡೆಸುತ್ತಿರುವ ದೂಷಣೀಯ ನೀತಿ ಎರಡನ್ನು ಖಂಡಿಸುತ್ತೇವೆ. ಸಾವಿರಾರು ಆಫ್ಘಾನಿಸ್ತಾನರ ಹತ್ಯೆ; ನಗರ ಧ್ವಂಸ; ಆಸ್ಪತ್ರೆ ಹಾಗೂ ವೃದ್ಧರ ನಿವಾಸಗಳ ಮೇಲಿನ ಬಾಂಬ್ ದಾಳಿ; ಇದಷ್ಟೆ ಅಲ್ಲದೆ ಈ ಯುದ್ಧಕ್ಕೆ ಭಯ, ನೋವಿಗೆ ಕಾರಣನಾದ ಓಸಾಮಾ ಬಿನ್‌ಲಾಡನ್ ಹಾಗೂ ತಾಲಿಬಾನ್‌ನ ಮೇಲೆ ಸೇಡು ತೀರಿಸಿಕೊಳ್ಳಲು ನಡೆಸುತ್ತಿರುವ ಪ್ರದರ್ಶನವನ್ನು ನಾವು ಖಂಡಿಸುತ್ತೇವೆ. 23 ವರ್ಷಗಳಿಂದ ಯುದ್ಧದ ಪರಿಣಾಮವಾಗಿ ನೋವನುಭವಿಸುತ್ತಿರುವ ಬಡಜನರನ್ನು ಬಲಿ ತೆಗೆದು ಕೊಳ್ಳುವುದರಿಂದ ಭಯೋತ್ಪಾದನೆಯ ಬೇರನ್ನಂತೂ ಅಳಿಸಲು ಸಾಧ್ಯವಿಲ್ಲ.

ಯಾವ ಭಯೋತ್ಪಾದಕರ ಗುಂಪನ್ನು ಇಂದು ಅಮೆರಿಕಾ ನಿರ್ಮೂಲನೆ ಮಾಡಲು ಪ್ರಯತ್ನಿಸುತ್ತಿದೆಯೋ ಅದು ಅಮೆರಿಕಾದ ಕುಮ್ಮಕ್ಕಿನ ಫಲ ಎಂದು ಎಲ್ಲರಿಗೂ ತಿಳಿದ ಸಂಗತಿ ಇದಲ್ಲದೆ ಕೆಲವರಿಗೆ ತರಬೇತಿಯನ್ನು ಕೆಲವರಿಗೆ ಸಹಕಾರವನ್ನು ಕೆಲವು ಗುಂಪುಗಳಿಗೆ ಮಾರಕಾಸ್ತ್ರ ಒದಗಿಸುವ ಮೂಲಕ, ಕೆಲವು ಕಡೆ ಅತಿಕ್ರಮಿಸಿ....ಹೀಗೆ ಇಡೀ ಪ್ರಪಂಚದಲ್ಲಿ ಸರ್ವಾಧಿಕಾರವನ್ನು ಅಮೆರಿಕಾ ನಡೆಸಿಕೊಂಡೇ ಬಂದಿದೆ. ಕೊರಿಯಾದಲ್ಲಿ ವಿಯಟ್ನಾಂ ಹಾಗೂ ಕಾಂಬೋಡಿಯಾದಲ್ಲೂ, ಲೆಬೆನಾನ್ ಇಸ್ರೇಲ್‌ನ್ನು ಆಕ್ರಮಿಸಿದಾಗ ಮಿಲಿಯಗಟ್ಟಲೆ ಜನರನ್ನು ಕೊಲ್ಲಲಾಯಿತು. "ಅಪರೇಷನ್ ಡೆಸರ್ಟ್ ಸ್ಟಾರ್ಮ್"ನಲ್ಲಿ 2,00,000 ಇರಾಕಿಯನ್ನರು ಕೊಲ್ಲಲಾಯಿತು. ಪಶ್ಚಿಮ ದಡದಲ್ಲಿ ಇಸ್ರೇಲಿಯರು ಪಾಲಿಸ್ಟೇನನ್ನು ಅಕ್ರಮಿಸಿದ್ದರ ವಿರುದ್ಧದ ಹೋರಾಟದಲ್ಲಿ ಸಾವಿರಾರು ಪಾಲಿಸ್ಟೇನಿಯರು ಮಡಿದರು ಹಾಗೇ ಯುಗೊಸ್ಲೋವಿಯಾ, ಸೊಮಾಲಿಯಾ, ಹೈಟಿ, ಚಿಲಿ, ನಿಕಾರಾಗೋವಾ, ಎಲ್‌ಸಾಲ್ವದರ್, ಡೊಮಿನಿಕನ್ ರಿಪಬ್ಲಿಕ್, ಪನಾಮಾದಲ್ಲಿ ಮಡಿದ ಮಿಲಿಯ ಜನರು ಸತ್ತಿದ್ದು ಪ್ರಭುತ್ವದ ಭಯೋತ್ಪಾದನೆಯಲ್ಲಿ.

ಇವೆಲ್ಲದರಲ್ಲಿ ಅಮೆರಿಕಾ ಒಂದೇ ಪಾತ್ರವಹಿಸಿಲ್ಲ; ಆಫ್ಘಾನಿಸ್ತಾನದಲ್ಲಿ ಕೊಲ್ಲಲಿಕ್ಕಾಗಿ ಹೋಗಿರುವ ಪಡೆಗೆ ಆರ್ಥಿಕ ನೆರವನ್ನಂತೂ ಅಮೇರಿಕಾ ಮಾಡುತ್ತಿದೆ, ರಷ್ಯಾ ಅತಿಕ್ರಮಣ ಕೂಡ



ಈ ಬಹುದೊಡ್ಡ ಸಾವಿಗೆ ಹಾಳುಗೆಡವುವಿಕೆಗೆ ಧ್ವಂಸಕ್ಕೆ ಜವಾಬ್ದಾರಿಯಾಗಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ. ಸರ್ವೇಸಾಮಾನ್ಯವಾಗಿ ಮೂಲಭೂತವಾದ ಬೇರುಬಿಟ್ಟ ಕಡೆಯಲೆಲ್ಲ ಮೊದಲು ಅದಕ್ಕೆ ಬಲಿಯಾಗುವವರು ಮಹಿಳೆಯರೇ. ಸಿ.ಐ.ಎ.ನ ಸಹಕಾರದಿಂದ ಆಫ್ಘಾನಿಸ್ತಾನದಲ್ಲಿ ಅಧಿಕಾರಕ್ಕೆ ಬಂದ ತಾಲೀಬಾನ್ ಪ್ರಭುತ್ವದ ದಬ್ಬಾಳಿಕೆಗೆ ಬಲಿಯಾದವರು ಅಲ್ಲಿಯ ಜನರು. ಅದರಲ್ಲೂ ಮಹಿಳೆಯರು ಹೆಣ್ಣುಮಕ್ಕಳ ಶಾಲೆಗಳನ್ನು ಮುಚ್ಚಲಾಯ್ತು. ಸರ್ಕಾರಿ ನೌಕರಿಯಲ್ಲಿದ್ದ ಮಹಿಳೆಯರನ್ನು ತೆಗೆದುಹಾಕಿದರು. ಶರಿಯತ್ ಕಾನೂನನ್ನು ಜಾರಿಗೆ ತಂದು ಅದರ ಪ್ರಕಾರ ನೀತಿಮೀರಿದ ಮಹಿಳೆಯರನ್ನು ಕಲ್ಲಿನಿಂದ ಸಾಯುವಂತೆ ಹೊಡೆಯುವ ಹಾಗೂ ವಿಧವೆಯರೇನಾದರು ದಾರಿ ತಪ್ಪಿದರೆಂದು ಗುಮಾನಿ ಇದ್ದರೆ ಅವರನ್ನು ಜೀವಂತ ದಹಿಸುವದಕ್ಕೆ ಅನುಮತಿ ನೀಡಿದರು.

ಪ್ರಪಂಚಾದಾದ್ಯಂತ ಇರುವ ಧಾರ್ಮಿಕ ಮೂಲಭೂತ ವಾದನ್ನು ವಿರೋಧಿಸಿ

ಧಾರ್ಮಿಕ ಮೂಲಭೂತವಾದ ಹಾಗೂ ಸೈನ್ಯದ ದಾಳಿ ಇವೆರಡೂ ಪುರುಷ ಪ್ರಧಾನತೆಯ ಎರಡು ಭಾಗಗಳು. ಇದರ ಉದ್ದೇಶವೇ ಮಹಿಳೆಯರನ್ನು ಹಾಗೂ ತುಳಿತಕ್ಕೊಳಗಾದ ಜನರನ್ನು ಅಂಕೆಯಲ್ಲಿಡುವುದು ಹಾಗೂ ಆಳುವುದೇ ಆಗಿದೆ. ಅಮೇರಿಕಾ ಅಷ್ಟೇ ಅಲ್ಲದೆ ಇತರೆ ಪಾಶ್ಚಿಮಾತ್ಯ ದೇಶಗಳಲ್ಲಿ ಅಬಾರ್ಷನ್ ಹಕ್ಕಿಗಾಗಿ ನಡೆಯುತ್ತಿರುವ ಹೋರಾಟ ಇಂಥ ಮೂಲಭೂತವಾದಿ ಸರ್ಕಾರ ಹಾಗೂ ಅದರ ನೀತಿಯ ವಿರುದ್ಧದ

ಧ್ವನಿಯೇ ಆಗಿದೆ. ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನಿಷೇಧಿಸುವ ಆಫ್ಘಾನಿಸ್ತಾನ, ಯುವತಿಯರ ಮುಖಕ್ಕೆ ಆಸಿಡ್ ಎರಚಿ ಬುರುಕಾ ಹಾಕಿಕೊಳ್ಳುವಂತೆ ನಿರ್ಬಂಧಿಸುವ ಕಾಶ್ಮೀರದ ಪ್ರಕರಣ ಲೆಸ್‌ಬಿಯನ್ ಲವ್ ಇರುವ ಚಲನಚಿತ್ರ ಎಂದು ಆಕ್ರಮಣ ಮಾಡುವ ಹಾಗೂ ವಿಧವೆಯರ ಗೋಳನ್ನು ಚಿತ್ರಿಕರಿಸಲು ಬಿಡದ ಹಿಂದೂವಾದಿಗಳ ಆಕ್ರಮಣ, ಇವೆಲ್ಲ ಮೂಲಭೂತವಾದವನ್ನು ವಿಸ್ತರಿಸಲು ಬಳಸುವ ಬೇರೆ ಬೇರೆ ವಿಧಾನಗಳು ಹಾಗೂ ಆ ಮೂಲಕ ಮಹಿಳೆಯರನ್ನು ಭಯಭೀತರನ್ನಾಗಿ ಮಾಡಿ-ಹಿಡಿತದಲ್ಲಿ ಇಟ್ಟುಕೊಳ್ಳುವ ಹುನ್ನಾರ, ಮಹಿಳಾ ಚಳುವಳಿ ಈ ಎಲ್ಲಾ ಮೂಲಭೂತವಾದವನ್ನು ವಿರೋಧಿಸುತ್ತದೆ. ಅಂಥಹ ಪ್ರಯತ್ನ ಅಮೇರಿಕಾದಲ್ಲಿರಲಿ, ಆಫ್ಘಾನಿಸ್ತಾನದಲ್ಲಿರಲಿ, ಭಾರತದಲ್ಲಿರಲಿ, ಪಾಕಿಸ್ತಾನದಲ್ಲಿರಲಿ, ಯಾಕೆಂದರೆ ಇದು ಪ್ರಜಾಪ್ರಭುತ್ವ ಹಾಗೂ ಮಹಿಳಾ ಹಕ್ಕು ಎರಡನ್ನು ಹೊಸಕಿ ಹಾಕುವುದಲ್ಲದೆ ಈವರೆಗೆ ಮಹಿಳೆಯರು ಹೋರಾಟದಿಂದ ಪಡೆದ ಸ್ವಾತಂತ್ರ್ಯವನ್ನು ಇಲ್ಲವಾಗಿಸುತ್ತದೆ.

ಯುದ್ಧವೇ ಪುರುಷ ಪ್ರಧಾನತೆ

ಪ್ರಭುತ್ವದಲ್ಲಿ, ಸಮುದಾಯದಲ್ಲಿ, ಕುಟುಂಬದಲ್ಲಿ ಯಾವ ಹಿಂಸೆಯನ್ನು ನಾವು ದಿನವೂ ವಿರೋಧಿಸುತ್ತಾ ಬರುತ್ತಿದ್ದೇವೆಯೋ ಅದರ ಮುಂದುವರಿದ ಭಾಗವೇ ನಾವು ಯುದ್ಧಗಳಲ್ಲಿ ನೋಡುವ ಹಿಂಸೆ, ಸಾವು ಹಾಗೂ ಧ್ವಂಸ. ಯುದ್ಧದ ನಂತರ ಕ್ರೌರ್ಯ ಕೂಡ ನಾವು ನೋಡಿದ್ದೇವೆ; ಸಾವಿರಾರು ಮಹಿಳೆಯರು "ಗೌರವ" ಎಂಬ ಸಮೂಹದ ದೇಶದ ಹೊರೆಯನ್ನು ಹೊತ್ತು ಯುದ್ಧಗಳ ನಂತರ ಬದುಕಿರುವುದನ್ನು ನಾವು ಕಂಡಿದ್ದೇವೆ. "ಜಜ್ಜಿದ ಮನಸ್ಸು ಹೊಡೆತದ ದೇಹದ" ಬಳುವಳಿಯೇ ಯುದ್ಧದ ಸಾಧನೆ. ಇಷ್ಟಲ್ಲದೆ 1992ರಲ್ಲಿ ಬಾಲ್ಕಾನ್ಸ್‌ನಲ್ಲಿ 20000ಕ್ಕಿಂತ ಹೆಚ್ಚಿನ ಹೆಣ್ಣು ಮಕ್ಕಳು ಹಾಗೂ ಮಹಿಳೆಯರನ್ನು ಮತ್ತು ರ್‍ವಾಂಡಾದಲ್ಲಿ 15700 ಮಹಿಳೆ ಹಾಗೂ ಮಕ್ಕಳನ್ನು ಬಲಾತ್ಕಾರಿಸಲಾಯಿತು.

ಸೈನ್ಯ ಬೀಡು ಬಿಟ್ಟ ನೆಲೆಗಳಲ್ಲಿ ಹೆಂಗಸರ ಮೇಲೆ ಹೆಚ್ಚಿನ ಒತ್ತಡ, ಜವಾಬ್ದಾರಿ ಬೀಳುವುದಲ್ಲದೆ ಅವರು ದಿನನಿತ್ಯದ ಕೆಲಸ ಮಾಡಿಕೊಳ್ಳಲು ಕೂಡ ಪರಿವಾಟಲು ಪಡುವ ಹೊರೆ ಹೊರಬೇಕಾಗುತ್ತದೆ. ಸೈನೀಕೀಕರಣ ನಮ್ಮ ಸಮಾಜದಲ್ಲಿ ಕ್ರೌರ್ಯ ಜೀವನದ ಕೊಡುಗೆ ಕೊಟ್ಟಿದೆ. ಯುದ್ಧದ ಚಿತ್ರಗಳು, ಯುದ್ಧದ ಆಟಿಕೆಗಳು ವಿಡಿಯೋ ಗೇಮ್ಸ್‌ಗಳಲ್ಲಿ, ಪ್ರತಿದಿನ ದೂರದರ್ಶನ ದಲ್ಲಿ ತೋರಿಸುವ ಹಿಂಸೆಯಿಂದಾಗಿ ಹೊಸದಾದ ಮಿಲಿಟರಿ ಸಂಸ್ಕೃತಿಯನ್ನು ಹುಟ್ಟುಹಾಕಿದೆ. ಹೀಗಾಗಿ ಮನೆಯಲ್ಲೇ ಹೆಂಗಸರ ಮೇಲಾಗುವ ಹಿಂಸೆ ಹೆಚ್ಚಾಗಿದೆ. ಮಹಿಳೆಯರಾಗಿ ನಮಗೆ ಪ್ರಾಂತ್ಯಗಳಲ್ಲಿನ ದ್ವೇಷದ ಹೆಚ್ಚಳ, ಜನಾಂಗದ ಮೇಲಿನ ದ್ವೇಷ ಹಾಗೂ ಹಿಂಸೆಗೆ ಕುಮ್ಮಕ್ಕು ಕೊಡುವುದು ಹಾಗೂ ಈ ಯುದ್ಧ ದಿಂದಾಗುವ ಗಂಭೀರ ಕಂದರ ಹಾಗೂ ಪೂರ್ವಾಗ್ರಹದ ಬಳಕೆ ನಮ್ಮಲ್ಲಿಯ ಆತಂಕವನ್ನು ಹೆಚ್ಚಿಸಿದೆ.

ಮಿಲಿಟರೀಕರಣದ ರಾಜಕೀಯ

ಭಾರತ ಮತ್ತು ಪಾಕಿಸ್ತಾನದಲ್ಲಿ ರಾಜಕೀಯದಲ್ಲಿ ಮತಾಂದಂತೆ ಬೆಳೆಯುತ್ತಿರುವುದು ಹೆಚ್ಚಿನ ಹಿಂಸೆಗೆ ಎಡೆ ಮಾಡಿಕೊಟ್ಟಿದೆ. ರಕ್ಷಣೆಯ ಹೆಸರಿನಲ್ಲಿ ಪ್ರಭುತ್ವವು ಈಗಾಗಲೇ ದಮನ ಮಾಡಲು ಪ್ರಾರಂಭಿಸಿರುವುದಲ್ಲದೆ ಭಿನ್ನಾಭಿಪ್ರಾಯವನ್ನು ಕೂಡ ಸಹಿಸದ ಸ್ಥಿತಿಗೆ ಎರಡೂ ದೇಶಗಳು ತಲುಪಿವೆ. ದೇಶದ ರಕ್ಷಣೆಯ ನೆಪದಲ್ಲಿ ಭಾರತ ಹಾಗೂ ಪಾಕಿಸ್ತಾನಗಳೆರಡೂ ಮಿಲಿಟರಿ ಬಲವನ್ನು ಹೆಚ್ಚಿಸಿವೆ. ರಾಷ್ಟ್ರೀಯ ಹಾಗೂ ಮತೀಯಾಂದತೆ ಎರಡೂ ಕಡೆ ದ್ವೇಶವನ್ನು ಸಾಧಿಸಿದರೇನೇ ದೇಶದ ಹೆಗ್ಗಳಿಕೆ ಎಂಬ ಹಂತ ತಲುಪಿವೆ. ತಮ್ಮ ದೇಶಧ ಒಗ್ಗಟ್ಟನ್ನು ಕಾಯ್ದುಕೊಳ್ಳುವ ನೆಪದಲ್ಲಿ, ಸಾಯಿಸುವ, ಅಧಿಕಾರ ಚಲಾಯಿಸುವ, ದ್ವೇಷಿಸುವ, ಊನಾಗಿಸುವ, ಹೆದರಿಸುವ ಪ್ರಕ್ರಿಯೆ ಇತರೆ ದೇಶದ ಜನರ ಮೇಲೆ ಇತರೆ ಧರ್ಮದವರ ಮೇಲೆ ಎತ್ನಿಕ್ ಗುಂಪಿನ ಮೇಲೆ ಮಾಡಲಾಗುತ್ತಿದೆ.

ಯುದ್ಧೋಪಕರಣಗಳ ಉತ್ಪಾದನೆಯ ಘಟಕದಿಂದಾಗಿ ಭಾರತ ಹೆಚ್ಚಿನ ಯುದ್ಧಕ್ಕೆ ಆಹ್ವಾನಿಸುತ್ತದಲ್ಲದೆ, ತನ್ನ ವಸ್ತುಗಳ ಬಲವನ್ನು ದಕ್ಷಿಣಾ ಏಷಿಯಾದಲ್ಲಿ ವಿಸ್ತರಿಸುವಲ್ಲಿ ಪ್ರಭುತ್ವ ಬೆಳೆಸಿಕೊಳ್ಳುತ್ತಿದೆ. 1980ರಲ್ಲಿ ಭಾರತ ತನ್ನ ಸೈನ್ಯಕ್ಕಾಗಿ ವ್ಯಯಿಸುವ ಮೊತ್ತವನ್ನು ಹೆಚ್ಚಿಸಿತು. ರೂ. 4,329 ಕೋಟಿಗಳಿಂದ 1,4500 ಕೋಟಿಯಷ್ಟನ್ನು 1989-90ರಲ್ಲಿ ಹೆಚ್ಚಿಸಿತು. 2000-2001ರಲ್ಲಿ ಅದು 66,382 ಕೋಟಿ ವ್ಯಯಿಸುತ್ತಿದೆ. ಇದು ಕೇಂದ್ರ ಸರ್ಕಾರ ಆರೋಗ್ಯ, ಶಿಕ್ಷಣ, ಮಹಿಳೆ ಮತ್ತು ಮಕ್ಕಳ ಕಲ್ಯಾಣ ಹಾಗೂ ಇತರೆ ಸಾಮಾಜಿಕ ಸೇವಾ ವೆಚ್ಚಗಳಿಗೆ ವ್ಯಯಿಸುವ ಒಟ್ಟು ಮೊತ್ತಕ್ಕಿಂತ ಅಧಿಕವಾಗಿದೆ. ಇದು ಇಡೀ ದೇಶ ಪ್ರಾಥಮಿಕ ಶಿಕ್ಷಣಕ್ಕೆ ವ್ಯಯಿಸುತ್ತಿರುವ ಮೊತ್ತದ 89%ನಷ್ಟು ಹೆಚ್ಚಿದೆ!! 5 ವರ್ಷದಿಂದೀಚೆಗೆ ಭಾರತ ತನ್ನ ಸೈನ್ಯಾ ವೆಚ್ಚವನ್ನು ದ್ವಿಗುಣಗೊಳಸಿದೆ. ಇದು ಸ್ವಾತಂತ್ರ್ಯಾನಂತರದ ಅತೀ ಹೆಚ್ಚಿನ ಏರಿಕೆ. ಇದು ನಮ್ಮ ದೇಶದ ಯುದ್ಧ ಪ್ರಾಮುಖ್ಯತೆ !! ಹಸಿವಿನಿಂದ ಸಾಯುತ್ತಿರುವರ ಕಡೆಗಿಲ್ಲದೆ ಯುದ್ಧ ಬಯಸುವವರ ಕಡೆಗೆ ಇದೆ ಎಂದು ತೋರಿಸುವ ಕೈಗನ್ನಡಿ.

ವಿಶ್ವದಲ್ಲಿ ಯುದ್ಧೋಪಕರಣಗಳ ವ್ಯವಹಾರದ ಅಂದಾಜು ಮೊತ್ತ 54.2 ಬಿಲಿಯನ್ ಡಾಲರ್ ಎಂದು ಗುರ್ತಿಸಲಾಗಿದೆ. ಇದರ ಶೇ. 50ರ ಕಡಿತ ಅಮೆರಿಕಾದಾದರೆ ಬ್ರಿಟನ್, ಫ್ರಾನ್ಸ್ ಜೊತೆಯಾಗಿ 30% ದಷ್ಟನ್ನು ರಷ್ಯಾ, ಚೈನಾ, ಜರ್ಮನ್, ಇಸ್ರೇಲ್, ಸೌತ್ ಆಫ್ರಿಕಾ, ಬೆಲ್ಜಿಯಂ ಹಾಗೂ ಇತರೆ ದೇಶಗಳು

ಉಳಿದುದರ ಹಿಡಿತವನ್ನು ತಮ್ಮದಾಗಿಸಿಕೊಂಡಿವೆ. ಅಸ್ತ್ರಗಳ ಯುದ್ಧವಾಗಿರುವುದರಿಂದ ಎಲ್ಲೆಲ್ಲೂ ಯಂತ್ರಗಳೇ ನರಮೇಧದಲ್ಲಿ, ಯುದ್ಧಗಳಲ್ಲಿ ತುಂಬಿವೆ. ವ್ಯವಸ್ಥಿತ ಹಿಂಸೆ, ಭಯ, ನರಮೇಧ, ಯುದ್ಧ ಕೊನೆಗೊಳ್ಳಬೇಕೆಂದರೆ ಸೈನ್ಯದ ಸಬಲೀಕರಣ, ಪೊಲೀಸ್ ಹಾಗೂ ಹಿಂಸೆ ಕೊಡುವ ಎಲ್ಲಾ ಮೂಲಗಳನ್ನು ಹೆಸರಿಲ್ಲದಂತೆ ನಿರ್ಮೂಲ ಮಾಡಬೇಕು. ಇದಕ್ಕೆ ಯಾವುದಾದರು ದೇಶ, ಪ್ರಭುತ್ವ ಅದರಲ್ಲೂ ಬಲಾಡ್ಯ ಅಮೆರಿಕಾದಂಥ ದೇಶ ಕಿವಿಗೊಡುವುದೇ?

ಯಾರ ಸ್ವಾತಂತ್ರ್ಯ, ಯಾರ ನ್ಯಾಯ, ಯಾರ ಪ್ರಜಾಪ್ರಭುತ್ವ?

ಸ್ವಾತಂತ್ರ್ಯಕ್ಕಾಗಿ, ನ್ಯಾಯಕ್ಕಾಗಿ, ಪ್ರಜಾಪ್ರಭುತ್ವದ ಅಸ್ತಿತ್ವಕ್ಕಾಗಿ ಈ ಹೋರಾಟ ಎಂದು ಘೋಷಿಸುತ್ತಿರುವ ಅಮೆರಿಕಾವೇ ಅನ್ಯಾಯ ಹಾಗೂ ಪ್ರಜಾಪ್ರಭುತ್ವದ ತತ್ವದ ವಿರುದ್ಧವಾಗಿ ವರ್ತಿಸುತ್ತಿದೆ. ಅಲ್ಲಿಯ ರಾಷ್ಟ್ರಾಧ್ಯಕ್ಷರು ತಮ್ಮ ಮಾತಿನಲ್ಲಿ ಹೆದರಿಸಿದ ರೀತಿ ಹೇಗಿತ್ತೆಂದರೆ "ಈಗ ನೀವು ನಮ್ಮೊಂದಿಗಿಲ್ಲ ಅಂದರೆ, ನೀವು ನಮ್ಮ ವಿರುದ್ಧ ಇದ್ದೀರ ಎಂದು ಅರ್ಥೈಸಿಕೊಳ್ಳಬೇಕಾಗುತ್ತದೆ' ಎಂದು ಘೋಷಿಸಿ ಯಾವುದೇ ದೇಶ, ಸಂಘ ಅಥವಾ ವ್ಯಕ್ತಿಗಳು ಇದರಿಂದಾಗಿ ಅವರ ವಿರುದ್ಧ ಕೆಲಸ ಮಾಡುವುದಿರಲಿ, ಈ ಸನ್ನಿವೇಶದಲ್ಲಿ ಅವರಿಗೆ ವ್ಯತಿರಿಕ್ತವಾಗಿರುವ ಇನ್ನೊಂದು ಅಭಿಪ್ರಾಯವನ್ನು ಹೇಳಲು ಕೂಡ ಸ್ವಾತಂತ್ರ್ಯವಿಲ್ಲದಂತಾಗಿದ್ದಾರೆ.

ಅಮೆರಿಕಾ ತಾನು ಕಳೆದುಕೊಂಡ 5,000 ಮಂದಿಗಳ ಜೀವದ ಬೆಲೆಗಾಗಿ ಹಗೆ ತೀರಿಸಿಕೊಳ್ಳಲು ಆಫ್ಘಾನಿಸ್ತಾನದ ಮೇಲೆ ಬಾಂಬನ್ನು ಎಸೆಯುತ್ತಿದೆ. ಹಾಗೇನಾದರೂ ಪ್ರಪಂಚದ ಇತರೇ ದೇಶಗಳು ಅದೇ ಲಾಜಿಕ್‌ಅನ್ನು ಬಳಸಬಹುದಾದರೆ; ಭೂಪಾಲ್‌ನಲ್ಲಿ ಅಮೇರಿಕಾದ ಬಹುರಾಷ್ಟ್ರೀಯ ಕಂಪನಿ ಯೂನಿಯನ್ ಕಾರ್ಬೈಡ್ ಅನಾಹುತದಿಂದಾಗಿ ಮಡಿದ 1,600 ಜನರಿಗಾಗಿ ಯಾವುದನ್ನು ಮತ್ತು ಯಾರನ್ನು ಹಾಳುಗೆಡುವೋಣ. ಅಮೆರಿಕಾದ ಬೆಂಬಲ ಇರಾಕ್‌ನಲ್ಲಿ 5,00,000 ಮಕ್ಕಳು ಮೃತರಾಗಿದ್ದಾರೆ. ಸಾವಿರಾರು ಜನ ವಿಯಟ್ನಾಂನಲ್ಲಿ ಅಮೆರಿಕಾದ ಸೈನ್ಯಾಚರಣೆ ಕೊಂದುಹಾಕಿದೆ,.......? ಎರಡನೆಯ ಮಹಾಯುದ್ಧದಲ್ಲಿ ಗೆಲವು ತಮ್ಮದೇ ಎಂದು ಖಚಿತವಾದ ನಂತರವೂ ಅಘಾತಕಾರಿ ನ್ಯೂಕ್ಲಿಯರ್ ಬಾಂಬನ್ನು ಹಿರೋಷಿಮಾ ಹಾಗೂ ನಾಗಸಾಕಿಗಳ ಮೇಲೆ ಹಾಕಿ ತನ್ನಲ್ಲಿರುವ ಪ್ರಪಂಚವನ್ನೆ ನಾಶಮಾಡುವ ಶಕ್ತಿ ತೋರಿದೆ. ಎಷ್ಟೋ ಜನರೇಷನ್ ನೋವು ಅನುಭವಿಸದ ಮೇಲು ಸರಿಪಡಿಸಲಾಗದ ಅಂತಹ ಅನಾಹುತಕ್ಕೆ ಕಾರಣರಿವರು.

ನಿಜವಾಗಿಯೂ ಅಮೆರಿಕಾ ಶಾಂತಿ ಹಾಗೂ ಪ್ರಜಾಪ್ರಭುತ್ವಕ್ಕೆ ನಾಂದಿ ಹಾಡಲು ಬಯಸಿದಲ್ಲಿ ತನ್ನ ಏಕಾಧಿಪತ್ಯದಲ್ಲಿರುವ ನ್ಯೂಕ್ಲಿಯರ್, ರಾಸಾಯನಿಕ, ಜೈವಿಕ ಅಸ್ತ್ರಗಳನ್ನು ಮೊದಲು ನಾಶ ಮಾಡಲಿ. ಶಾಂತಿಯನ್ನು ಪ್ರೀತಿಸುವ ಎಲ್ಲಾ ಜನರು ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆ. ಪ್ರಪಂಚದ ವಿವಿಧ ಮೂಲೆಗಳಲ್ಲಿ ಅದರಲ್ಲೂ ಪಶ್ಚಿಮ ಯೂರೋಪಿನ ಹತ್ತಾರು ಮಿಲಿಯ ಜನರು ಪೂರ್ಣ ಪ್ರಮಾಣದ ನ್ಯೂಕ್ಲಿಯರ್ ಅಸ್ತ್ರಗಳ ನಾಶದ ಬಗ್ಗೆ ಧ್ವನಿ ಎತ್ತಿದ್ದಾರೆ. ಆದರೆ ಅದಕ್ಕೆ ಅಮೆರಿಕಾ ಹಾಗೂ ಅದರಂತೆ ನ್ಯೂಕ್ಲಿಯರ್ ಪವರ್ ಹೊಂದಿರುವ ದೇಶಗಳು ಕಿವಿಕೊಡದೆ ಹೋಗಿವೆ. ಐರೋಪ್ಯ ಹಾಗೂ ಅಮೆರಿಕಾದ ಶಕ್ತಿಗಳು ಪ್ರಪಂಚದ ಎಲ್ಲಾ ಸಂಪನ್ಮೂಲಗಳ ಮೇಲು ಅದರಲ್ಲೂ ಅನಿಲ ನಿಧಿಗಳ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸುತ್ತಲೇ ಇದೆ ಅವರನ್ನು ಆರ್ಥಿಕ ಮುಗ್ಗಟ್ಟಿಗೆ ಸಿಕ್ಕಿಸಿ ಹಸಿವಿನಿಂದ ಸಾಯುವಂತೆಯೂ ಅವು ಮಾಡಿವೆ. ಇದೊಂದು ರೀತಿಯ ಶಾಶ್ವತ ವರ್ಗಯುದ್ಧವಾಗಿ ಪರಿಣಮಿಸಿದೆ, ಇದು ಶ್ರೀಮಂತ ಬಡವ, ಶಕ್ತ ಅಶಕ್ತರ ನಿರಂತರ ಹೋರಾಟ. ನೂರಾರು ಮಿಲಿಯ ಜನ ಹಾಗಾಗೆ ಸತ್ತಿದ್ದಾರೆ. ಅಲ್ಲದೇ 2ನೇ ಪ್ರಪಂಚದ ಯುದ್ಧದ 5 ದಶಕಗಳ ನಂತರವೂ ಜನ ಹಸಿವಿನಿಂದ, ಕಾಯಿಲೆಯಿಂದ, ಯುದ್ಧದಿಂದ, ನರಮೇಧದಿಂದ, ಹಿಂಸೆ ಭಯೋತ್ಪಾದನೆಯಿಂದ, ವಿಶಪೂರಿತವಾತಾವರಣದಿಂದ, ನಿಸರ್ಗದ ಮುನಿಸಿನಿಂದ ಸಾಯುತ್ತಲೇ ಇದ್ದಾರೆ.

ಸಮೂಹ ಮಾಧ್ಯಮಗಳೂ ಕೂಡ ಉತ್ಪಾದಕರೂ ಹಾಗೂ ಆಳುವ ವರ್ಗದ ಕೈಗೊಂಬೆಗಳಾಗಿ, ಪ್ರಜಾಪ್ರಭುತ್ವದ ಹೆಸರಿನಲ್ಲಿ ಯುದ್ಧೋನ್ಮಾದ, ರಾಷ್ಟ್ರೀಯತೆ, ದ್ವೇಶ ಮುಂತಾದುಗಳನ್ನು ಬೆಳಸುವಲ್ಲಿ ಹೆಚ್ಚಿನ ಪಾತ್ರ ವಹಿಸಿದ್ದಾರೆ. ಅಲ್ಲದೆ ಆ ಮೂಲಕ ಪ್ರಪಂಚಕ್ಕೆಲ್ಲ ಒಂದೇ ನೀತಿ ಸರ್ವಾಧಿಕಾರದತ್ತ ಎಳೆದು ದಿಕ್ಕು ತಪ್ಪಿಸುವಲ್ಲಿ ಹೆಚ್ಚಿನ ಶ್ರಮ ವಹಿಸಿದ್ದಾರೆಂದರೂ ತಪ್ಪಿಲ್ಲ.

ನಾವು ನಂಬುವುದೇನೆಂದರೆ ಇಂಥ ಯುದ್ಧ ಯಾವಾಗಲೂ ಎಂದೆಂದಿಗೂ ಮಾತುಕತೆಗೆ ಒಂದು ಪರ್ಯಾಯ ಮಾರ್ಗ ಅಲ್ಲವೇ ಅಲ್ಲ. ಪ್ರಜಾಪ್ರಭುತ್ವ ನೀತಿಯ ಬಳಸದೆ ಮಾತುಕತೆಯನ್ನು ಮಾಡುವಲ್ಲಿ ಸೋತೆವು ಎಂದು ಕೈತೊಳೆದುಕೊಳ್ಳುವುದೆಂದರೆ ಮಿಲಿಯಗಟ್ಟಲೆ ಜನರ ಕನಸುಗಳನ್ನು ಘೋರಿ ಮಾಡಿದಂತೆ ಅಷ್ಟೇ ಅಲ್ಲದೆ ಪ್ರಜಾಪ್ರಭುತ್ವದ ಅಡಿಗಲ್ಲನ್ನೇ ಅಳಿಸಿಹಾಕಿದಂತೆ.

ನಾವೇನಾದರು ಭಯೋತ್ಪಾದನೆಯನ್ನು ಅಥವಾ ಅದರ ಬಗ್ಗೆ ಮಾತನಾಡಬೇಕೆಂದರೆ ಎಲ್ಲಾ ಹಂತಗಳಲ್ಲೂ ಬೇರುಬಿಟ್ಟಿರುವ; ಕಂದಕವನ್ನು ಹೆಚ್ಚಿಸಿರುವ ವಿಚಾರಗಳ ಬಗ್ಗೆ ಮಾತನಾಡುವ, ಅನ್ಯಾದ ಬಗ್ಗೆ ಉಸಿರೆತ್ತುವ ಮೂಲಕವೇ ಆಗಬೇಕಾಗಿದೆ. ಆ ಅನ್ಯಾಯ ಬಡವ ಶ್ರೀಮಂತ ಮಧ್ಯದ್ದಿರಬಹುದು, ಹೆಣ್ಣು ಗಂಡಿನ ಮಧ್ಯದ್ದಿರಬಹುದು, ಮನುಷ್ಯ ಮತ್ತು ಪ್ರಾಕೃತಿಕವಿರಬಹುದು

ಅಸಹಾಯಕತೆ ಭಯೋತ್ಪಾದನೆಯ ಹತ್ತಿರ ಎಳೆದೊಯ್ಯುವ ಬಗ್ಗೆ ಎಚ್ಚರಿಕೆಯಿರಬೇಕು. ಮಹಿಳಾ ಚಳುವಳಿ ನಿಗಧಿತ ರೀತಿಯಲ್ಲಿ ನಡೆಯುವ ದಿನನಿತ್ಯದ ತುಳಿತವನ್ನು ಪ್ರತಿಭಟಿಸುತ್ತದೆ.

1) ಕೌಟುಂಬಿಕ ಕ್ರೌರ್ಯದ ಭಯ.
2) ಸತತ ಬಡತನ ಹಾಗೂ ಹತಾಷೆಯು ದೇಹವನ್ನೋ ಅಥವಾ ಅಂಗಾಂಗ ಮಾರುವಂತೆ ಮಾಡುವ ಪರಿ.
3) ಸಾಂಸ್ಕೃತಿಕ ಹಿಂಸೆಯಿಂದಾಗಿ ನಮ್ಮ ಮಕ್ಕಳು ಕಳೆದು ಕೊಳ್ಳುವುದು ಎಲ್ಲಾ ರೀತಿಯ ದ್ವೇಷ ಜಗಳ ಹಾಗೂ ಯುದ್ಧದಿಂದಾಗಿ ಕಳೆದುಕೊಳ್ಳುವುದನ್ನು
4) ಕೆಲಸವಿಲ್ಲದಾಗುವುದು, ಮನೆ, ಮಠ, ಕುಟುಂಬ, ಸಮುದಾಯ ಎಲ್ಲಾ ಕಳೆದುಕೊಂಡು ನಿರಾಶ್ರಿತರಾಗುವುದನ್ನು.
5) ಲೆಸ್‌ಬಿಯನ್, ಬೈಸೆಕ್ಷುಯಲ್, ಹಿಜರಾ ಹಾಗೂ ಗೇ ಜನರ ಮೌನಕ್ಕೆ ಅವರ ಮೇಲಾಗುವ ಹಿಂಸೆಗೆ ಪುರುಷ ಪ್ರಧಾನ ವ್ಯವಸ್ಥೆಯ ಸಮಾಜದ ನೀತಿಯೇ ಕಾರಣ
6) ಬದುಕಿಗಾಗಿ ವೇಶ್ಯಾವೃತ್ತಿಯ ಹೇರಿಕೆಯ ಭಯ
7) ದಿನನಿತ್ಯ ಅತ್ಯಾಚಾರದ, ಹೆಣ್ಣುಶಿಶುವಿನ ಹತ್ಯದ ವಿಧವೆಯರನ್ನುಸುಡುವ ಇತರೆ ವಿಚಾರಗಳ ಭಯದಲ್ಲೇ ಬದುಕುವುದನ್ನು ವಿರೋಧಿಸುತ್ತೇವೆ.
8) ನಾವು ಧ್ವನಿ ಎತ್ತಿದಾಗೆಲ್ಲ ನಮ್ಮನ್ನು ಬಗ್ಗಿಸುವ ಪ್ರಯತ್ನಕ್ಕೆ

ಇದು ನಮ್ಮ ಯುದ್ಧವಲ್ಲ. ಇದನ್ನು ನಾವು ವಿರೋಧಿಸುತ್ತೇವೆ. ನಮಗೆ ಈ ಯುದ್ಧದಲ್ಲಿ ನಂಬಿಕೆ ಯಾಕಿಲ್ಲವೆಂದರೆ ಇದು ನಮ್ಮ ಬದುಕಿನ ಹಕ್ಕನ್ನೇ ಕಿತ್ತುಕೊಳ್ಳುತ್ತದೆ.

ಅಂಕುರ್, ಆಕ್ಷನ್ ಇಂಡಿಯಾ, ಕೆಲರಿ, ಫೋರಂ ಎಗೆನೆಸ್ಟ್ ಸೆಕ್ಷ್ಯುಯಲ್ ಹೆರಾಸ್‌ಮೆಂಟ್(D.U) ಜಾಗೋರಿ, ಕಾಲಿ-ಫಾರ್ ವುಮನ್, ಸಹೇಲಿ, ಸಂಗಿನಿ, ಸ್ತ್ರೀ ಅಧಿಕಾರ್ ಸಂಘಟನ್. ●

ಸಹಸ್ರಮಾನದಲ್ಲೊಂದು ಹಿಂಸ್ರಾಪಶುವಿನ ಸ್ವಗತ

ಎಂ. ಮಹೇಶ್ ಬಾಣಗೆರೆ

ನೀನು ಸೃಷ್ಟಿಯನು ಸೃಷ್ಟಿಸುತ್ತ
ಸಾವನು ಸೃಷ್ಟಿಸಿದೆಯೋ....
ಸೃಷ್ಟಿಯೇ ತನ್ನ ಸಮಷ್ಟಿಗೆ
ಸಾವನು ಸೃಷ್ಟಿಸಿತೋ.....ಗೊತ್ತಿಲ್ಲ
ಆದರೆ....
ನಿನ್ನ ಸೃಷ್ಟಿಯ ಸಂಹೃತಿಗೆ
ಸಹಸ್ರ ಸಾವಿನ ಸಂಚೆಯಾಗುತ್ತಿದ್ದೇನೆ.

ಷೆಲ್‌ಶೂಲಕ್ಕೆ
ಸೂರ್ಯನನ್ನು ಸಿಕ್ಕಿಸುವ ಯೋಜನೆ ಸಿದ್ಧವಿದೆ
ಬುವಿಯ ಭ್ರೂಣಕ್ಕೆ ಅಣು
ಬಾಂಬು ಜೋಡಿಸಲಾಗಿದೆ.

ಷ್....! ಸದ್ದು!!
ನನ್ನ ಕುತಂತ್ರ ಅರಿತ
ಕ್ರಿಸ್ತು, ಬಸವ, ಪೈಗರಂಬರರ
ಕಂಗಳಲ್ಲಿ ಅವ್ಯಕ್ತ ಸಂಕಟ ಸ್ಫೋಟಗೊಳ್ಳಲಿದೆ!
ಗೊಣಗಲೆತ್ನಿಸಿದ ಶಾಂತಿಯ
ಜೊತೆ ಸಂಧಿ ಮಾಡಿಕೊಂಡಿದ್ದೇನೆ
ಕಾವೇರಿದ ರಣಕಹಳೆಯೊಂದಿಗೆ
ಗೂಳಿಗಳನು ಗುದ್ದಾಡಲು ಬಿಟ್ಟಿದ್ದೇನೆ
ಗುಂಡಿನ ಗುಟುಕು ಮಳೆಗೆ
ಮೃತ್ಯುಪಟಲ ಹರಿದಿದೆ !

ಪ್ರಪಾತ ಪತಾಕಿನಿ ಮುಂದು ಮಾನವ ಮಾರಣ ಹೋಮದ ಮೇಲೆ
ನಗು ನಗುವಿನ್ನೆನ್ನ ಸಾವಿನ ಸೆರಗು ಹಾರಿಸಿದ್ದೇನೆ
ಸಲ್ಲದ ಈ ಕೆಲಸಕ್ಕೆ ಸರ್ವಾಂತರರ್ಯಾಮಿಯೇ ಕ್ಷಮಿಸು
ಸಹಸ್ರಮಾನ ಸತ್ಕ್ರುತ್ಕ್ರಾಂತಿಯ
ಸಾವಿನ ಪ್ರಾತಃ ಸ್ಮರಣೆ ಶುರುವಾಗಿದೆ
ತೂಕಡಿಸುತ್ತಿರುವ ತುಪಾಕಿಯ
ತುಕಡಿಗೆ ಎಲೆಯಡಿಕೆ ಹಾಕಿಸಿದ್ದೇನೆ
ನಳಿಕೆಗೆ ನವ ಚೈತನ್ಯ ತುಂಬಿ
ಗಾಂಪರ ಗುಂಪಿಗೆ ಗುರಿ ಇಟ್ಟಿದ್ದೇನೆ.

ಇದು ಎನ್ನಹುಟ್ಟು ವೈರುಧ್ಯಕ್ಕೆ
ನೀನು ಶ್ರಮಪಟ್ಟ ಪುಣ್ಯ ಫಲ
ನಂಬು ಬುಡುಕೆಯಲ್ಲ, ಬ್ರಾಂತಿಯಲ್ಲ
ಬೂಟಾಟಿಕೆಯೂ ಅಲ್ಲ!

ಸರ್ವಂತರ್ಯಾಮಿಯೇ....
ಸೃಷ್ಟಿ ಸ್ವರೂಪಿಯೇ.....
ಇಷ್ಟರಲ್ಲೇ
ಸೃಷ್ಟಿಯಾಧಿ ಪತ್ಯದಿಂ
ನಿನ್ನನ್ನು ಗುಟ್ಟಾಗಿಕಿತ್ತೊಗೆಯುತ್ತೇನೆ
ಕಿರಾತ ಕರ್ಕಶ ಸರಕಾರ ಸ್ಥಾಪಿಸಿ
ಕರ್ಣ ಕಠೋರ ಕ್ರಿಯೆ ಅಜ್ಞಾಪಿಸುವ
ಕರಾಳವಾದರಸನಾಗವತರಿಸಲಿದ್ದೇನೆ
ಓಂ! ಅಂಥಾಕ್ಸ್ ! ಅಂಥಾಕ್ಸ್ ! ●

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 50 ರೂ.

ಸಂಸ್ಥೆಗಳಿಗೆ : 100 ರೂ.

ಸಂ. ಮಂಡಳಿ

REGD No. CPMG/KA/BGE/289/2001

BOOK -POST
PRINTED MATTER

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067